بِسْمِ اللهِ الرَّحْمٰنِ الرَّحِيْمِ نَحْمَدُهٗ وَنُصَلِّيْ عَلٰى رَسُوْلِهِ الْكَرِيْمِ وَعَلٰى عَبْدِهِ الْمَسِيْحِ الْمَوْعُوْدِ

وَلَقَدْ نَصَرَكُمُ اللّٰهُ بِبَدْرٍ وَّاَنْتُمْ اَذِلَّةٌ

ವರ್ಷ: 04

ಕನ್ನಡ
# ಬದರ್
ವಾರ ಪತ್ರಿಕೆ
WEEKLY BADAR QADIAN KANNADA

ಸಂಚಿಕೆ: 32

ವಾರ್ಷಿಕ ಶುಲ್ಕ ರೂ.600/–

ಸಂಪಾದಕರು: ತಾರಿಖ್ ಅಹ್ಮದ್ ಇದ್ರೀಸ್.

10 ಆಗಸ್ಟ್ 2023, 10 ಝುಹೂರ್ 1402 ಹಿಜರಿ ಶಮ್ಸಿ,
22 ಮುಹರ್‍ರಮ್ 1444 ಹಿಜರಿ ಖಮರಿ.

## ಅಹ್ಮದಿಯಾ ವಾರ್ತೆ

ಅಲ್‌ಹಮ್ದುಲಿಲ್ಲಾಹ್! ಹುಝೂರ್ ಅನ್ವರ್ ಅಯ್ಯದಹುಲ್ಲಾಹುತಆಲ ಬಿನಸ್ರಿಹಿಲ್ ಅಝೀಝ್‌ರವರು ಆರೋಗ್ಯವಾಗಿದ್ದಾರೆ. ಹುಝೂರ್ ರವರ ಯೋಗಕ್ಷೇಮಕ್ಕಾಗಿ, ಶುಭಕಾರ್ಯಗಳಲ್ಲಿ ಯಶಸ್ಸುಗಳಿಸಲಿಕ್ಕಾಗಿ ದುಆ ಮಾಡುತ್ತಾ ಇರಿ, ಅಲ್ಲಾಹನು ಹುಝೂರ್ ರವರನ್ನು ಪ್ರತಿಕ್ಷಣ ಸಂರಕ್ಷಿಸಲಿ– **ಆಮೀನ್**

اَللّٰهُمَّ اَيِّدْ اِمَامَنَا بِرُوْحِ الْقُدُسِ
وَبَارِكْ لَنَا فِيْ عُمُرِهٖ وَاَمْرِهٖ

## ಅಲ್ಲಾಹನ ಉಪದೇಶ

وَلَوْ تَرٰۤى اِذْ وُقِفُوْا عَلَى النَّارِ فَقَالُوْا
يٰلَيْتَنَا نُرَدُّ وَلَا نُكَذِّبَ بِاٰيٰتِ رَبِّنَا
وَنَكُوْنَ مِنَ الْمُؤْمِنِيْنَ ﴿۲۸﴾

**(ಅಲ್–ಅನ್‌ಆಮ್: 28)**

**ಅಂದರೆ: ಇಲ್ಲ, (ವಾಸ್ತವದಲ್ಲಿ) ಅವರು ಮುಂಚೆ ಮರೆಮಾಚಿದ್ದೆಲ್ಲ (ಆಗ) ಅವರಿಗೆ ಪ್ರತ್ಯಕ್ಷವಾಗಿರುತ್ತವೆ. (ಆದುದರಿಂದ ಅವರು ಹಾಗೆ ಹೇಳುವರು.) ಅವರನ್ನು ಹಿಂದಕ್ಕೆ ಕಳುಹಿಸಿದರೂ ತಮಗೆ ನಿಷಿದ್ಧಗೊಳಿಸಿದುದರ ಕಡೆಗೆಯೇ ಅವರು ಮರಳುವರು. ಖಂಡಿತವಾಗಿಯೂ ಅವರು ಸುಳ್ಳು ಹೇಳುವವರಾಗಿದ್ದಾರೆ.**

## ಪ್ರವಾದಿ ಮುಹಮ್ಮದ್[ಸ]ರವರ ಉಪದೇಶ

### ದುರದೃಷ್ಟವೆಂದರೆ ಯಾರಾದರು ತನ್ನ ತಂದೆ ತಾಯಿಯರಿದ್ದು ಅವರಿಗೆ ಸೇವೆ ಸಲ್ಲಿಸದಿದ್ದರೆ ಅವರು ಸ್ವರ್ಗವನ್ನು ಪ್ರವೇಶಿಸಲು ಸಾಧ್ಯವಿಲ್ಲ

**(394)** ಹ಼ಝ್ರತ್ ಅಬು ಹುರೈರಾ(ರ) ಅವರು ವರದಿ ಮಾಡುತ್ತಾರೆ ರಸೂಲುಲ್ಲಾಹ್(ಸ) ಅವರ ಸಮ್ಮುಖದಲ್ಲಿ ಓರ್ವ ವ್ಯಕ್ತಿ ಬಂದು ಕೇಳಿದನು "ಜನರಲ್ಲಿ ದಯೆಗೆ ಹೆಚ್ಚು ಅರ್ಹರು ಯಾರು?" ಅದಕ್ಕೆ ರಸೂಲುಲ್ಲಾಹ್(ಸ) ರವರು ಹೇಳಿದರು: ನಿಮ್ಮ ತಾಯಿ. ನಂತರ ಆತನು ಕೇಳಿದನು ಮತ್ತೆ ಯಾರು? ಅವರು ಹೇಳಿದರು: ನಿಮ್ಮ ತಾಯಿ. ತದನಂತರ ಯಾರು ಎಂದು ಕೇಳಿದನು. ಅದಕ್ಕೆ ಮತ್ತೆ ಅವರು ಹೇಳಿದರು: ನಿಮ್ಮ ತಾಯಿ. ಅವನು ನಾಲ್ಕನೇ ಬಾರಿಗೆ ಕೇಳಿದನು. ಮತ್ತೆ ಯಾರು? ಅದಕ್ಕೆ ರಸೂಲುಲ್ಲಾಹ್(ಸ) ಹೇಳಿದರು: ನಿಮ್ಮ ತಾಯಿಯ ನಂತರ, ನಿಮ್ಮ ತಂದೆ ನಿಮ್ಮ ಉತ್ತಮ ನಡವಳಿಕೆಗೆ ಹೆಚ್ಚು ಅರ್ಹರು ಮತ್ತು ಮುಂದಿನ ಸಂಬಂಧಿಕರಿಗಿಂತ ಹೆಚ್ಚು ಅರ್ಹರು. **(ಬುಖಾರಿ, ಕಿತಾಬ್ ಅಲ್–ಅದಾಬ್, ಅಧ್ಯಾಯ ಮನ್ ಅಹಕ್ಕನ್ನಾಸ್ ಬಿಹುಸ್ನಿ ಸ್ಸುಹ್‌ಬತಿ ವ ಮುಸ್ಲಿಂ)**

**(395)** ಹ಼ಜ್ರತ್ ಅಬು ಹುರೈರಾ(ರ) ಹೇಳುತ್ತಾರೆ ರಸೂಲುಲ್ಲಾಹ್(ಸ) ಅವರು ಹೇಳಿದರು: "ಆತನ ಮೂಗು ಮಣ್ಣಾಗಲಿ! ಆತನ ಮೂಗು ಮಣ್ಣಾಗಲಿ (ಈ ಪದಗಳನ್ನು ಅವರು ಮೂರು ಸಲ ಪುನರಾವರ್ತಿಸಿದರು) ಅಂದರೆ, ಅಂತಹ ವ್ಯಕ್ತಿಯು ಖಂಡನೀಯ ಮತ್ತು ದುರದೃಷ್ಟಕರ. ಅದಕ್ಕೆ ಜನರು ಕೇಳಿದರು ಯಾ ರಸೂಲಲ್ಲಾಹ್ ಯಾವ ವ್ಯಕ್ತಿ? ಎಂದು. ಅದಕ್ಕೆ ರಸೂಲುಲ್ಲಾಹ್(ಸ) ಅವರು ಹೇಳಿದರು: ತನ್ನ ವೃದ್ಧ ತಂದೆತಾಯಿಯರಿದ್ದು ಅವರಿಗೆ ಸೇವೆ ಸಲ್ಲಿಸದ ವ್ಯಕ್ತಿಯು ಸ್ವರ್ಗವನ್ನು ಪ್ರವೇಶಿಸಲು ಸಾಧ್ಯವಿಲ್ಲ. **(ಮುಸ್ಲಿಂ, ಕಿತಾಬ್ ಅಲ್–ಬಿರ್ ವಸ್ಸಿಲಾ) (ಮಕ್ರಮ್ ಮಲಿಕ್ ಸೈಫುರ್ ರಹಮಾನ್ ಸಾಹಿಬ್ ಲೇಖಕರಾದ ಹದೀಖತುಸ್ಸಾಲಿಹೀನ್)**

## ಹಝ್ರತ್ ಪೈಗಂಬರ್(ಸ) ರವರ ಮಹೋನ್ನತವಾದ ಅನುಗ್ರಹಿತ ಶಕ್ತಿ ಅವರು ನಿರೂಪಿಸಿದ ಜಮಾಅತನ್ನು ನೋಡುವುದಾದರೆ ಅದು ತಮ್ಮ ಸರ್ವ ಜೀವನವನ್ನು ದೇವನಿಗಾಗಿ ಮಾತ್ರ ಮುಡಿಪುಟ್ಟಿದ್ದನ್ನು ಕಾಣಬಹುದಾಗಿದೆ, ಅವರ ಈ ಜೀವನಶೈಲಿ ಅದ್ವಿತೀಯವಾಗಿದೆ.

### ಸಯ್ಯದುನಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಅಧ್ಯಾಪನೆಗಳು

ನಮ್ಮ ನಬಿ(ಸ) ರವರ ಅನುಗ್ರಹಿತ ಶಕ್ತಿ ಯಾವ ಉನ್ನತ ದರ್ಜೆಗೆ ತಲುಪಿತ್ತೆಂದರೆ ಗತಿಸಿಹೋದ ಎಲ್ಲಾ ಪ್ರವಾದಿಗಳನ್ನು ತುಲನೆ ಮಾಡಿ ನೋಡಿದರೆ ತಿಳಿಯಬಹುದು. ಅವರ ಮಟ್ಟಕ್ಕೆ ತಲುಪಿದ ನಬಿ ಯಾರೂ ಇಲ್ಲ. ಯಹೂದಿಯರು ಐಹಿಕ ಜೀವನಕ್ಕೆ ಜೋತುಬಿದ್ದ ನಾಯಿಗಳಂತಿದ್ದಾರೆ. ಕ್ರಿಸ್ತರನ್ನು ನೋಡಿದರೆ ಅವರು ಏಕದೇವತ್ವದಿಂದ ದೂರವಾಗಿದ್ದಾರೆ. ಒಬ್ಬರು ಮರಿಯಮಳನ್ನು ಪೂಜಿಸುತ್ತಾರೆ. ಇನ್ನೊಬ್ಬರು ಮಸೀಹರನ್ನು ದೇವನೆಂದು ನಂಬುತ್ತಾರೆ. ಐಹಿಕ ಲೋಕದ ಮೋಹದಲ್ಲೇ ಹಗಲಿರುಳು ಮುಳುಗಿ ಹೋಗಿದ್ದಾರೆ. ಹಝ್ರತ್ ಪೈಗಂಬರ್(ಸ) ರೂಪಿಸಿದ ಜಮಾಅತನ್ನು ನೋಡುವುದಾದರೆ, ಅದು ಸರ್ವಸ್ವ ತಮ್ಮ ಜೀವನವನ್ನು ದೇವನಿಗಾಗಿ ಮಾತ್ರ ಮುಡುಪಿಟ್ಟಿದ್ದನ್ನು ಕಾಣಬಹುದಾಗಿದೆ. ಅವರ ಈ ಜೀವನ ಶೈಲಿ ಅದ್ವಿತೀಯವಾಗಿದೆ. ಹಝ್ರತ್ ಪೈಗಂಬರ್(ಸ) ರವರ ಶುಭಕರ ಹಾಗೂ ಯಶಸ್ವಿದಾಯಕ ಜೀವನ ಚಿತ್ರಣವು ಹೇಗಿದೆ ಎಂದರೆ, ಅವರು ಯಾವ ಕಾರ್ಯಕ್ಕೆ ಬಂದಿದ್ದರು ಅದನ್ನು ಪೂರ್ತಿಕರಿಸಿ, ಓರ್ವ ಅಧಿಕಾರಿ ಹೇಗೆ ತಮ್ಮ ಕಾರ್ಯ ಐದು ವರ್ಷಗಳಲ್ಲಿ ಪೂರ್ಣಗೊಳಿಸಿ ತಮ್ಮ ಅಂತಿಮ ವರದಿಯನ್ನು ಸಲ್ಲಿಸುತ್ತಾರೆ. ಅದೇ ರೀತಿ ಪೈಗಂಬರ್(ಸ) ತಮ್ಮ ಕರ್ತವ್ಯ ನಿರ್ವಹಿಸಿ ಇಹಲೋಕ ತ್ಯಜಿಸಿದರು. ಅಂತಹ ಕಾರ್ಯಶೈಲಿ ಅವರ ಜೀವನಕ್ರಮದಲ್ಲಿ ಕಾಣಬಹುದಾಗಿದೆ. ಆ ದಿನದಿಂದ ಇಲ್ಲಿಯವರೆಗೆ **"ಖುಮ್ ಫಅಂಝಿರ್"** ಧ್ವನಿ ಬಂದಿದ್ದು ಮತ್ತೆ **"ಇಝಾ ಜಾಅ ನಸ್ರುಲ್ಲಾಹ್"** ಮತ್ತು **"ಅಲ್‌ಯೌಮ ಅಕ್ಮಲ್‌ತು ಲಕುಮ್ ದೀನಕುಂ"** ದಿನಗಳವರೆಗೆ ದೃಷ್ಟಿ ಬೀರಿದರೆ ಅವರ ಅದ್ವಿತೀಯ ಯಶಸ್ಸಿನ ಸುಳಿವು ದೊರಕುತ್ತದೆ. ಈ ವಚನಗಳಿಂದ ಸ್ಪಷ್ಟವಿದೆ. ಅವರು ವಿಶಿಷ್ಟ ರೂಪದಲ್ಲಿ ಈ ಕಾರ್ಯಕ್ಕಾಗಿ ನಿಯೋಜಿತಗೊಂಡಿದ್ದರು. ಹಝ್ರತ್ ಮೂಸಾ(ಅ) ಅವರಿಗೆ ಪ್ರವಾದಿ ಕಾರ್ಯಕ್ಕಾಗಿ ಲಬಿಸಬೇಕಾದ ರೀತಿಯ ಯಶಸ್ಸು ಅವರಿಗೆ ಲಭಿಸಲಿಲ್ಲ. ಆ ಪವಿತ್ರ ಭೂಮಿ (ಅಝ್ ಮುಕದ್ದಸ್) ವಾಗ್ದತ್ತ ಆಡಳಿತಭೂಮಿ ಅವರಿಗೆ ತಮ್ಮ ಕಣ್ಣುಗಳಿಂದ ನೋಡಲಾಗಲಿಲ್ಲ, ಅರ್ಧದಲ್ಲೇ ಅವರ ಜೀವನ ಕೊನೆಗೊಂಡಿತು. ಅವಿಶ್ವಾಸಿ ಅದನ್ನು ನಂಬಬೇಕು. ಓರ್ವ ಅವಿಶ್ವಾಸಿ ಮನುಷ್ಯ, ವಾಗ್ದಾನ ಈಡೇರಿಸುವ ಮೊದಲೇ ತೀರಿಹೋದರೆ ಪ್ರಶ್ನಿಸದೆ ಇರನು. ಅವರು(ಅ) ಈ ಕಾರ್ಯಕ್ಕಾಗಿ ನಿಯೋಜಿತರಾಗಿದ್ದರೆ ಏಕೆ ಪೂರ್ಣಗೊಳಿಸಲಿಲ್ಲ. ಸತ್ಯ ಹೇಳಬೇಕಾದರೆ ಎಲ್ಲಾ ಪ್ರವಾದಿಗಳ ಕುಂದುಕೊರತೆಗಳು ನಮ್ಮ ನಬಿ(ಸ) ರವರ ಮಾಧ್ಯಮದಿಂದಾಗಿ ಪೂರ್ಣಗೊಂಡಂತಾಯಿತು.

**(ಮಲ್ಫೂಝಾತ್, ಸಂಪುಟ–1, ಪುಟ–468, ಮುದ್ರಣ 2018 ಖಾದಿಯಾನ್)**

**ಸಾಮಾನ್ಯವಾಗಿ, ಒಬ್ಬ ವ್ಯಕ್ತಿಯು ತನ್ನ ಬಾಲ್ಯದಲ್ಲಿ ತನ್ನ ಹೆತ್ತವರು ಮಾಡಿದ ರೀತಿಯಲ್ಲಿಯೇ ಅವರಿಗೆ ಸೇವೆ ಸಲ್ಲಿಸಲು ಸಾಧ್ಯವಿಲ್ಲ**
**ಆದುದರಿಂದಲೇ ಹೇಳಲಾಯಿತು ದುಆ ಮಾಡುತ್ತಾ ಇರಬೇಕು ಅಂದರೆ "ದೇವರೇ, ನೀನು ಅವರ ಮೇಲೆ ಕರುಣೆ ತೋರು, ಇದರಿಂದ ಕಾರ್ಯದಲ್ಲಿ ಸಾದಿಸಲು ಆಗದಿರುವುದು ಪ್ರಾರ್ಥನೆಯಿಂದ ಈಡೇರುತ್ತದೆ"**

ಸಯ್ಯದ್‌ನಾ ಹಝ್ರತ್ ಮುಸ್ಲಿಹ್ ಮೌಊದ್(ರ) ಸೂರಃ ಬನೀ ಇಸ್ರಾಈಲ್ ಆಯತ್ 25 ರಿಂದ 26 **ವಖ್ಫಿಝ್‌ಲಹುಮಾ ಜನಾಹಝ್ಝುಲ್ಲಿ ಮಿನರ್ರಹ್ಮತಿ ವ ಖುರ್ರಬ್ಬಿರ್ ಹಮ್‌ಹುಮಾ ಕಮಾ ರಬ್ಬೈಯಾನಿ ಸಗೀರ; ರಬ್ಬುಕುಮ್ ಅಅ್‌ಲಮು ಬಿಮಾ ಫೀ ನುಫೂಸಿಕುಮ್; ಇನ್ ತಕೂನೂ ಸಾಲಿಹೀನ ಫಇನ್ನಹೂ ಕಾನ ಲಿಲ್ ಅವ್ವಾಬೀನ ಗಫೂರ.** ಅಂದರೆ: "ಕರುಣೆಯಿಂದ ಕೂಡಿದವನಾಗಿ ನೀನು ಅವರಿಗೆ ವಿನಯದ ಬಾಹು ತಗ್ಗಿಸಿಕೊಡು ಹಾಗೂ 'ನನ್ನ ಪ್ರಭೂ, ಅವರೀರ್ವರೂ ನನ್ನ ಬಾಲ್ಯಕಾಲದಲ್ಲಿ ನನ್ನನ್ನು ಸಾಕಿ ಸಲಹಿದಂತೆ ನೀನು ಸಹ ಅವರಿಗೆ ಕರುಣೆದೋರು' ಎಂದು ಪ್ರಾರ್ಥಿಸು." ನಿಮ್ಮ ಮನಸ್ಸಿನಲ್ಲಿರುವುದೇನೆಂದು ನಿಮ್ಮ ಪ್ರಭು ಚೆನ್ನಾಗಿ ಬಲ್ಲನು. ನೀವು ಸಜ್ಜನರಾಗಿದ್ದರೆ, ನಿಶ್ಚಯವಾಗಿಯೂ ಪಶ್ಚಾತ್ತಾಪಪಟ್ಟು ಮರಳುವವರಿಗೆ ಅವನು ಬಹಳವಾಗಿ ಕ್ಷಮೆ ನೀಡುತ್ತಾನೆ. ಇದರ ವ್ಯಾಖ್ಯಾನದಲ್ಲಿ ಹೇಳುತ್ತಾರೆ:

ಮತ್ತು ಅವರಿಗೆ, ಕರುಣೆಯಿಂದ, ನಿಮ್ಮ ವಿನಯದ ಬಾಹುಗಳನ್ನು ತಗ್ಗಿಸಿಕೊಡು. ಮತ್ತು ಓ ನನ್ನ ಪ್ರಭು, ನೀನು ಅವರ ಮೇಲೆ ಕರುಣಿಸು. ಏಕೆಂದರೆ ಅವರು ನನ್ನ ಬಾಲ್ಯದಲ್ಲಿ ನನ್ನನ್ನು ಸಾಕಿ ಸಲಹಿದ್ದಾರೆ ಎಂದು ಪ್ರಾರ್ಥಿಸುತ್ತಾ ಇರಿ.

*(ಪುಟ 06 ರಲ್ಲಿ ಮುಂದುವರಿಸಲಾಗಿದೆ)*

# ಖುತ್‌ಬ ಜುಮುಅ

**ಅಲ್ಲಾಹುಮ್ಮ ಅನ್‌ಜಿಝ್‌ಲೀ ಮಾ ವದ್‌ತನೀ– ಅಲ್ಲಾಹುಮ್ಮ ಆತಿ ಮಾ ವದ್‌ತನೀ– ಅಲ್ಲಾಹುಮ್ಮ ಇನ್ ತುಹ್‌ಲಿಕ್ ಹಾಝಿಹಿಲ್‌ಇಸಾಬತ ಮಿನ್ ಅಹ್ಲಿಲ್ ಇಸ್ಲಾಮಿ ಲಾ ತುಅ್‌ಬದ್ ಫಿಲ್ ಅರ್ಝಿ–**

ಅಂದರೆ, ಓ ಸರ್ವಶಕ್ತನಾದ ಅಲ್ಲಾಹನೇ! ನೀನು ನನಗೆ ವಾಗ್ದಾನ ಮಾಡಿದ್ದನ್ನು ಪೂರೈಸು. ಓ ಅಲ್ಲಾಹನೇ! ನೀನು ನನಗೆ ವಾಗ್ದಾನ ಮಾಡಿದ್ದನ್ನು ನನಗೆ ನೀಡು. ಓ ಅಲ್ಲಾಹನೇ! ನೀನು ಈ ಮುಸ್ಲಿಮರ ಗುಂಪನ್ನು ನಾಶಪಡಿಸಿದರೆ, ನಿನ್ನನ್ನು ಭೂಮಿಯ ಮೇಲೆ ಆರಾಧಿಸುವವರು ಯಾರೂ ಇರುವುದಿಲ್ಲ.

ಯಾ ರಸೂಲಲ್ಲಾಹ್, ಅಲ್ಲಾಹನ ಶತ್ರುಗಳು ಮುಂದೆ ಇರುವವರು. ಇಲ್ಲಿಂದ ಬಚಾವಾಗಿ ಮರಳು ಹೋಗುವೆವೋ ಇಲ್ಲವೋ ಎಂದು ಗೊತ್ತಿಲ್ಲ. ಶಹಾದತಿಗೆ ಮುಂಚೆ ನಿಮ್ಮ ಶರೀರವನ್ನು ನನ್ನ ಶರೀರದಿಂದ ಸ್ಪರ್ಶಿಸಲು ನಾನು ಬಯಸಿದೆ. – ಹಝ್ರ಼ತ್ ಪೈಗಂಬರ್(ಸ)ರೊಂದಿಗೆ ಸುವಾದ್ ಬಿನ್ ಗ಼ಝ್ಝಿಯರಿಗೆ ಇದ್ದ ಪ್ರೀತಿ ಮತ್ತು ಪ್ರೇಮದ ವಿಸ್ಮಯಕರ ಘಟನೆ

ಯುದ್ಧದ ಸಂದರ್ಭದಲ್ಲಿ ಹಝ್ರ್‌ರತ್ ಪೈಗಂಬರ್(ಸ) ಅವರು ಕೆಲವು ಜನರನ್ನು ವಧಿಸಲು ನಿಷೇಧಿಸಿದ್ದರು

ಸೈನ್ಯಗಳು ಮುಂದೆ ಬಂದಾಗ, ಯುದ್ಧವು ಪ್ರಾರಂಭವಾಗುವ ಸಂದರ್ಭದಲ್ಲಿ ಹಝ್ರ್‌ರತ್ ಪೈಗಂಬರ್(ಸ) ಸಹ ಯುದ್ಧಭೂಮಿಯಲ್ಲಿದ್ದರು. ಅವರು ಹೇಳಿದರು, ಈಗ ಸೈನ್ಯಗಳು ಪರಸ್ಪರ ಎದುರು ನಿಂತಿವೆ, ಆದರೆ ಆ ಸಮಯದಲ್ಲಿ ಸೈನ್ಯದ ವ್ಯವಸ್ಥೆಯು ಖುರೈಷರ ಇಸ್ಲಾಮಿಕ್ ಸೈನ್ಯವು ನಿಜವಾದ ಸಂಖ್ಯೆಗಿಂತ ಹೆಚ್ಚಿನದಾಗಿದೆ ಎಂದು ತೋರುತ್ತಿದೆ ಎಂಬುದು ದೈವಿಕಶಕ್ತಿಯ ವಿಚಿತ್ರ ಪ್ರದರ್ಶನವಾಗಿದೆ. ಎರಡು ಬಾರಿ. ಇದರಿಂದಾಗಿ ನಾಸ್ತಿಕರು ಭಯಭೀತರಾಗಿದ್ದರು ಮತ್ತು ಮತ್ತೊಂದೆಡೆ ಖುರೈಶ್ ಸೈನ್ಯವು ಮುಸ್ಲಿಮರಿಗೆ ಅವರ ನಿಜವಾದ ಸಂಖ್ಯೆಗಿಂತ ಕಡಿಮೆ ಕಾಣುತ್ತಿತ್ತು. ಪರಿಣಾಮವಾಗಿ, ಮುಸ್ಲಿಮರ ಹೃದಯವು ದೃಢಗೊಂಡಿತು.

**ಬದರ್ ಯುದ್ಧದ ಸಿದ್ಧತೆಗಳು, ಹಝ್ರ್‌ರತ್ ಪೈಗಂಬರ್(ಸ) ಅವರೊಂದಿಗೆ ಸಹಾಬರವರ ಅಸಮಾನ್ಯ ಪ್ರೀತಿ, ಮತ್ತು ಬದರ್ ಯುದ್ಧದ ಸಂದರ್ಭದಲ್ಲಿ ಹಝ್ರ್‌ರತ್ ಪೈಗಂಬರ್(ಸ)ರವರ ದುಆವಿನ ಬಗ್ಗೆ ವಿವರಾತ್ಮಕ ಪ್ರಸ್ತಾವನೆ**

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರ್‌ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಟಿಲ್‌ಫೋರ್ಡ್, ಯು.ಕೆ, ಇಸ್ಲಾಮಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **30–06–2023** ರಂದು ನೀಡಿದ **ಖುತ್‌ಬ ಜುಮುಅ**

أَشْهَدُ أَنْ لَّا إِلٰهَ إِلَّا اللّٰهُ وَحْدَهٗ لَا شَرِيكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ - بِسْمِ اللّٰهِ الرَّحْمٰنِ الرَّحِيْمِ

اَلْحَمْدُ لِلّٰهِ رَبِّ الْعٰلَمِيْنَ۔ اَلرَّحْمٰنِ الرَّحِيْمِ۔ مٰلِكِ يَوْمِ الدِّيْنِ۔

اِيَّاكَ نَعْبُدُ وَاِيَّاكَ نَسْتَعِيْنُ۔ اِهْدِنَا الصِّرَاطَ الْمُسْتَقِيْمَ۔

صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ۔

ಹಝ್ರ಼ತ್ ಪೈಗಂಬರ್(ಸ)ರೊಂದಿಗೆ ಸುವಾದ್ ಬಿನ್ ಗ಼ಝ್ಝಿಯರಿಗೆ ಇದ್ದ ಪ್ರೀತಿ ಮತ್ತು ಪ್ರೇಮದ ವಿಸ್ಮಯಕರ ಘಟನೆಯನ್ನು ಕಳೆದ ಖುತ್ಬದಲ್ಲಿ ಹೇಳಿದ್ದೆ. ಇದರ ಕುರಿತು ಹೆಚ್ಚಿನ ವಿವರಣೆ ಹೀಗಿದೆ: ಸುವಾದ್ ಬಿನ್ ಗ಼ಝ್ಝಿಯ ವಿಜಯಿಯಾಗಿ ಯುದ್ಧದಿಂದ ಮರಳಿದರು ಮತ್ತು ಮುಶ್ರಿಕರಲ್ಲಿ ಒಬ್ಬ ವ್ಯಕ್ತಿಯಾಗ ಖ಼ಾಲಿದ್ ಬಿನ್ ಹಿಶಾಮ್‌ರನ್ನು ಕೈದಿ ಕೂಡ ಮಾಡಿದರು. ಕೆಲವರ ಪ್ರಕಾರ ಈ ಘಟನೆಯು ಹಝ್ರ್‌ರತ್ ಸವಾದ್ ಬಿನ್ ಗ಼ಝ್ಝಿಯ(ರ) ರವರಲ್ಲದೆ ಸವಾದ ಬಿನ್ ಉಮ್ರೊ(ರ) ರವರದ್ದಾಗಿದೆ ಎಂದು ಪ್ರತಿಪಾದಿಸುತ್ತಾರೆ ಆದರೆ ಅನೇಕ ಐತಿಹಾಸಿಕ ಹಾಗೂ ಚರಿತ್ರೆಯ ಪುಸ್ತಕಗಳಲ್ಲಿ ಈ ಘಟನೆ ಸುವಾದ್ ಬಿನ್ ಗ಼ಝ್ಝಿಯರವರ ಬಗ್ಗೆ ಉಲ್ಲೇಖಿಸಲಾಗಿದೆ.
(ಅಸದುಲ್‌ಗಾಬ, ಭಾಗ–2, ಪುಟ–590, ದಾರುಲ್ ಕುತುಬ್ ಇಲ್‌ಮಿಯ ಬೈರೂತ್)

ಹಝ್ರ಼ತ್ ಪೈಗಂಬರ್(ಸ) ಅನಂತರ ಸುವಾದ್‌ರನ್ನು ಖೈಬರ್ ಯುದ್ಧದ ಸಂಪತ್ತನ್ನು ಸಂಗ್ರಹಿಸಲು ಅಧಿಕಾರಿಯನ್ನಾಗಿ ನೇಮಿಸಿದ್ದರು. ಹಝ್ರ಼ತ್ ಮಿರ್ಝ಼ಾ ಬಶೀರ್ ಅಹ್ಮದ್ ಸಾಹಿಬ್(ರ) ಸೀರತ್ ಖ಼ಾತಮುನ್ನಬಿಯ್ಯೀನ್‌ನಲ್ಲಿ ಈ ಘಟನೆಯನ್ನು ಈ ರೀತಿಯಲಾಗಿ ವಿವರಿಸಿರುವರು: ಹಿಜರೀ 2, ರಮಝ಼ಾನ್ ತಿಂಗಳ 17ನೇ ತಾರೀಕು, ಜುಮಾ ದಿವಸವಾಗಿತ್ತು. ಬೆಳಿಗ್ಗೆ ಎದ್ದು ಮೊತ್ತಮೊದಲು ನಮಾಝ್ ನಿರ್ವಹಿಸಲಾಯಿತು. ಅನಂತರ ಹಝ್ರ಼ತ್ ಪೈಗಂಬರ್(ಸ) ಜಿಹಾದಿನ ಬಗ್ಗೆ ಒಂದು ಖುತ್ಬ ನೀಡಿದರು. ಅನಂತರ ಅವರು ಒಂದು ಬಾಣದ ಮೂಲಕ ಮುಸ್ಲಿಮರ ಪಂಕ್ತಿಗಳನ್ನು ಸರಿಪಡಿಸಲು ಆರಂಭಿಸಿದರು. ಸುವಾದ್ ಎಂಬ ಹೆಸರಿನ ಒಬ್ಬ ಸಹಾಬಿ ಪಂಕ್ತಿಯಿಂದ ಸ್ವಲ್ಪ ಮುಂದೆಯಾಗಿ ನಿಂತಿದ್ದರು. ಬಾಣದಿಂದ ಮುಟ್ಟಿಕೊಂಡು ಅವರೊಡನೆ ಹಿಂದಕ್ಕೆ ಸರಿಯಲು ಹೇಳಿದರು. ಆಗ ಅವರು ಬಹಳ ಧೈರ್ಯದಿಂದ ಹೀಗೆ ಹೇಳಿದರು: ಯಾ ರಸೂಲಲ್ಲಾಹ್, ಅಲ್ಲಾನು ನಿಮ್ಮನ್ನು ಸತ್ಯ ಮತ್ತು ನ್ಯಾಯದೊಂದಿಗೆ ಕಳುಹಿಸಿರುವನು. ಆದರೆ ನೀವು ನನಗೆ ಅನ್ಯಾಯವಾಗಿ ಬಾಣದಿಂದ ನೋವು ಕೊಟ್ಟಿದ್ದೀರಿ. ಅಲ್ಲಾಹನಾಣೆ ನಾನು ಇದರ ಸೇಡು ತೀರಿಸುವೆನು. ಇದನ್ನು ಆಲಿಸಿದಾಗ ಸುವಾದಿಗೆ ಏನಾಯಿತು ಎಂದು ಯೋಚಿಸಿ ಸಹಾಬಿಯರು ಅಶ್ಚರ್ಯಚಕಿತರಾದರು. ಆದರೆ ಹಝ್ರ಼ತ್ ಪೈಗಂಬರ್(ಸ) ಅತ್ಯಂತ ವಾತ್ಸಲ್ಯದಿಂದ ಹೇಳಿದರು: ಸರಿ ಸುವಾದ್, ನೀನು ಕೂಡ ನನಗೆ ಬಾಣದಿಂದ ತಿವಿದುಕೊಳ್ಳು. ಹಝ್ರ಼ತ್ ಪೈಗಂಬರ್(ಸ) ತನ್ನ ಎದೆಯಿಂದ ಅಂಗಿಯನ್ನು ನೀಗಿಸಿದರು. ಸುವಾದ್ ಪ್ರೀತಿ ಮತ್ತು ಸಂತೋಷದಿಂದ ಮುಂದಕ್ಕೆ ಬಂದು ಅವರ ಎದೆಯನ್ನು ಚುಂಬಿಸಿದರು. ಹಝ್ರ಼ತ್ ಪೈಗಂಬರ್(ಸ) ಮುಗುಳ್ನಗುತ್ತಾ ಹೀಗೆ ಕೇಳಿದರು: ಸುವಾದ್ ನಿನಗೆ ಹೀಗೆ ಮಾಡುವಂತೆ ಏಕೆ ಯೋಚನೆ ಬಂತು.

ಅವರು ಹೇಳಿದರು: ಯಾ ರಸೂಲಲ್ಲಾಹ್, ಅಲ್ಲಾಹನ ಶತ್ರುಗಳು ಮುಂದೆ ಇರುವವರು. ಇಲ್ಲಿಂದ ಬಚಾವಾಗಿ ಮರಳು ಹೋಗುವೆವೋ ಇಲ್ಲವೋ ಎಂದು ಗೊತ್ತಿಲ್ಲ. ಶಹಾದತಿಗೆ ಮುಂಚೆ ನಿಮ್ಮ ಶರೀರವನ್ನು ನನ್ನ ಶರೀರದಿಂದ ಸ್ಪರ್ಶಿಸಲು ನಾನು ಬಯಸಿದೆ. (ಸೀರತ್ ಖಾತಮನ್ನಬೀಈನ್, ಹಝ್ರ್‌ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ ಎಂ.ಎ, ಪುಟ–357–358)

ಹಝ್ರ್‌ರತ್ ಮುಸ್ಲೆಹ್ ವಔಊದ್(ರ.ಅ) ಹಝ್ರ್‌ರತ್ ಪೈಗಂಬರ್(ಸ.ಅ) ಅವರ ನಿಧನದ ಮುಂಚೆಯ ಇದೇ ರೀತಿಯ ಒಂದು ಘಟನೆಯನ್ನು ಉಲ್ಲೇಖಿಸಿದ್ದಾರೆ. ಬದ್ರ್ ಯುದ್ಧದಲ್ಲಿ ಅಲ್ಲ, ಬದಲಿಗೆ ಅವರ ನಿಧನದ ಸಮಯದಲ್ಲಿ ನಡೆದ ಘಟನೆಯನ್ನು ವಿವರಿಸಲಾಗಿದೆ, ಅದು ಹೋಲುತ್ತದೆ. ಅವರು ಹೇಳುತ್ತಾರೆ: "ಹಝ್ರ್‌ರತ್ ಪೈಗಂಬರ್(ಸ) ಅವರ ಮರಣದ ಸಮಯ ಸಮೀಪಿಸಿದಾಗ, ಅವರು(ಸ) ತಮ್ಮ ಸಹಾಬರವರನ್ನು ಒಟ್ಟುಗೂಡಿಸಿ ಹೇಳಿದರು: ನೋಡಿ! ನಿಮ್ಮಂತೆ ನಾನು ಕೂಡ ಮನುಷ್ಯ, ನಿಮ್ಮ ಹಕ್ಕುಗಳ ವಿಷಯದಲ್ಲಿ ನಾನು ಎಂದಾದರೂ ತಪ್ಪು ಮಾಡಿರಬಹುದು ಮತ್ತು ನಿಮ್ಮಲ್ಲಿ ಯಾರಿಗಾದರೂ ಹಾನಿ ಮಾಡಿರಬಹುದು, ಆದ್ದರಿಂದ ನಾನು ಸರ್ವಶಕ್ತನಾದ ಅಲ್ಲಾಹನ ಮುಂದೆ ನೀವು ವಾದಿಯ ರೂಪದಲ್ಲಿ (ಮುದ್ದೈಯ ರೂಪದಲ್ಲಿ) ಆಗಮಿಸುವುದಕ್ಕಿಂತ , ನಿಮ್ಮಲ್ಲಿ ಯಾರಿಗಾದರೂ ಏನಾದರೂ ತೊಂದರೆಯಾಗಿದ್ದರೆ ನಾನು ನಿಮಗೆ ಹೇಳುತ್ತೇನೆ. ನನ್ನಿಂದ ನಿಮ್ಮಲ್ಲಿ ಯಾರಿಗಾದರು ನಷ್ಟವಾಗಿದ್ದರೆ ಅವರು ಈ ಜಗತ್ತಿನಲ್ಲಿ ತನ್ನ ನಷ್ಟವನ್ನು ನನ್ನಿಂದ ಪಡೆದುಕೊಳ್ಳಬೇಕು. ಹಝ್ರ್‌ರತ್ ಪೈಗಂಬರ್(ಸ) ಅವರ ಮೇಲೆ ಸಹಾಬಿಗಳಿಗಿದ್ದ ಪ್ರೀತಿಯನ್ನು ನೋಡಿದರೆ, ಪೈಗಂಬರ್ ರವರ ಈ ಮಾತುಗಳು ಅವರ ಹೃದಯವನ್ನು ಎಷ್ಟು ಚಾಕುಗಳು ಚುಚ್ಚಿರಬಹುದು ಮತ್ತು ಅವರ ಹೃದಯದಲ್ಲಿ ಕಣ್ಣೀರು ಹೇಗೆ ಸಂಭವಿಸಿರಬಹುದು ಎಂದು ಅಂದಾಜಿಸಬಹುದು. ಹಾಗೆಯೇ ಇದು ಸಂಭವಿಸಿತು. ಸಹಾಬರವರ ಮೇಲೆ ಅನುಕಂಪದ (ರಿಕ್ಕತ್) ಭಾವನೆಯು ಆವರಿಸಿತು. ಅವರ ಕಣ್ಣುಗಳಿಂದ ನೀರು ಹರಿಯಿತು ಮತ್ತು ಅವರಿಗೆ ಮಾತನಾಡಲು ಕಷ್ಟವಾಗುತ್ತಿತ್ತು. ಆದರೆ ಅವರಲ್ಲಿದ್ದ ಒಬ್ಬ ಸಹಾಬಿಯು

ಎದ್ದುನಿಂತು ಹೇಳಿದನು: ಯಾ ರಸೂಲಲ್ಲಾಹ್(ಸ)! ನಾನು ಯಾರಿಗಾದರೂ ಹಾನಿ ಮಾಡಿದ್ದರೆ, ಅವನು ನನ್ನಿಂದ ಸೇಡು ತೀರಿಸಿಕೊಳ್ಳಬೇಕು ಎಂದು ನೀವು ಹೇಳಿದಾಗ, ನಾನು ನಿಮ್ಮಿಂದ ಸೇಡು ತೀರಿಸಿಕೊಳ್ಳಲು ಬಯಸುತ್ತೇನೆ. ಅದಕ್ಕೆ ಹಝ್ರತ್ ಪೈಗಂಬರ್(ಸ) ಹೌದು ಎಂದು ಹೇಳಿದರು. ನನ್ನಿಂದ ನಿಮಗೆ ಆಗಿರುವ ಹಾನಿಯ ಬಗ್ಗೆ ಬೇಗ ಹೇಳಿರಿ ಎಂದು ಹೇಳಿದರು. ಅದಕ್ಕೆ ಆ ಸಹಬಿ ಹೇಳಿದರು, ಯಾ ರಸೂಲಲ್ಲಾಹ್(ಸ)! ಒಂದು ಯುದ್ಧದ ಸಂದರ್ಭದಲ್ಲಿ, ಹಝ್ರತ್ ಪೈಗಂಬರ್(ಸ.ಅ) ರವರು ಪಂಕ್ತಿಗಳನ್ನು ನಿಗದಿಪಡಿಸುತ್ತಿದ್ದರು, ಆಗ ಹಝ್ರತ್ ಪೈಗಂಬರ್(ಸ) ಒಂದು ನಿರ್ದಿಷ್ಟ ಪಂಕ್ತಿಯನ್ನು ದಾಟಿದ ನಂತರ ಮುಂದೆ ಹೋಗುವುದು ಅನಿವಾರ್ಯವಾಯಿತು. ನೀವು ಸಾಲು ಮುರಿದು ಮುಂದೆ ಹೋದಾಗ ನಿಮ್ಮ ಮೊಣಕೈ ನನ್ನ ಬೆನ್ನಿಗೆ ಬಡಿಯಿತು, ಇಂದು ನಾನು ಅದಕ್ಕೆ ಸೇಡು ತೀರಿಸಿಕೊಳ್ಳಲು ಬಯಸುತ್ತೇನೆ. ಅಲ್ಲಿದ್ದ ಸಹಾಬಿಗಳು ಹೇಳುತ್ತಾರೆ: ಆ ಸಮಯದಲ್ಲಿ ನಮ್ಮ ಕತ್ತಿಗಳು ಕೋಪದಿಂದ ತಮ್ಮ ಕವಚದಿಂದ ಹೊರಬರುತ್ತಿದ್ದವು ಮತ್ತು ನಮ್ಮ ಕಣ್ಣುಗಳಿಂದ ರಕ್ತ ಸುರಿಯಲಾರಂಭಿಸಿತು. ಆ ಸಮಯದಲ್ಲಿ ರಸೂಲುಲ್ಲಾಹ್(ಸ) ನಮ್ಮ ಮುಂದೆ ಇರದಿದ್ದರೆ, ನಾವು ಖಂಡಿತವಾಗಿಯೂ ಆ ಸಹಾಬಿಯನ್ನು ತುಂಡುಗಳಾಗಿ ಕತ್ತರಿಸುತ್ತಿದ್ದೆವು. ಆದರೆ ರಸೂಲುಲ್ಲಾಹ್(ಸ) ತಮ್ಮ ಬೆನ್ನನ್ನು ಆತನ ಕಡೆಗೆ ತಿರುಗಿಸಿ ಹೇಳಿದರು ತನ್ನ ಸೇಡು ತೀರಿಸಿಕೊಳ್ಳಿ ಮತ್ತು ಅದೇ ರೀತಿಯಲ್ಲಿ ನನಗೂ ಸಹ ಮೊಣಕೈಯಿಂದ ಹೊಡೆಯಿರಿ. ಅದಕ್ಕೆ ಆ ಸಹಾಬಿ ಹೇಳಿದರು, ಯಾ ರಸೂಲಲ್ಲಾಹ್! ಇನ್ನು ಇಲ್ಲ. ನಿಮ್ಮ ಮೊಣಕೈ ನನಗೆ ಹೊಡೆದಾಗ, ನನ್ನ ಬೆನ್ನಿನ ಮೇಲೆ ಬಟ್ಟೆ ಇರಲಿಲ್ಲ ಅದರೆ ನಿಮ್ಮ ಬೆನ್ನಿ ಮೇಲೆ ಬಟ್ಟೆ ಇದೆ. ಅದಕ್ಕೆ ರಸೂಲುಲ್ಲಾಹ್(ಸ) ಸಹಾಬರವರಿಗೆ ಹೇಳಿದರು: ಈ ವ್ಯಕ್ತಿಯು ನನ್ನ ಮೇಲೆ ಸೇಡು ತೀರಿಸಿಕೊಳ್ಳಲು ನನ್ನ ಬೆನ್ನಿನಿಂದ ಬಟ್ಟೆಯನ್ನು ತೆಗೆದುಹಾಕಿ. ಸಹಾಬಿಗಳು ಪ್ರವಾದಿಯವರ ಬೆನ್ನಿನಿಂದ ಬಟ್ಟೆಯನ್ನು ತೆಗೆದಾಗ, ಆ ಸಹಾಬಿಯು ನಡುಗುವ ತುಟಿಗಳು ಮತ್ತು ಹರಿಯುವ ಕಣ್ಣೀರಿನೊಂದಿಗೆ ಮುಂದೆ ಬಂದು ರಸೂಲುಲ್ಲಾಹ್(ಸ) ಅವರ ಬರಿಯ ಬೆನ್ನನ್ನು ಪ್ರೀತಿಯಿಂದ ಚುಂಬಿಸಿದರು ಮತ್ತು ಹೇಳಿದರು:

ಯಾ ರಸೂಲಲ್ಲಾಹ್(ಸ)!! ಎಲ್ಲಿದೆ ಸೇಡು ಮತ್ತು ಎಲ್ಲಿ ಈ ಅತ್ಯಲ್ಪ ಗುಲಾಮ!

ಸಮಯ ಸಮೀಪಿಸುತ್ತಿದೆ ಎಂದು ನಾನು ಹಝ್ರತ್ ಪೈಗಂಬರ್ ಅವರಿಂದ ತಿಳಿದುಕೊಂಡ ಸಮಯದಲ್ಲಿ, ಅದರ ಆಲೋಚನೆಯೂ ಸಹ ನಮ್ಮನ್ನು ಕುಗ್ಗುವಂತೆ ಮಾಡುತ್ತದೆ. ಆದ್ದರಿಂದ ಅಲ್ಲಾಹನು ಎಲ್ಲಾ ಅನುಗ್ರಹಗಳ ಸಂಗ್ರಹವನ್ನು ಮಾಡಿದ ಈ ಧನ್ಯ ದೇಹವನ್ನು ಒಮ್ಮೆ ನನ್ನ ತುಟಿಗಳು ಸ್ಪರ್ಶಿಸಬೇಕೆಂದು ನಾನು ಬಯಸಿದೆ. ಹಾಗಾಗಿ ನನ್ನ ಉದ್ದೇಶವನ್ನು ಪೂರೈಸಲು ನಾನು ಈ ಮೊಣಕೈಯ ಬೆಂಬಲವನ್ನು ಪಡೆದುಕೊಂಡೆ. ಮತ್ತು ಕೊನೆಯ ಬಾರಿಗೆ ನಾನು ನಿಮ್ಮನ್ನು ಚುಂಬಿಸಲು ಬಯಸುತ್ತೇನೆ. ಯಾ ರಸೂಲಲ್ಲಾಹ್!! ಮೊಣಕೈ ತಾಗುವುದು ಎಂದರೇನು? ನಮ್ಮ ಸರ್ವಸ್ವವೂ ನಿಮಗಾಗಿ ತ್ಯಾಗ. ನಿಮ್ಮನ್ನು ಚುಂಬಿಸುವ ಅವಕಾಶವನ್ನು ಪಡೆಯಲು ನನ್ನ ಆತ್ಮವು ಬಯಸಿದೆ. ಈ ವ್ಯಕ್ತಿಯನ್ನು ಕೊಲ್ಲಲು ಸಿದ್ಧರಾದ ಸಹಾಬರವರು." ಆತನ ಈ ಮಾತುಗಳನ್ನು ಕೇಳಿ, ಆ ಸಮಯದಲ್ಲಿ ಅವರು ತುಂಬಾ ಕೋಪಗೊಂಡಿದ್ದರು. "ಅವರೆಲ್ಲರು ಈ ನೋಟವನ್ನು ನೋಡಿದಾಗ, ಆತನ ಮನಸ್ಸಿನಲ್ಲಿ ಬೇರೆ ಏನೋ ಇದೆ ಎಂದೆನಿಸಿಕೊಂಡರು. ಹೀಗೆ ಅವರು ಹೇಳುತ್ತಾರೆ, ನಮ್ಮಲ್ಲಿ ಎಲ್ಲರನ್ನು ತಮ್ಮ ಮೇಲೆ ಸ್ವತಃ ಕೊಪ ಬರುತ್ತಿತ್ತು ನಮಗೆ ಇಂತಹ ಅವಕಾಶ ಏಕೆ ಲಭಿಸಲಿಲ್ಲ ಎಂದು. ನಾವು ಸಹ ನಮ್ಮ ಪ್ರಿಯತಮೆಯನ್ನು ಚುಂಬಿಸುತ್ತಿದ್ದೆವು."

ಹಝ್ರತ್ ಮುಸ್ಲೆಹ್ ಮೌಊದ್(ರ.ಅ) ಹೇಳುತ್ತಾರೆ: "ಇವರು ನಮಗೆ ಮಾರ್ಗದರ್ಶಕರಾಗಿದ್ದರು" ಅಂದರೆ, ಹಝ್ರತ್ ಪೈಗಂಬರ್(ಸ)" ತಮ್ಮ ಜೀವನದ ಪ್ರತಿಯೊಂದು ಅಂಶದಲ್ಲೂ ನಮಗೆ ಮಾದರಿಯಾಗಿದ್ದಾರೆ. ಬೇರೆ ಯಾವುದೇ ಪ್ರವಾದಿಯಲ್ಲಿ ಹೀಗೆ ಕಂಡುಬರುವುದಿಲ್ಲ."
(ಉಸ್ವ ಎ ಹಸನ, ಅನ್ವಾರುಲ್ ಉಲೂಮ್, ಸಂಪುಟ–17, ಪುಟ–128 ರಿಂದ 130)

ಬದ್ರ್ ಯುದ್ಧದಲ್ಲಿ ಸಹಾಬಿಗಳ ಧ್ಯೇಯವಾಕ್ಯವೇನಾಗಿತ್ತು? ಇದರ ಬಗ್ಗೆ ಹಝ್ರತ್ ಉರ್ವ ಬಿನ್ ಝುಬೈರ್(ರ) ಅವರಿಂದ ವರದಿ ಇದೆ ಯುದ್ಧದ ದಿನದಂದು ವಲಸಿಗರ (ಮುಹಾಜಿರೀನ್) ಧ್ಯೇಯವಾಕ್ಯವು **ಯಾ ಬನೀ ಅಬ್ದುರ್ರಹ್ಮಾನ್** ಎಂದಾಗಿತ್ತು ಮತ್ತು ಖಝ್ರಜ್ ಗೋತ್ರದವರ ಧ್ಯೇಯವಾಕ್ಯವು **ಯಾ ಬನೀ ಅಬ್ದುಲ್ಲಾಹ್** ಎಂದಾಗಿತ್ತು ಮತ್ತು ಔಸ್ ಗೋತ್ರದ ಧ್ಯೇಯವಾಕ್ಯವೆಂದರೆ **ಯಾ ಬನೀ ಉಬೈದುಲ್ಲಾಹ್** ಎಂದಾಗಿತ್ತು ಮತ್ತು ರಸೂಲುಲ್ಲಾಹ್(ಸ) ರವರು ತಮ್ಮ ಅಶ್ವದಳಕ್ಕೆ **ಖೈಲುಲ್ಲಾಹ್** ಎಂಬ ಹೆಸರನ್ನು ನೀಡಿದರು. ಒಂದು ವರದಿಯ ಪ್ರಕಾರ ಆ ದಿವಸ ಎಲ್ಲರ ಘೋಷವಾಕ್ಯ **ಯಾ ಮನ್ಸೂರು ಅಮಿತ್** ಎಂದಾಗಿತ್ತು ಅಂದರೆ ಓ ಮನ್ಸೂರ್! ಕೊಲ್ಲು.
(ಸಬಲುಲ್ ಹುದಾ ವರ್ರಶ್ಶಾದ್, ಅಧ್ಯಾಯ ಘಜ್ವಾ ಬದ್ರ್ ಅಲ್–ಕುಬ್ರಾ, ಸಂಪುಟ–4, ಪುಟ–44, ದಾರುಲ್ ಕುತುಬ್ ಅಲ್–ಇಲ್ಮೀಯ ಬೈರುತ್, 1993)

ಬದ್ರ್ ಯುದ್ಧದಲ್ಲಿ ಮದೀನದ ಅನ್ಸಾರ್‌ರ ಧ್ಯೇಯವಾಕ್ಯ ಅಥವಾ ಚಿಹ್ನೆ ಅಥವಾ ಘೋಷಣೆಯನ್ನು ನಾನು ವಿವರಿಸಿದಂತೆ ಅಹದ್ ಅಹದ್ ಎಂದಾಗಿತ್ತು ಎಂದು ಒಂದು ಸಂಪ್ರದಾಯವಿದೆ, ಅದು ರಾತ್ರಿಯ ಕತ್ತಲೆಯಲ್ಲಿ ಅಥವಾ ದೊಡ್ಡ ಗೊಂದಲದ ಯುದ್ಧದಲ್ಲಿ ಅದು ಆಗಿರಬಹುದು. ಈ ಘೋಷಣೆಯಿಂದ ಗುರುತಿಸಲ್ಪಟ್ಟಿದೆ ಅಂತೆಯೇ, ಮುಸ್ಲಿಂ ಮುಹಾಜಿರೀನ್ ಅವರ ಧ್ಯೇಯವಾಕ್ಯವು **ಯಾ ಬನೀ ಅಬ್ದಿರ್ರಹ್ಮಾನ್**. ಆಗಿತ್ತು. (ಅಸ್ಸೀರತುಲ್ ಹಲಬೀಯ, ಸಂಪುಟ–2, ಪುಟ–242, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2002)

ಹಝ್ರತ್ ಪೈಗಂಬರ್(ಸ) ಅವರ ಯುದ್ಧದ ಸೂಚನೆಗಳನ್ನು ಈ ಕೆಳಗಿನಂತೆ ಹೆಚ್ಚು ವಿವರವಾಗಿ ವಿವರಿಸಲಾಗಿದೆ: ಹಝ್ರತ್ ಪೈಗಂಬರ್(ಸ) ಪಂಕ್ತಿಗಳನ್ನು ಸರಿಪಡಿಸಿದ ನಂತರ ಹೀಗೆ ಹೇಳಿದರು: ನಾನು ಆಜ್ಞೆ ನೀಡುವ ವರೆಗೂ ನೀವು ದಾಳಿ ನಡೆಸಬೇಡಿರಿ. ಶತ್ರುಗಳು ಸಮೀಪಕ್ಕೆ ಬಂದ ನಂತರ ಅವರ ಮೇಲೆ ಬಾಣವನ್ನು ಬೀಸಿ ಅವರನ್ನು ಹಿಂದಕ್ಕೆ ಸರಿಸಿರಿ. ಏಕೆಂದರೆ ದೂರದಿಂದ ಮಾಡಲಾಗುವ ಬಿಲ್ಲುಗಾರಿಕೆ ಹೆಚ್ಚಾಗಿ ವ್ಯರ್ಥವಾಗಿ ಹೋಗುತ್ತದೆ. ಅದೇ ರೀತಿಯಲ್ಲಿ ಖಡ್ಗ ಪ್ರಯೋಗ ಕೂಡ ಶತ್ರುಗಳು ಹೆಚ್ಚು ಸಮೀಪಕ್ಕೆ ಬರುವಾಗ ನಡೆಸಿರಿ.

ಹಝ್ರತ್ ಪೈಗಂಬರ್(ಸ)ರ ಒಂದು ಭಾಷಣದ ಬಗ್ಗೆ ಪ್ರಸ್ತಾಪವಿದೆ. ಜಿಹಾದ್ ಮತ್ತು ಸಹನೆ ಮಾಡುವುದರ ಬಗ್ಗೆ ಅವರು ಉಪದೇಶ ನೀಡಿದರು. ಅವರು ಹೇಳಿದರು: ವಿಪತ್ತಿನ ಸಮಯದಲ್ಲಿ ಸಹನೆ ಕೈಗೊಳ್ಳುವಾಗ ಅಲ್ಲಾಹನು ಕಷ್ಟತೆಗಳನ್ನು ದೂರ ಮಾಡುವವನು ಮತ್ತು ದುಃಖದಿಂದ ಮೋಕ್ಷ ನೀಡುತ್ತಾನೆ. (ಅಸ್ಸೀರತುಲ್ ಹಲಬೀಯ, ಸಂಪುಟ–2, ಪುಟ–221, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2002) (ತಾರೀಖ್ ಅತ್ತಬರಿ, ಸಂಪುಟ–2, ಪುಟ–32, ದಾರುಲ್ ಕುತುಬ್ ಇಲ್‌ಮಿಯ ಬೈರೂತ್)

ಹಝ್ರತ್. ಪೈಗಂಬರ್(ಸ) ನೀಡಿದ ಖುತ್ಬದ ವಿವರಣೆ ಒಂದೆಡೆ ಹೀಗೆ ಬಂದಿದೆ: ಹಝ್ರತ್ ಪೈಗಂಬರ್(ಸ) ಅಲ್ಲಾಹನಿಗೆ ಸ್ತುತಿ ಅರ್ಪಿಸಿ ಅವನ ಪರಿಶುದ್ಧಿಯನ್ನು ಕೊಂಡಾಡಿದ ನಂತರ ಹೀಗೆ ಹೇಳಿದರು: ಅಲ್ಲಾಹನು ಹುರಿದುಂಬಿಸಿದ ಕಾರ್ಯದ ಬಗ್ಗೆ ನಾನು ನಿಮ್ಮನ್ನು ಹುರಿದುಂಬಿಸುತ್ತೇನೆ. ಅಲ್ಲಾಹನು ನಿಷೇಧಿಸಿದ ಕಾರ್ಯದಿಂದ ನಿಮ್ಮನ್ನು ತಡೆಯುತ್ತೇನೆ. ಶ್ರೇಷ್ಠನೂ ಅತ್ಯುನ್ನತನೂ ಆದ ಅಲ್ಲಾಹನು ನಿಮ್ಮೊಡನೆ ಸತ್ಯವನ್ನು ಹೇಳಲು ಆದೇಶಿಸುತ್ತಾನೆ. ಅವನು ಸತ್ಯವನ್ನು ಇಷ್ಟಪಡುತ್ತಾನೆ. ಅವನು ಸಜ್ಜನರಿಗೆ ಉನ್ನತ ಪದವಿಗಳನ್ನು ದಯಪಾಲಿಸುತ್ತಾನೆ. ಕಠಿಣ ಪರಿಸ್ಥಿತಿಗಳಲ್ಲಿ ಸಹನೆದೋರುವುದರಿಂದ ದುಃಖ ದೂರವಾಗುತ್ತದೆ. ಸಹನೆ ಕೈಗೊಳ್ಳುವುದರ ಮೂಲಕ ಪರಲೋಕದಲ್ಲಿ ಮೋಕ್ಷ ಲಭಿಸುವುದು. ಅಲ್ಲಾಹನ ಅನಿಷ್ಟತೆ ನಿಮ್ಮ ಪರಸ್ಪರ ಕೋಪಕ್ಕಿಂತ ಬಹಳ ದೊಡ್ಡ ಸಂಗತಿಯಾಗಿದೆ. ಅಲ್ಲಾಹನು ದೈವಿಕ ಗ್ರಂಥದಲ್ಲಿ ಆದೇಶ ನೀಡಿದ ಸಂಗತಿಯ ಬಗ್ಗೆ ಗಮನವಿರಿಸಿರಿ. ಅವನು ನಿಮಗೆ ತನ್ನ ಅದ್ಭುತ ದೃಷ್ಟಾಂತಗಳನ್ನು ತೋರಿಸಿರುವವನು ಮತ್ತು ಅಪಮಾನದ ನಂತರ ಗೌರವವನ್ನು ನೀಡಿರುವವನು. ಅಲ್ಲಾಹನು ನಿಮ್ಮೊಂದಿಗೆ ಸಂಪ್ರೀತನಾಗಲು ಅವನ ಕೈಯನ್ನು ಗಟ್ಟಿಯಾಗಿ ಹಿಡಿಯಿರಿ. ಈಗ ನೀವು ಪ್ರಭುವಿನ ಪರೀಕ್ಷಣೆಯಲ್ಲಿ ತೇರ್ಗಡೆ ಪಡೆಯಿರಿ. ಹಾಗಾದರೆ, ಅವನು ನಿಮಗೆ ವಾಗ್ದಾನ ಮಾಡಿದ ಕಾರುಣ್ಯ ಮತ್ತು ಕ್ಷಮಾಪಣೆಗೆ ನೀವು ಹಕ್ಕುದಾರರಾಗುವಿರಿ. ಅವನ ವಾಗ್ದಾನ ಮತ್ತು ಮಾತು ಸತ್ಯವಾಗಿದೆ. ಅವನ ಶಿಕ್ಷೆ ಕಠಿಣವಾಗಿದೆ. ಜೀವಂತನೂ ಎಲ್ಲರನ್ನು ನೆಲೆನಿಲ್ಲಿಸುವವನೂ ಆದ ಅಲ್ಲಾಹನು ಜೊತೆಗೆ ನಾನು ಮತ್ತು ನೀವು ಇದ್ದೀರಿ. ನಮ್ಮ ವಿಜಯಕ್ಕಾಗಿ ನಾವು ಅವನೊಡನೆ ದುಆ ಮಾಡುತ್ತೇವೆ ಮತ್ತು ಅವನ ಆಶ್ರಯವನ್ನು ಪಡೆಯುತ್ತೇವೆ. ಅವನ ಮೇಲೆ ಭರವಸೆ ಹೊಂದುತ್ತೇವೆ ಮತ್ತು ಅವನ ಬಳಿಗೆ ಮರಳಿ ಹೋಗಲಿದ್ದೇವೆ. ಅಲ್ಲಾಹನು ನಮ್ಮನ್ನು ಮತ್ತು ಮುಸ್ಲಿಮರನ್ನು ಕ್ಷಮಿಸಲಿ. (ಸಬ್ಲುಲ್ ಹುದಾ ವರ್ರಶಾದ್, ಸಂಪುಟ–4, ಪುಟ–34, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 1993) ಇದು ಅದರ ವಿವರಣೆಯಾಗಿತ್ತು.

ಯುದ್ಧದಲ್ಲಿ ಕೆಲವು ಜನರನ್ನು ವಧಿಸದಿರಲು ಹಝ್ರತ್ ಪೈಗಂಬರ್(ಸ) ತಡೆದಿದ್ದರು. ಹಝ್ರತ್ ಇಬ್ನು ಅಬ್ಬಾಸ್(ರ) ವರದಿ ಮಾಡುತ್ತಾರೆ. ಹಝ್ರತ್ ಪೈಗಂಬರ್(ಸ) ತನ್ನ ಸಹಾಬಿಯರೊಡನೆ ಹೇಳಿದರು: ಬನೂ ಹಾಶಿಂ ಗೋತ್ರ ಮತ್ತು ಕೆಲವು ಇತರ ಜನರು ಖುರೈಶಿಗಳ ಒತ್ತಡಕ್ಕೆ ಒಳಪಟ್ಟು ಯುದ್ಧ ಮಾಡಲು ಬಂದಿರುವವರು ಮತ್ತು ಸ್ವಂತಹ ಖುಶಿಯಿಂದ ಬಂದಿಲ್ಲವೆಂದು ನನಗೆ ಮಾಹಿತಿ ಲಭಿಸಿದೆ. ಅವರು ನಮ್ಮ ವಿರುದ್ಧ ಯುದ್ಧ ಮಾಡಲು ಬಯಸುತ್ತಿಲ್ಲ. ಆದ್ದರಿಂದ ನಿಮ್ಮಲ್ಲಿ ಯಾರಾದರು ಬನೂ ಹಾಶಿಂ ಗೋತ್ರದ ವ್ಯಕ್ತಿಗಳನ್ನು ಕಂಡರೆ ಅವರನ್ನು ವಧಿಸಲಬೇಡಿರಿ. ಅಬುಲ್‌ಬಖ್ತರಿಯನ್ನು ವಧಿಸಬೇಡಿರಿ. ಅಬ್ಬಾಸ್ ಬಿನ್

ಅಬ್ದುಲ್‌ಮುತಲ್ಲಿಬ್‌ರನ್ನು ವಧಿಸಬೇಡಿರಿ. ಏಕೆಂದರೆ ಅವರೆಲ್ಲ ಒತ್ತಡದ ಕಾರಣದಿಂದ ಖುರೈಶಿಗಳ ಜೊತೆಗೆ ಬಂದಿರುವರು. ಹಝ್ರತ್ ಇಬ್ನು ಅಬ್ಬಾಸ್(ರ) ವರದಿ ಮಾಡುತ್ತಾರೆ: ಹಝ್ರತ್ ಅಬೂ ಹುದೈಫ ಬಿನ್ ಉತ್ಬ ಹೇಳಿದರು: ನಾವು ನಮ್ಮ ತಂದೆಯವರನ್ನು, ಮಕ್ಕಳನ್ನು, ಸಹೋದರರನ್ನು ಮತ್ತು ಸಂಬಂಧಿಕರನ್ನು ವಧಿಸುತ್ತಿರುವಾಗ ಅಬ್ಬಾಸ್‌ರನ್ನು ಏಕೆ ಬಿಡಬೇಕು. ಅಲ್ಲಾಹನಾಣೆ, ನಾನು ಅಬ್ಬಾಸ್‌ರನ್ನು ಕಂಡರೆ ಖಡ್ಗದಿಂದ ಅವನನ್ನು ಖಂಡಿತು ವಧಿಸುವೆನು. ವರದಿಗಾರರು ಹೇಳುತ್ತಾರೆ: ಈ ಸುದ್ದಿ ಹಝ್ರತ್ ಪೈಗಂಬರ್(ಸ) ಅವರಿಗೆ ತಲುಪಿತು ಮತ್ತು ಅವರು ಹಝ್ರತ್ ಉಮರ್ ಬಿನ್ ಖತ್ತಾಬ್(ರ) ಅವರಿಗೆ ಹೇಳಿದರು. ಓ ಅಬು ಹಾಫ್ಸ್! ಹಝ್ರತ್ ಉಮರ್(ರ) ಹೇಳುತ್ತಾರೆ ಅಲ್ಲಾಹನ ಆಣೆ! ರಸೂಲುಲ್ಲಾಹ್(ಸ) ಅವರು ನನ್ನನ್ನು ಅಬು ಹಾಫ್ಸ್ ಎಂಬ ಉಪನಾಮದಿಂದ ಸಂಬೋಧಿಸಿದ ಮೊದಲ ದಿನ ಇದಾಗಿತ್ತು. ಅವರು ಹೇಳಿದರು: ರಸೂಲುಲ್ಲಾಹ್(ಸ) ಅವರ ಚಿಕ್ಕಪ್ಪನ ಮೇಲೆ ಕತ್ತಿಯನ್ನು ಹೊಡೆಯಲಾಗುತ್ತದೆಯೇ? ಅದಕೆಕ ಹಝ್ರತ್ ಉಮರ್(ರ) ಹೇಳಿದರು, ಯಾ ರಸೂಲಲ್ಲಾಹ್! ಕತ್ತಿಯಿಂದ ಬೂಟಾಟಿಕೆ ತೋರಿದ ಅಬುಹುದೈಫನ ಕತ್ತು ಕತ್ತರಿಸಲು ನನಗೆ ಅವಕಾಶ ನೀಡಿರಿ. ಅಲ್ಲಾಹನ ಆಣೆ!! ಅವನು ಅಂದರೆ ಅಬು ಹುದೈಫ ಬೂಟಾಟಿಕೆ ತೋರಿಸಿದ್ದಾನೆ. ಹಝ್ರತ್ ಅಬೂಹುದೈಫ ನಂತರ ಹೀಗೆ ಹೇಳುತ್ತಿದ್ದರು: ನಾನು ಅಂದು ಹೇಳಿದ ಮಾತಿನಿಂದ ಸಮಾಧಾನದಿಂದ ಇರಲಿಕ್ಕೆ ಸಾಧ್ಯವಾಗಿರಲಿಲ್ಲ. ಶಹಾದತ್ ಮೂಲಕ ಇದಕ್ಕೆ ಪ್ರಾಯಶ್ಚಿತ ಮಾಡುವ ವರೆಗೂ ನನಗೆ ಈ ದುಃಖ ಮತ್ತು ಭಯವಿತ್ತು. ಹೀಗೆ ಹಝ್ರತ್ ಅಬೂಹುದೈಫ ಯಮಾಮ ಯುದ್ಧದಲ್ಲಿ ಶಹೀದ್ ಆದರು.
(ಸೀರತ್ ಇಬ್ನೆ ಹಿಶ್ಶಾಮ್, ಪುಟ–429, ದಾರುಲ್ ಕುತುಬ್ ಇಲ್‌ಮಿಯ ಬೂರೂತ್ 2001)

ಅದರ ವಿವರಣೆಗೆ ಸಂಬಂಧಿಸಿದಂತೆ, ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ಅವರು ಬರೆದಿದ್ದಾರೆ, "ಹಝ್ರತ್ ಪೈಗಂಬರ್(ಸ) ರವರು ಸಹಾಬಿಗಳನ್ನು ಉದ್ದೇಶಿಸಿ ಹೇಳಿದರು: ಅವಿಶ್ವಾಸಿಗಳ ಸೇನೆಯಲ್ಲಿ ಕೆಲವು ಜನರು ತಮ್ಮ ತುಂಬು ಹೃದಯದಿಂದ ಈ ಅಭಿಯಾನದಲ್ಲಿ ಸೇರಿದ್ದವರಲ್ಲ ಬದಲಿಗೆ ಖುರೈಶ್ ಮುಖ್ಯಸ್ಥರ ಒತ್ತಡದಿಂದಾಗಿ ಅವರು ಸೇರಿಕೊಂಡರು. ಇಲ್ಲದಿದ್ದರೆ, ಅವರು ತಮ್ಮ ಹೃದಯದಲ್ಲಿ ನಮಗೆ ವಿರುದ್ಧವಾಗಿಲ್ಲ. ಅದೇ ರೀತಿ, ಮಕ್ಕಾದಲ್ಲಿ ನಮ್ಮ ಕಷ್ಟದ ಸಮಯದಲ್ಲಿ ನಮ್ಮನ್ನು ಗೌರವದಿಂದ ನಡೆಸಿಕೊಂಡ ಕೆಲವು ಜನರು ಈ ಸೈನ್ಯದಲ್ಲಿದ್ದಾರೆ ಮತ್ತು ಅವರ ದಯೆಗೆ ಮರುಪಾವತಿ ಮಾಡುವುದು ನಮ್ಮ ಕರ್ತವ್ಯವಾಗಿದೆ. ಹೀಗಾಗಿ ಅಂತಹ ವ್ಯಕ್ತಿಯ ಮೇಲೆ ಯರಾದರು ಪ್ರಭುತ್ವವನ್ನು ಸಾಧಿಸಿದರೆ ಆತನಿ ಯಾವುದೇ ರೀತಿಯ ತೋಂದರೆ ನಿಡಬಾರದು. ಆದ್ದರಿಂದ ಹಝ್ರತ್ ಪೈಗಂಬರ್(ಸ) ಅವರು ನಿರ್ದಿಷ್ಟವಾಗಿ ಮೊದಲ ಪ್ರತಿಜ್ಞೆಯಲ್ಲಿ ಅಬ್ಬಾಸ್ ಬಿನ್ ಅಬ್ದುಲ್ ಮುತಲ್ಲಿಬ್ ಮತ್ತು ಎರಡನೇ ಪ್ರತಿಜ್ಞೆಯಲ್ಲಿ ಅಬುಲ್ ಬಖ್ತಾರಿ ಎಂಬ ಹೆಸರನ್ನು ಪಡೆದರು ಮತ್ತು ಅವರನ್ನು ಕೊಲ್ಲುವುದನ್ನು ನಿಷೇಧಿಸಿದರು. ಏಕೆಂದರೆ ಇವರು ಮುಸ್ಲಿಮರ ತೊಂದರೆಗಳನ್ನು ದೂರ ಸರಿಸಲು ಪ್ರಯತ್ನ ಪಡುತ್ತಿದ್ದರು ಆದ್ದರಿಂದ ನಿಷೇಧಿಸಲಾಯಿತು. ಆದರೆ ಪರಿಸ್ಥಿತಿಗಳು ಹೇಗೆ ಸಂಭವಿಸಿತು ಅಂದರೆ ಅದರಲ್ಲಿ ಅಬುಲ್ ಬಖ್ತರಿಗೆ ಆತನ ಮರಣದ ಮೊದಲು ಹಝ್ರತ್ ಪೈಗಂಬರ್(ಸ) ಅವನ್ನು ಕೊಲ್ಲುವುದನ್ನು ನಿಷೇಧಿಸಿದ್ದಾರೆ ಎಂದು ತಿಳಿದಿದ್ದರೂ ಸಹ ಕೊಲ್ಲುವುದನ್ನು ತಪ್ಪಿಸಲು ಸಾಧ್ಯವಾಗಲಿಲ್ಲ. (ಸೀರತ್ ಖಾತಮನ್ನಬೀಈನ್, ಸಾಹಿಬ್‌ಝಾದ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ ಎಂ.ಎ, ಪುಟ–360–361)

ಈ ನಿರ್ದೇಶನಗಳನ್ನು ನೀಡಿದ ನಂತರ ಹಝ್ರತ್ ಪೈಗಂಬರ್(ಸ) ಪುನಃ ಡೇರೆಗೆ ಹೋದರು ಮತ್ತು ದುಆ ಮಾಡುವುದರಲ್ಲಿ ತಲ್ಲೀನರಾಗಿದ್ದು ಇತಿಹಾಸದಲ್ಲಿ ದಾಖಲಾಗಿದೆ. ಹಝ್ರತ್ ಅಬೂಬಕರ್(ರ.ಅ) ರವರು ಸಹ ಅವರ ಜೊತೆಗಿದ್ದರು ಮತ್ತು ಹಝ್ರತ್ ಸಾದ್ ಬಿನ್ ಮುಆದ್(ರ) ರವರ ನೇತೃತ್ವದಲ್ಲಿ ಅನ್ಸರರ ಗುಂಪು ಡೇರೆಯ ಸುತ್ತಲೂ ಕಾವಲು ಕಾಯುತ್ತಿತ್ತು.
(ಅಸ್ಸೀರತುಲ್ ಹಲಬೀಯ, ಸಂಪುಟ–2, ಪುಟ–221, ದಾರುಲ್ ಕುತುಬ್ ಇಲ್‌ಮಿಯ ಬೈರುತ್ 2002)

ಹಝ್ರತ್ ಇಬ್ನ್ ಅಬ್ಬಾಸ್(ರ) ಅವರು ಹೇಳುತ್ತಾರೆ: ಹಝ್ರತ್ ಪೈಗಂಬರ್(ಸ) ಅವರು ಬದ್ರ್ ದಿನದಂದು ಅವರು ದೊಡ್ಡ ಡೇರೆಯಲ್ಲಿದ್ದರು ಆಗ **ಅಲ್ಲಾಹುಮ್ಮ ಇನ್ನೀ ಅನ್‌ಶುದುಕ ವವಲ್‌ದಕ, ಅಲ್ಲಾಹುಮ್ಮ ಇನ್ ಶಿಅ್‌ತ ಲಮ್ ತುಅ್‌ಬದ್ ಬಅ್‌ದಲ್ ಯೌಮ್** ಅಂದರೆ ಓ ನನ್ನ ಪ್ರಭು! ನಾನು ನಿನ್ನ ವಾಗ್ದಾನದ ಬಗ್ಗೆ ಪ್ರಮಾಣ ಮಾಡಿ ಹೇಳುತ್ತೇನೆ– ಓ ನನ್ನ ಪ್ರಭೂ! ಒಂದು ವೇಳೆ ನೀನು ಮುಸ್ಲಿಮರ ನಾಶವನ್ನು ಬಯಸಿದರೆ, ಇಂದಿನ ನಂತರ ನಿನ್ನನ್ನು ಆರಾಧಿಸುವವರು ಯಾರೂ ಇರುವುದಿಲ್ಲ.

ಅಷ್ಟರಲ್ಲಿ ಹಝ್ರತ್ ಅಬೂಬಕರ್(ರ) ಅವರ ಕೈ ಹಿಡಿದರು. ಅವರು ಹೇಳಿದರು, ಯಾ ರಸೂಲಲ್ಲಾಹ್(ಸ)! ಸಾಕು ಮಾಡಿ. ನೀವು(ಸ) ತಮ್ಮ ಪ್ರಭುವಿನಲ್ಲಿ ದುಆಮಾಡುವುದರಲ್ಲಿ ಬಹಳ ನಿರಂತರವಾಗಿದ್ದೀರಿ ಮತ್ತು ಆ ಸಂದರ್ಭದಲ್ಲಿ ನೀವು(ಸ) ರಕ್ಷಾಕವಚವನ್ನು ಧರಿಸಿದ್ದರು.

ಹಝ್ರತ್ ಪೈಗಂಬರ್(ಸ) ರವರು ಡೇರೆಯಿಂದ ಹೊರ ಬಂದರು ಆಗ ಅವರು ಹೀಗೆ ದುಆ ಮಾಡುತ್ತಿದ್ದರು **ಸಯುಹ್‌ಝುಮುಲ್ ಜಮ್‌ಉ ವಯುವಲ್ಲೂನದ್ದುಬುರ– ಬಲಿಸ್ಸಾಅತು ಮೌಇದುಹುಮ್ ವಸ್ಸಾಅತು ಅದ್‌ಹಾ ವ ಅಮರ್ರು** (ಅಲ್–ಖಮರ್: 46–47) ಅದು ಅವರಿಗೆ ನಿರ್ದಿಷ್ಟಪಡಿಸಿದ ಸಮಯವಾಗಿದೆ. ಆ ಘಳಿಗೆ ಅತ್ಯಂತ ಆಪತ್ಕರ ಹಾಗೂ ಅತಿ ಕಹಿಯಾಗಿ ಇರುವುದು. ಖಂಡಿತವಾಗಿಯೂ ಪಾಪಿಗಳು ಮಾರ್ಗ ಭ್ರಂಶತೆಯಲ್ಲಿ ಮತ್ತು ಹುಚ್ಚುತನದಲ್ಲಿರುತ್ತಾರೆ. (ಸಹೀಹ್ ಬುಖಾರಿ, ಕಿತಾಬುಲ್ ಜಿಹಾದ್ ವಸ್ಸೈರ್, ಹದೀಸ್–2915)

ಹಝ್ರತ್ ಅಬ್ದುಲ್ಲಾ ಬಿನ್ ಅಬ್ಬಾಸ್(ರ) ರವರು ಹೇಳುತ್ತಾರೆ, ಹಝ್ರತ್ ಉಮರ್ ಬಿನ್ ಖತ್ತಾಬ್(ರ) ಅವರು ನನಗೆ ಬದ್ರ್ ದಿನದಂದು ಹೇಳಿದರು: ಹಝ್ರತ್ ಪೈಗಬರ್(ಸ) ರವರು 1000 ಅವಿಶ್ವಾಸಿಗಳನ್ನು ಕಂಡರು ಮತ್ತು ಅವರ ಸಹಾಬರವರು ಕೇವಲ 319 ಇದ್ದರು. ಹಝ್ರತ್ ಪೈಗಂಬರ್(ಸ) ರವರು ಅಲ್ಲಾಹನ ಪ್ರವಾದಿ (ಸ) ಕಿಬ್ಲದ ಕಡೆಗೆ ತನ್ನ ಮುಖವನ್ನು ತಿರುಗಿಸಿದ ನಂತರ ತನ್ನ ಎರಡೂ ಕೈಗಳನ್ನು ಚಾಚಿ ತನ್ನ ಭಗವಂತನನ್ನು ಉಚ್ಛ ಧ್ವನಿಯಲ್ಲಿ ಕರೆದರು.

**ಅಲ್ಲಾಹುಮ್ಮ ಅನ್‌ಜಿಝ್‌ಲೀ ಮಾ ವದ್‌ತನೀ– ಅಲ್ಲಾಹುಮ್ಮ ಆತಿ ಮಾ ವದ್‌ತನೀ– ಅಲ್ಲಾಹುಮ್ಮ ಇನ್ ತುಹ್‌ಲಿಕ್ ಹಾಝಿಹಿಲ್‌ಇಸಾಬತ ಮಿನ್ ಅಹ್ಲಿಲ್ ಇಸ್ಲಾಮಿ ಲಾ ತುಅ್‌ಬದ್ ಫಿಲ್ ಅರ್ಝಿ**– ಅಂದರೆ, ಓ ಸರ್ವಶಕ್ತನಾದ ಅಲ್ಲಾಹನೇ! ನೀನು ನನಗೆ ವಾಗ್ದಾನ ಮಾಡಿದ್ದನ್ನು ಪೂರೈಸು. ಓ ಅಲ್ಲಾಹನೇ! ನೀನು ನನಗೆ ವಾಗ್ದಾನ ಮಾಡಿದ್ದನ್ನು ನನಗೆ ನೀಡು. ಓ ಅಲ್ಲಾಹನೇ! ನೀನು ಈ ಮುಸ್ಲಿಮರ ಗುಂಪನ್ನು ನಾಶಪಡಿಸಿದರೆ, ನಿನ್ನನ್ನು ಭೂಮಿಯ ಮೇಲೆ ಆರಾಧಿಸುವವರು ಯಾರೂ ಇರುವುದಿಲ್ಲ.

ಕಿಬ್ಲದ ಕಡೆಗೆ ಮುಖ ತಿರುಗಿಸಿಕೊಂಡು ಹಝ್ರತ್ ಪೈಗಂಬರ್(ಸ) ಉಚ್ಚ ಸ್ವರದಲ್ಲಿ ತನ್ನ ಪ್ರಭುವನ್ನು ಕರೆಯುತ್ತಿದ್ದರು. ಕೊನೆಗೆ ಅವರ ಹೊದಿಕೆ ಅವರ ತೋಳುಗಳಿಂದ ಕೆಳಗೆ ಬಿತ್ತು. ಹಝ್ರತ್ ಅಬೂಬಕರ್(ರ) ಅವರ ಸಮೀಪಕ್ಕೆ ಹೋಗಿ ಅವರ ಹೊದಿಕೆಯನ್ನು ಎತ್ತಿಕೊಂಡು ಪುನಃ ಅವರ ತೋಳುಗಳ ಮೇಲೆ ಹಾಕಿದರು. ಅನಂತರ ಹಝ್ರತ್ ಅಬೂಬಕರ್(ರ) ಹಝ್ರತ್ ಪೈಗಂಬರ್(ಸ)ರನ್ನು ಹಿಂದಿನಿಂದ ಅಪ್ಪಿಕೊಂಡು ಹೀಗೆ ಹೇಳಿದರು: ಹೇ ಅಲ್ಲಾಹನ ಪ್ರವಾದಿ, ನೀವು ಪ್ರಭುವಿನೊಡನೆ ಮಾಡಿದ ಪ್ರಾರ್ಥನೆಗಳು ಸಾಕು. ಅವನು ನಿಮ್ಮೊಡನೆ ಮಾಡಿದ ವಾಗ್ದಾನಗಳನ್ನು ಖಂಡಿತ ಈಡೇರಿಸುವನು. ತದ ನಂತರ ಸರ್ವಶಕ್ತನಾದ ಅಲ್ಲಾಹನು ಈ ಆಯತ್ ಅನ್ನು ಅವತರಿಸಿದನು: **ಇಝ್ ತಸ್ತಗೀಸೂನ ರಬ್ಬಕುಮ್ ಫಸ್ತಜಾಬ ಲಕುಮ್ ಇನ್ನೀ ಮುಮಿದ್ದುಕುಮ್ ಬಿಅಲ್‌ಫಿಮ್ಮಿನಲ್ ಮಲಾಯಿಕತಿ ಮುರ್‌ದಿಫೀನ್** (ಅಲ್–ಅನ್‌ಫಾಲ್: 10) ನಿಮ್ಮ ಪ್ರಭುವಿನೊಡನೆ ನೀವು ಸಹಾಯವನ್ನು ಬೇಡುತ್ತಿದ್ದ ಸಂದರ್ಭ (ಜ್ಞಾಪಿಸಿರಿ). ಆಗ ಅವನು, 'ಖಂಡಿತವಾಗಿಯೂ ಒಬ್ಬರ ನಂತರ ಇನ್ನೊಬ್ಬರಂತೆ ಬರುವ ಸಾವಿರ ದೇವದೂತರ (ಮಲಾಇಕ್) ಮೂಲಕ ನಾನು ನಿಮಗೆ ಸಹಾಯ ಮಾಡುವೆನು' ಎಂದು ಉತ್ತರ ನೀಡಿದನು. ಇದು ಸಹೀಹ್ ಮುಸ್ಲಿಮ್‌ನ ವರದಿಯಾಗಿದೆ. (ಸಹೀಹ್ ಮುಸ್ಲಿಮ್, ಕಿತಾಬುಲ್ ಜಿಹಾದ್ ವ ಸ್ಸೈರ್, ಹದೀಸ್–4588)

ಈ ಘಟನೆಯನ್ನು ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹೇಬರು ತಮ್ಮ ಪುಸ್ತಕದಲ್ಲಿ ಈ ರೀತಿ ವಿವರಿಸಿದ್ದಾರೆ, "ಹಝ್ರತ್ ಪಯಗಂಬರ್(ಸ) ಅವರು ಡೇರೆಗೆ ಹೋಗಿ ಪ್ರಾರ್ಥನೆಯಲ್ಲಿ ತಲ್ಲೀನರಾದರು. ಹಝ್ರತ್ ಅಬೂಬಕರ್(ರ) ಸಹ ಅವರೊಂದಿಗೆ ಇದ್ದರು ಮತ್ತು ಸಾದ್ ಬಿನ್ ಮುಆದ್(ರ) ಅವರ ನೇತೃತ್ವದಲ್ಲಿ ಅನ್ಸಾರ್‌ಗಳ ಗುಂಪು ಡೇರೆಯ ಸುತ್ತಲೂ ಕಾವಲು ಕಾಯುತ್ತಿದ್ದರು. ಸ್ವಲ್ಪ ಹೊತ್ತಿನ ನಂತರ ಮೈದಾನದಿಂದ ಒಂದು ಸದ್ದು ಕೇಳಿ ಬಂತು ಖುರೈಶರ ಸೈನ್ಯವು ಸಾಮಾನ್ಯದಾಳಿ ನಡೆಸಿದ್ದಾರೆ ಎಂದು ತಿಳಿದು ಬಂತು. ಆ ಸಮಯದಲ್ಲಿ ಹಝ್ರತ್ ಪೈಗಂಬರ್(ಸ.ಅ) ಅವರು ಅಲ್ಲಾಹನ ಮುಂದೆ ಕೈ ಚಾಚಿ ಬಹಳ ಕರುಣೆಯಿಂದ ಮತ್ತು ತೀವ್ರ ಆತಂಕದ ಸ್ಥಿತಿಯಲ್ಲಿ ಹೀಗೆ ಪ್ರಾರ್ಥಿಸುತ್ತಿದ್ದರು, **ಅಲ್ಲಾಹುಮ್ಮ ಇನ್ನೀ ಅನ್‌ಶುದುಕ ಅಹ್ದಕ ವ ವಅ್‌ದಕ– ಅಲ್ಲಾಹುಮ್ಮ ಇನ್ ತುಹ್‌ಲಿಕ್ ಹಾಝಿಹಿಲ್ ಇಸಾಬತ ಮಿನ್ ಅಹ್ಲಿಲ್ ಇಸ್ಲಾಮಿ ಲಾ ತುಅ್‌ಬದ್ ಫಿಲ್ ಅರ್ಝಿ**. ಅಂದರೆ ಓ ನನ್ನ ಪ್ರಭು! ಇಂದು ಈ ಕ್ಷೇತ್ರದಲ್ಲಿ ಈ ಮುಸಲ್ಮಾನರ ಗುಂಪು ನಾಶವಾದರೆ ಜಗತ್ತಿನಲ್ಲಿ ನಿನ್ನನ್ನು ಆರಾಧಿಸಲು ಯಾರೂ ಉಳಿಯಲಾರರು." ಆ ಸಂದರ್ಭದಲ್ಲಿ ಹಝ್ರತ್ ಪೈಗಂಬರ್(ಸ)ರವರು ಎಷ್ಟು ದುಃಖಿತರಾಗಿದ್ದರು ಎಂದರೆ ಅವರು ಸಜದ ಮಡುತ್ತಿದ್ದರು ಮತ್ತು ನಿಂತುಕೊಂಡು ಅಲ್ಲಾಹನನ್ನು ಕೂಗುತ್ತಿದ್ದರು ಮತ್ತು ಅವರ(ಸ) ಹೊದಿಕೆಯು ತೋಳಗಳಿಂದ ಕೆಳಗೆ ಬೀಳುತ್ತಿತ್ತು ಮತ್ತು ಹಝ್ರತ್ ಅಬೂಬಕರ್(ರ)ರವರು ಅದನ್ನು ಎತ್ತಿಕೊಂಡು ಅವರ ಮೇಲೆ

ಹಾಕುತ್ತಿದ್ದರು. ಹಝ್ರತ್ ಅಲಿ(ರ.ಅ) ಹೇಳುತ್ತಾರೆ, ನನಗೆ ಯುದ್ಧ ಮಾಡುವಾಗ ರಸೂಲುಲ್ಲಾಹ್(ಸ)ರವರ ಬಗ್ಗೆ ನೆನಪಾಗುತ್ತಿತ್ತು ನಾನು ತಕ್ಷಣ ಅವರು ಇದ್ದ ಡೇರೆಯ ಕಡೆಗೆ ಓಡಿಹೋಗುತ್ತಿದ್ದೆ ಆದರೆ ನಾನು ಹೋದಾಗಲೆಲ್ಲಾ ಅವರು (ಸ.ಅ) ಸಜದದಲ್ಲಿ ದುಃಖದಿಂದ ಅಲ್ಲಾಹನಲ್ಲಿ ದುಆ ಮಾಡುತ್ತಿರುವವುದಾಗಿ ಕಂಡುಕೊಂಡೆ. ಮತ್ತು ಹಝ್ರತ್ ಪೈಗಂಬರ್(ಸ)ರವರು ಹೀಗೆ ದುಆ ಮಾಡುತ್ತಿದ್ದರು **ಯಾ ಹಯ್ಯು ಯಾ ಖೈಯೂಮು ಯಾ ಹಯ್ಯು ಯಾ ಖೈಯೂಮು**– ಅಂದರೆ, "ಓ ನನ್ನ ಜೀವಂತ ದೇವರೇ! ಓ ನನ್ನನ್ನು ಜೀವ ನೀಡುವ ಗುರುವೇ!" ಹಝ್ರತ್ ಅಬೂಬಕರ್(ರ) ಅವರು ಹಝ್ರತ್ ಪೈಗಂಬರ್(ಸ) ಅವರ ಈ ಸ್ಥಿತಿಯನ್ನು ಕಂಡು ಆತಂಕಕ್ಕೊಳಗಾಗುತ್ತಿದ್ದರು ಮತ್ತು ಕೆಲವೊಮ್ಮೆ ಸ್ವಯಂಪ್ರೇರಿತವಾಗಿ ಹೇಳುತ್ತಿದ್ದರು, ಯಾ ರಸೂಲಲ್ಲಾಹ್(ಸ)! ನನ್ನ ತಂದೆ–ತಾಯಿಗಳು ನಿಮ್ಮ ಮೇಲೆ ಅರ್ಪಿತವಾಗಲಿ. ನೀವು ಭೀತಿಗೊಳಗಾಗಬೇಡಿ. ಅಲ್ಲಾಹನು ತನ್ನ ವಾಗ್ದಾನಗಳನ್ನು ಖಂಡಿತವಾಗಿ ಪೂರೈಸುತ್ತಾನೆ, ಆದರೆ ಈ ನಿಜವಾದ ಮಾತಿನ ಪ್ರಕಾರ, ಪರ್ಷಿಯನ್ ಮಾತು, "ಹರ್ ಆರಿಫ್ ತರ್ ಅಸ್ತ್ ತರ್ಸಾಂ ತರ್" ಅಂದರೆ ಯಾರು ಯಷ್ಟರ ಮಟ್ಟಿನ ದೈವಜ್ಞಾನ ಹೊಂದಿರುತ್ತಾರೊ ಅಷೇ ಮಟ್ಟಿಗೆ ಆತನು ಭಯಭೀತನಗುತ್ತಾನೆ." ಹೀಗೆ ರಸೂಲುಲ್ಲಾಹ್(ಸ)ರವರು ದುಆವಿನಲ್ಲಿ ತಲ್ಲೀನರಾಗಿದ್ದರು.

(ಸೀರತ್ ಖಾತಮನ್ನಬೀಈನ್, ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ ಎಂ.ಎ(ರ), ಪುಟ–361)

ತವಕ್ಕುಲ್ ಎಂದರೇನು? ಹಝ್ರತ್ ಮುಸ್ಲೆಹ್ ಮೌಊದ್(ರ). ರವರು ಈ ಘಟನೆಯನ್ನು ವಿವರಿಸುತ್ತಾ ಹೇಳಿದ್ದಾರೆ. "ಹಝ್ರತ್ ಪೈಗಂಬರ್(ಸ) ಅವರು ಬದ್ರ್ ಸ್ಥಳದಲ್ಲಿ ಸಹಾಬರವರನ್ನು ಪಂಕ್ತಿಗಳಲ್ಲಿ ನಿಲ್ಲಿಸಿದರು. ಅವರನ್ನು ಆಯಾ ಸ್ಥಳಗಳಲ್ಲಿ ಇರಿಸಿದರು. ಈ ರೀತಿ ಯುದ್ಧ ಮಾಡುವಂತೆ ಸಲಹೆ ನೀಡಿದ ಅವರು ಬಳಿಕ ವೇದಿಕೆಯ ಮೇಲೆ ಕುಳಿತು ದುಆವಿನಲ್ಲಿ ತಲ್ಲೀನರಾದರು. ಅವರು ಮದೀನಾದಲ್ಲಿ ಸಹಾಬರನ್ನು ಬಿಟ್ಟು ತಾವು ಸ್ವತಃ ಅಲ್ಲಿ ಬಂದು ಕುಳಿತು ದುಆ ಮಾಡಲು ಪ್ರಾರಂಬಿಸಲಿಲ್ಲ ಬದಲಿಗೆ, ಅವರು ಮೊದಲು ಸಹಬಾಗಳನ್ನು ಯುದ್ಧದ ಸ್ಥಳಕ್ಕೆ ಕರೆದೊಯ್ದರು, ನಂತರ ಅವರನ್ನು ಸಂಘಟಿಸಿ ಸಲಹೆ ನೀಡಿದರು. ತದನಂತರ ಅವರು ಅಟ್ಟದ ಮೇಲೆ ಕುಳಿತು ದುಆ ಮಾಡಲು ಪ್ರಾರಂಭಿಸಿದರು. ಇಂತಹ ತವಕ್ಕಲ್ ಅನ್ನು ಪಡೆದುಕೊಳ್ಳಬೇಕು."

(ತಫ್ಸೀರ್ ಕಬೀರ್, ಸಂಪುಟ 6, ಪುಟ 541)

ಇದರ ಅರ್ಥವೇನೆಂದರೆ, ಸಾಧನೆಗಳನ್ನು ಸಹ ಬಳಸಬೇಕು, ಒಬ್ಬ ವ್ಯಕ್ತಿಯು ತನ್ನ ಸ್ವಂತ ಪ್ರಯತ್ನದಿಂದ ಏನು ಮಾಡಬಹುದೋ ಅದನ್ನು ಮಾಡಬೇಕು ತದನಂತರ ದುಆ ಸಹ ಮಾಡಬೇಕು. ಇದನ್ನು ತವಕ್ಕಲ್ ಎಂದು ಕರೆಯಲಾಗುತ್ತದೆ.

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಸತ್ಯನಿಷೇಧಿಗಳ ಮೇಲೆ ಹಝ್ರತ್ ಪೈಗಂಬರ್(ಸ)ರಿಗೆ ವಿಜಯ ನೀಡುವುದಾಗಿ ಪವಿತ್ರ ಖುರ್ಆನಿನಲ್ಲಿ ಪದೇ ಪದೇ ವಾಗ್ದಾನ ನೀಡಲಾಗಿತ್ತು. ಆದರೆ ಇಸ್ಲಾಮಿನ ಮೊದಲ ಯುದ್ಧವಾದ ಬದ್ರ್ ಕದನ ಶುರುವಾದಾಗ ಹಝ್ರತ್ ಪೈಗಂಬರ್(ಸ) ಅಳುವುದನ್ನು ಮತ್ತು ದುಆ ಮಾಡುವುದನ್ನು ಆರಂಭಿಸಿದರು. ಅಳುತ್ತಾ ಅವರ ನಾಲಗೆಯಿಂದ ಹೀಗೊಂದು ವಾಕ್ಯ ಹೊರಟಿತು: **ಅಲ್ಲಾಹುಮ್ಮ ಇನ್ ಅಹ್ಲಕ್ತ ಹಾಝಿಹಿಲ್ ಅಸಾಬತ ಫಲನ್ ತಅ್ಬದ ಫಿಲ್ ಅರ್ಝಿ ಅಬದ** ಅಂದರೆ ಹೇ ನನ್ನ ಪ್ರಭೂ, ಕೇವಲ ಮುನ್ನೂರ ಹದಿಮೂರು ವ್ಯಕ್ತಿಗಳನ್ನು ಹೊಂದಿರುವ ಈ ಸಂಘವನ್ನು ಇಂದು ನೀನು ನಾಶ ಮಾಡಿದರೆ, ಕೊನೆಗಾಲದ ವರೆಗೆ ನಿನ್ನನ್ನು ಯಾರೂ ಆರಾಧಿಸಲಾರರು. ಹಝ್ರತ್ ಅಬೂಬಕರ್(ರ) ರವರು ಹಝ್ರತ್ ಪೈಗಂಬರ್(ಸ) ಅವರ ಬಾಯಿಯಿಂದ ಈ ಮಾತುಗಳನ್ನು ಕೇಳಿದಾಗ ಅವರು ಹೇಳಿದರು, ಯಾ ರಸೂಲಲ್ಲಾಹ್(ಸ)! ನಿಮಗೇಕೆ ಇಷ್ಟೊಂದು ಚಡಪಡಿಕೆ? ಸರ್ವಶಕ್ತನಾದ ಅಲ್ಲಾಹನು ನಿಮಗೆ ಜಯ ನೀಡುವನೆಂದು ದೃಢವಾದ ವಾಗ್ದಾನವನ್ನು ನೀಡಿದ್ದಾನೆ. ಅದಕ್ಕೆ ಹಝ್ರತ್ ಪೈಗಂಬರ್(ಸ) ಅವರು ಉತ್ತರಿಸಿದರು ಹೌದು ಇದು ನಿಜ, ಆದರೆ ಇದು ಅನಗತ್ಯ, ಅಂದರೆ ವಾಗ್ದಾನವನ್ನು ಪೂರೈಸುವುದು ಸರ್ವಶಕ್ತನಾದ ಅಲ್ಲಾಹನ ಮೇಲೆ ಕಡ್ಡಾಯವಲ್ಲ."

(ಝಮೀಮ ಬರಾಹೀನೆ ಅಹ್ಮದಿಯಾ, ಭಾಗ–5, ರೂಹಾನಿ ಖಝಾಈನ್, ಸಂಪುಟ–21, ಪುಟ–255–256)

ಸರ್ವಶಕ್ತನಾದ ಅಲ್ಲಾಹನು ತುಂಬಾ ಕರುಣಾಮಯಿಯಾಗಿದ್ದಾನೆ ಆದ್ದರಿಂದ ನಾವು ಪ್ರತಿ ಬಾರಿ ಭಯಪಡಬೇಕು ಮತ್ತು ಚಿಂತಿಸಬೇಕು.

ಹಝ್ರತ್ ಪೈಗಂಬರ್(ಸ) ಚಪ್ಪರದಲ್ಲಿ ಪ್ರಾರ್ಥಿಸುತ್ತಿದ್ದಾಗ ತೂಕಡಿಕೆ ಬಂತು. ಅನಂತರ ಅಚಾನಕ್ಕಾಗಿ ಎಚ್ಚರಗೊಂಡು ಹೀಗೆ ಹೇಳಿದರು: ಹೇ ಅಬೂಬಕರ್, ಖುಶಿಪಡು. ನಿಮ್ಮ ಪರಿಪಾಲಕನ ಸಹಾಯ ಬಂದಿದೆ. ನೋಡಿರಿ, ಜಬ್ರೀಲ್ ತನ್ನ ಕುದುರೆಯ ಲಗಾಮು ಹಿಡಿದುಕೊಂಡು ಅದನ್ನು ಚಲಾಯಿಸುತ್ತಿದ್ದಾರೆ. ಅದರ ಕಾಲುಗಳಲ್ಲಿ ಧೂಳಿನ ಗುರುತುಗಳಿವೆ.

(ಸೀರತ್ ಇಬ್ನೆ ಹಿಶ್ಶಾಮ್, ಪುಟ–428, ದಾರುಲ್ ಕುತುಬ್ ಇಲ್ಮಿಯ ಬೈರೂತ್ 2001) ಸೀರತ್ ಇಬ್ನೆ ಹಿಶ್ಶಾಮ್‌ನ ಈ ವರದಿಯಾಗಿದೆ.

ಮತ್ತೊಂದು ವರದಿಯಲ್ಲಿ ಹೀಗಿದೆ ಹಝ್ರತ್ ಪೈಗಂಬರ್(ಸ) ರವರು ಹೇಳಿದರು ಅಬೂಬಕರ್! ನಿಮಗೆ ಸಂತಸದ ಸುದ್ದಿ ಇದೆ ಇದು ಹಳದಿ ಪೇಟವನ್ನು ಧರಿಸಿ, ಭೂಮಿ ಮತ್ತು ಆಕಾಶದ ನಡುವೆ ತನ್ನ ಕುದುರೆಗಳ ಲಗಾಮನ್ನು ಹಿಡಿದಿರುವ ಜಿಬ್ರೀಲ್ ಆಗಿದ್ದಾರೆ. ಅವರು ನೆಲದ ಮೇಲೆ ಇಳಿದಾಗ, ಅವರು ಸ್ವಲ್ಪ ಸಮಯದವರೆಗೆ ನನ್ನಿಂದ ಕಣ್ಮರೆಯಾದರು ಮತ್ತು ನಂತರ ಮತ್ತೆ ಕಾಣಿಸಿಕೊಂಡರು. ಅವರ ಕುದುರೆಯ ಪಾದಗಳು ಧೂಳಿನಿಂದ ಆವೃತವಾಗಿತ್ತು. ಅವರು ಪ್ರಾರ್ಥಿಸಿದಾಗ ಅಲ್ಲಾಹನ ಸಹಾಯವು ತನಗೆ ಬಂದಿತು ಎಂದು ಅವರು ಹೇಳುತ್ತಿದ್ದರು. (ಸಬ್ಲುಲ್ ಹುದಾ ವರ್‌ರಶಾದ್, ಸಂಪುಟ–4, ಪುಟ–37, ದಾರುಲ್ ಕುತುಬ್ ಇಲ್ಮಿಯಾ ಬೈರೂತ್)

ಬದ್ರ್ ಮೈದಾನದಲ್ಲಿ ಹಝ್ರತ್ ಪೈಗಂಬರ್(ಸ)ರ ಪಾಲ್ಗೊಳ್ಳುವಿಕೆ, ಯುದ್ಧದಲ್ಲಿ ಅವರ ವೈಯಕ್ತಿಕ ಪಾಲ್ಗೊಳ್ಳುವಿಕೆಯ ಬಗ್ಗೆ ಬರೆಯಲಾಗಿದೆ, ಹಝ್ರತ್ ಪೈಗಂಬರ್(ಸ) ಅವರು ಬದರ್ ಯುದ್ಧದಲ್ಲಿ ಬಲಭಾಗದಲ್ಲಿ ಝುಬೈರ್ ಬಿನ್ ಅವಾಮ್(ರ) ಅವರನ್ನು ನೇಮಿಸಿದರು. ಅವರು ಮುಖ್ದಾದ್ ಬಿನ್ ಅಮ್ರ್(ರ) ಅವರನ್ನು ಎಡಭಾಗದಲ್ಲಿ ಮತ್ತು ಖೈಸ್ ಬಿನ್ ಅಬಿ ಸಅ್ಸಾ ಅವರನ್ನು ಕಾಲಾಳು ಸೈನ್ಯದ ಅಧಿಕಾರಿಯನ್ನಾಗಿ ಮಾಡಿದರು. ಹಝ್ರತ್ ಪೈಗಂಬರ್(ಸ) ಸೇನಾಧಿಪತಿಯಾಗಿದ್ದರು. ಅವರು ಮುಂದಿನ ಪಂಕ್ತಿಗಳಲ್ಲಿ ಇದ್ದರು. ಹಝ್ರತ್ ಪೈಗಂಬರ್(ಸ) ಎಲ್ಲಾ ಸಹಾಬರವರಿಗೆ ತಮ್ಮ ಮಾರ್ಗದರ್ಶನಕ್ಕೆ ಹಝ್ರತ್ ಪೈಗಂಬರ್(ಸ) ಅವರು ಹೇಳಿದರು, ನಾನು ಅವರ ಮುಂದೆ ಇರುವವರೆಗೆ ನಿಮ್ಮಲ್ಲಿ ಯಾರೂ ಮುನ್ನಡೆಯಬಾರದು. ಅದೇ ರೀತಿಯಲ್ಲಿ, ಹಝ್ರತ್ ಪೈಗಂಬರ್(ಸ) ಅವರು ಆಯುಧಗಳನ್ನು ಉದ್ದೇಶಪೂರ್ವಕವಾಗಿ ಬಳಸುವುದನ್ನು ಪ್ರೋತ್ಸಾಹಿಸಿದರು ಮತ್ತು ಶತ್ರುಗಳು ನಿಮ್ಮ ವ್ಯಾಪ್ತಿಯಲ್ಲಿ ಬಂದಾಗ, ಬಾಣಗಳನ್ನು ಹೊಡೆದು ಬಾಣಗಳನ್ನು ಸಾಧ್ಯವಾದಷ್ಟು ಉಳಿಸಬೇಕು ಎಂದು ಉಪದೇಶಿಸಿದರು.

ಕೂತು ದುಆ ಮಾಡುವ ಘಟನೆಯೆಲ್ಲ ಈ ಇಡೀ ಯುದ್ಧ ಪ್ರಾರಂಭವಾಗುವ ಮುನ್ನ ನಡೆದ ಘಟನೆಯಾಗಿದೆ, ಹೀಗೆ ಬರೆದಿರುವುದರಿಂದ ಬಹುಶಃ ಹಝ್ರತ್ ಪೈಗಂಬರ್(ಸ) ಯುದ್ಧದಲ್ಲಿ ಭಾಗವಹಿಸಲಿಲ್ಲ ಎಂದು ತಿಳಿಯಬಹುದು. ಹಝ್ರತ್ ಪೈಗಂಬರ್(ಸ) ಉಪಸ್ಥಿತರಿದ್ದರು, ಆದರೆ ಅವರು ಮೊದಲು ಈ ಪ್ರಾರ್ಥನೆಯನ್ನು ಮಾಡಿದರು, ಇದರ ಪರಿಣಾಮವಾಗಿ ದೇವದೂತರುಗಳ ಸಹಾಯವನ್ನು ಅಲ್ಲಾಹನು ಕಳುಹಿಸಿದನು. ಆದಾಗ್ಯೂ, ಬದ್ರ್ ಯುದ್ಧಭೂಮಿಯಲ್ಲಿ ಹಝ್ರತ್ ಪೈಗಂಬರ್(ಸ) ರವರ ನಿಜವಾದ ಭಾಗವಹಿಸುವಿಕೆಯ ಬಗ್ಗೆ, ಹಝ್ರತ್ ಅಲಿ(ರ) ಹೇಳುತ್ತಾರೆ: ನಾವು ಬದ್ರ್ ದಿನದಂದು ಹಝ್ರತ್ ಅಲಿ(ರ) ಹೇಳುತ್ತಾರೆ: ನಾವು ಯುದ್ಧದಂದು ಹಝ್ರತ್ ಪೈಗಂಬರ್(ಸ)ರ ಆಶ್ರಯ ಪಡೆಯುತ್ತಿದ್ದೆವು. ಹಝ್ರತ್ ಪೈಗಂಬರ್(ಸ) ಶತ್ರುಗಳಿಗೆ ಬಹಳ ಸಮೀಪವಾಗಿ ಇದ್ದರು. ಎಲ್ಲ ಯೋಧರಿಗಿಂತ ಉತ್ತಮವಾಗಿ ಹಝ್ರತ್ ಪೈಗಂಬರ್(ಸ) ಯುದ್ಧ ಮಾಡುತ್ತಿದ್ದರು. (ದಾಎರ' ಮಾರಿಫ್–ಎ–ಸೀರತ್ ಮುಹಮ್ಮದ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವಸಲ್ಲಂ, ಸಂಪುಟ 6, ಪುಟ 174 ಮತ್ತು 201, ಬಿಜ್ಮ್ ಇಕ್ಬಾಲ್, ಲಾಹೋರ್, ಏಪ್ರಿಲ್ 2022)

ಯುದ್ಧದ ಮೈದಾನದಲ್ಲಿ ಖುರೈಷಿಗಳ ಸೇನೆಯ ಆಗಮನ ಮತ್ತು ಅವರ ನಡುವಿನ ಭಿನ್ನಾಭಿಪ್ರಾಯಗಳು, ಸಂಭವಿಸಿದ ಭಿನ್ನಾಭಿಪ್ರಾಯಗಳ ಬಗ್ಗೆ ಬರೆಯಲಾಗಿದೆ, ಖುರೈಷಿಗಳು ಬದ್ರ್ ಮೈದಾನದಲ್ಲಿ ಬಂದಿಳಿದಾಗ ಅವರು ಉಮೈರ್ ಬಿನ್ ವಹ್ಬ್ ಅವರನ್ನು ಮುಹಮ್ಮದ್(ಸ) ಅವರೊಂದಿಗೆ ಎಷ್ಟು ಯೋಧರಿದ್ದಾರೆ ಎಂದು ನೋಡಲು ಕಳುಹಿಸಿದರು. ಆದ್ದರಿಂದ ಉಮೈರ್ ತನ್ನ ಕುದುರೆಯನ್ನು ಇಸ್ಲಾಮಿನ ಸೈನ್ಯದ ಸುತ್ತಲೂ ಓಡಿಸಿದ ನಂತರ ಖುರೈಷರಿಗೆ ಬಂದು ಹೇಳಿದರು, "ನನ್ನ ಅಭಿಪ್ರಾಯದಲ್ಲಿ, ಈ ಜನರು ಸುಮಾರು ಮುನ್ನೂರು ಅಥವಾ ಅದಕ್ಕಿಂತ ಹೆಚ್ಚು ಕಡಿಮೆ ಇರಬಹುದು." ನಂತರ ಅವರು ಇಸ್ಲಾಂನ ಸೈನ್ಯಕ್ಕೆ ಸಹಾಯ ಮಾಡಲು ಹೊಂಚುದಾಳಿಯಲ್ಲಿ ಅಡಗಿರುವ ಸ್ಥಳವಿದೆಯೇ ಎಂದು ನೋಡಲು ಹಿಂತಿರುಗಿದರು. ಉಮೈರ್ ಬಿನ್ ವಾಹಿಬ್ ತನ್ನ ಕುದುರೆಯನ್ನು ಓಡಿಸಿ ದೂರಕ್ಕೆ ಹೋಗಿ ಹಿಂತಿರುಗಿ ಬಂದು ಅವರ ಸಹಾಯ ಬಗ್ಗೆ ತಿಳಿಯುತ್ತಿಲ್ಲ, ಆದರೆ ಓ ಖುರೈಷ್ ಜನರೇ! ನಿಮ್ಮ ಮೇಲೆ ಸಾವಿನ ಆತ್ಮಗಳು ಬರುತ್ತಿರುವುದನ್ನು ನಾನು ನೋಡಿದ್ದೇನೆ. ಹೆಣಗಳನ್ನು ಹೊತ್ತೊಯ್ಯುವ ಒಂಟೆಗಳನ್ನು ನೋಡಿದ್ದೇನೆ. ಯಾಥ್ರಿಬ್‌ನ ಒಂಟೆಗಳು ಖಚಿತವಾದ ಮರಣವನ್ನು ಹೊತ್ತೊಯ್ಯುತ್ತವೆ, ಅವು ಯಾವುದೇ ರಕ್ಷಣಾ ಸಾಧನಗಳಿಲ್ಲದ ಮತ್ತು ಕತ್ತಿಗಳನ್ನು ಹೊರತುಪಡಿಸಿ ಆಶ್ರಯವಿಲ್ಲದ ಜನರಾಗಿದ್ದಾರೆ. ಅವರು ನಮ್ಮಲ್ಲಿ ಒಬ್ಬನನ್ನು ಕೊಲ್ಲುವವರೆಗೂ ಅವರಲ್ಲಿ ಯಾರೂ ಕೊಲ್ಲಲ್ಪಡುವುದಿಲ್ಲ. ಅವರವರ ಲೆಕ್ಕಕ್ಕೆ ತಕ್ಕಂತೆ ನಮ್ಮ ಗಂಡಸರನ್ನು ಕೊಂದು ಹಾಕಿದರೆ, ಆ ನಂತರದ ಬದುಕಿನಲ್ಲಿ ಯವ ಸ್ವಾದ ಇರುವುದು? ಈಗ ನೀವು ಏನು ಸೂಕ್ತವಾಗಿರುತ್ತದೆಯೋ ಅದನ್ನು ಮಾಡಿರಿ. ಆತನು ಎಲ್ಲವನ್ನೂ ಪರಿಶೀಲಿಸಿದ ನಂತರ ತನ್ನ

ಅಭಿಪ್ರಾಯವನ್ನು ಪ್ರಸ್ತುತಪಡಿಸಿದನು.

ಈ ಮಾತುಗಳನ್ನು ಕೇಳಿದ ನಂತರ ಹಕೀಮ್ ಬಿನ್ ಹಝೀಮ್ ಉತ್ಬಹ್ ಬಿನ್ ರಬಿಯಾ ಅವರ ಬಳಿಗೆ ಬಂದು ಹೇಳಿದನು: ನೀವು ಖುರೈಷಿಗಳಲ್ಲಿ ಬಹಳ ಗೌರವಾನ್ವಿತರು ಹಾಗೂ ನಾಯಕರಾಗಿದ್ದೀರಿ. ಆದ್ದರಿಂದ ಜನರನ್ನು ಹಿಂದಕ್ಕೆ ಕರೆದೊಯ್ದು ಅಮ್ರ್ ಬಿನ್ ಹಝ್ರಮಿಯ ರಕ್ತದ ದಂಡವನ್ನು ಪಾವತಿಸಿರಿ. ಅದಕ್ಕೆ ಉತ್ಬ ಹೇಳಿದನು ನಾನು ಇದಕ್ಕೆ ಒಪ್ಪುತ್ತೇನೆ. ಆದ್ದರಿಂದ ನೀವು ಇಬ್ನ್ ಹಂಝುಲ ಅಂದರೆ ಅಬೂಜಹಲ್, ಅಬೂಜಹಲ್‌ನ ತಾಯಿಯ ಹೆಸರು ಹಂಝುಲ ಎಂದಾಗಿತ್ತು, ಅವರ ಬಳಿ ಹೋಗಿ. ಆದ್ದರಿಂದ ಹಕೀಮ್ ಬಿನ್ ಹಿಝಾಮ್ ಈ ಉದ್ದೇಶಕ್ಕಾಗಿ ಅಬೂಜಹಲ್ ಬಳಿಗೆ ಹೋಗಿ ನನಗೆ ಉತ್ಬಾ ಕಳುಹಿಸಿರುವನು ಅದಕ್ಕೆ ಕಾರಣ ಅವರು ರಕ್ತದ ದಂಡವನ್ನು ಪಾವತಿಸಲು ಸಿದ್ಧವಾಗಿದ್ದಾರೆ ಆದ್ದರಿಂದ ನೀವು ಖುರೈಷರನ್ನು ಕರೆದುಕೊಂಡು ವಾಪಸ್ ಆಗಿರಿ ಎಂದು ಹೇಳಿದನು. ಅದಕ್ಕೆ ಅಬೂಜಹಲ್ ಹೇಳಿದನು ಉತ್ಬಾ ಯಾವಾಗಿಂದ ಮುಹಮ್ಮದ್(ಸ) ಅವರನ್ನು ನೋಡಿದ ನಂತರ, ಅವನು ಭಯಭೀತನಾಗಿದ್ದಾನೆ ಮತ್ತು ಹೇಡಿತನವನ್ನು ತೋರಿಸಲು ಪ್ರಾರಂಭಿಸಿದ್ದಾನೆ. ಇದು ಅಸಾಧ್ಯ.

ಅಲ್ಲಾಹನ ಆಣೆ! ನಮ್ಮ ಮತ್ತು ಮುಹಮ್ಮದ್ ನಡುವೆ ಅಲ್ಲಾಹನು ನಿರ್ಧರಿಸುವವರೆಗೂ ನಾವು ಹಿಂತಿರುಗುವುದಿಲ್ಲ. ಮುಸ್ಲಿಮರು ನಮಗೆ ಒಂಟೆಯ ಮರಿಯಂತಿದ್ದಾರೆ, ಅಂದರೆ ನಾವು ಅವರನ್ನು ಬಹಳ ಸುಲಭವಾಗಿ ಕೊಲ್ಲುತ್ತೇವೆ ಎಂದು ತಿಳಿದಿರುವ ಕಾರಣ ಉತ್ಬಾ ನಮ್ಮನ್ನು ಯುದ್ಧದಿಂದ ತಡೆಯುತ್ತಿದ್ದಾನೆ ಮತ್ತು ಈ ಮುಸ್ಲಿಮರಲ್ಲಿ ಉತ್ಬಾನ ಮಗನೂ ಇದ್ದಾನೆ ಎಂದು ಅಬು ಜಹಲ್ ಹೇಳಿದನು. ಉತ್ಬಾನ ಮಗ ಮುಸಲ್ಮಾನನಾದ. ಬಹುಶಃ ಅವನು ತನ್ನ ಮಗನ ಕಾರಣದಿಂದಾಗಿ ಯುದ್ಧವಾಡಲು ಬಯಸುವುದಿಲ್ಲ. ಉತ್ಬಾ ಅವರ ಈ ಮಗ ಹಝ್ರತ್ ಅಬು ಹುಝೈಫಾ(ರ) ಅವರು ಮುಸ್ಲಿಮರ ಪರವಾಗಿ ಬದ್ರ್ ಮೈದಾನದಲ್ಲಿ ಉಪಸ್ಥಿತರಿದ್ದರು. ಉತ್ಬಾಗೆ ಅಬು ಜಹಲ್‌ನ ಈ ಹೇಡಿತನದ ಸುದ್ದಿ ತಿಳಿದಾಗ, ಈ ಹೇಡಿ ಅಂದರೆ ಅಬು ಜಹಲ್‌ಗೆ ಯಾರು ಹೇಡಿ ಮತ್ತು ಯಾರು ಹೆದರುತ್ತಾರೆ ಎಂದು ಶೀಘ್ರದಲ್ಲೇ ತಿಳಿಯುತ್ತದೆ ಎಂದು ಹೇಳಿದರು.

(ಸೀರತ್ ಇಬ್ನ್ ಹಿಶಾಮ್, ಪುಟಗಳು 424 ರಿಂದ 426, ದಾರುಲ್ ಕುತುಬ್ ಇಲ್ಮಿಯ ಬೈರೂತ್ 2001)

ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ಅದರ ವಿವರಗಳನ್ನು ವಿವರಿಸುತ್ತಾ ಹೇಳುತ್ತಾರೆ: ಈಗ ಸೈನ್ಯಗಳು ಪರಸ್ಪರರ ಮುಂದೆ ಇದ್ದವು. ಮೊದಲು, ಸೈನ್ಯಗಳು ಯುದ್ಧದ ಸ್ಥಿತಿಯಲ್ಲಿ ಒಟ್ಟುಗೂಡುತ್ತಿದ್ದವು ಮತ್ತು ಭಾರೀ ಸೈನ್ಯವು ಅವಿಶ್ವಾಸಿಗಳದ್ದಾಗಿತ್ತು, ಆ ಸಮಯದಲ್ಲಿ ಹಝ್ರತ್ ಪೈಗಂಬರ್(ಸ) ಅವರು ದುಆವಿನಲ್ಲಿ ತಲ್ಲೀನರಾಗಿದ್ದರು. ಸೈನ್ಯಗಳು ಮುಂದೆ ಬಂದಾಗ, ಯುದ್ಧವು ಪ್ರಾರಂಭವಾಗುವ ಸಂದರ್ಭದಲ್ಲಿ ಹಝ್ರತ್ ಪೈಗಂಬರ್(ಸ) ಸಹ ಯುದ್ಧಭೂಮಿಯಲ್ಲಿದ್ದರು. ಅವರು ಹೇಳಿದರು, ಈಗ ಸೈನ್ಯಗಳು ಪರಸ್ಪರ ಎದುರು ನಿಂತಿವೆ, ಆದರೆ ಆ ಸಮಯದಲ್ಲಿ ಸೈನ್ಯದ ವ್ಯವಸ್ಥೆಯು ಖುರೈಷರ ಇಸ್ಲಾಮಿಕ್ ಸೈನ್ಯವು ನಿಜವಾದ ಸಂಖ್ಯೆಗಿಂತ ಹೆಚ್ಚಿನದಾಗಿದೆ ಎಂದು ತೋರುತ್ತಿದೆ ಎಂಬುದು ದೈವಿಕಶಕ್ತಿಯ ವಿಚಿತ್ರ ಪ್ರದರ್ಶನವಾಗಿದೆ. ಎರಡು ಬಾರಿ. ಇದರಿಂದಾಗಿ ನಾಸ್ತಿಕರು ಭಯಭೀತರಾಗಿದ್ದರು ಮತ್ತು ಮತ್ತೊಂದೆಡೆ ಖುರೈಶ್ ಸೈನ್ಯವು ಮುಸ್ಲಿಮರಿಗೆ ಅವರ ನಿಜವಾದ ಸಂಖ್ಯೆಗಿಂತ ಕಡಿಮೆ ಕಾಣುತ್ತಿತ್ತು. ಪರಿಣಾಮವಾಗಿ, ಮುಸ್ಲಿಮರ ಹೃದಯವು ದೃಢಗೊಂಡಿತು.

ಇಸ್ಲಾಮಿನ ಸೈನ್ಯದ ನಿಖರ ಸಂಖ್ಯೆಯನ್ನು ಕಂಡುಹಿಡಿಯುವ ಪ್ರಯತ್ನವು ಖುರೈಶ್‌ನ ಬಿಟ್ಟು ಹೋಗಿರುವ ಹೃದಯಗಳನ್ನು ಬೆಂಬಲಿಸಲು ಪ್ರಯತ್ನಿಸಿತು. ಯಾರ ಹೃದಯಗಳು ಹೆದರುತ್ತಿದ್ದವೋ ಅವರನ್ನು ಬೆಂಬಲಿಸಲು. ಇದಕ್ಕಾಗಿ, ಖುರೈಶ್ ನಾಯಕರು ಉಮೈರ್ ಬಿನ್ ವಾಹ್ಬ್ ಅವರನ್ನು ಇಸ್ಲಾಮಿನ ಸೈನ್ಯದ ಸುತ್ತಲೂ ಕುದುರೆ ಓಡಿಸಲು ಕಳುಹಿಸಿದರು ಮತ್ತು ಅವರ ಹಿಂದೆ ಯಾವುದೇ ಬಲವರ್ಧನೆ ಅಡಗಿದೆಯೇ ಎಂದು ನೋಡಲು ಕಳುಹಿಸಿದರು. ಆದ್ದರಿಂದ ಉಮೈರ್ ಕುದುರೆಯ ಮೇಲೆ ಸವಾರಿ ಮಾಡಿ ಮುಸ್ಲಿಮರ ಸುತ್ತಲೂ ಸುತ್ತಿದನು, ಆದರೆ ಮುಸ್ಲಿಮರ ನೋಟದಿಂದ ಅವನು ಅಂತಹ ಮಹಿಮೆ ಮತ್ತು ದೃಢತೆ ಮತ್ತು ಸಾವಿನ ಬಗ್ಗೆ ಅಸಡ್ಡೆಯನ್ನು ಕಂಡನು, ಅವನು ಆಘಾತದ ಸ್ಥಿತಿಯಲ್ಲಿ ಹಿಂದಿರುಗಿದನು ಮತ್ತು ಖುರೈಷಿಗಳನ್ನು ಉದ್ದೇಶಿಸಿ ಹೇಳಿದನು, ಎಲೈ ಖುರೈಶೀ ಸಮೂಹವೇ, ಮುಸ್ಲಿಮರ ಸೈನ್ಯದಲ್ಲಿ ಒಂಟೆಗಳು ವ್ಯಕ್ತಿಗಳ ಬದಲಾಗಿ ಮೃತದೇಹಗಳನ್ನು ಎತ್ತಿಕೊಂಡಿದ್ದಾಗಿ ನಾನು ನೋಡಿರುವೆನು. (ಎಂದರೆ ಅವರು ಸಾಯಲು ತಯಾರಾಗಿ ಬಂದಿರುವರು) ಇದನ್ನು ಕೇಳಿದಾಗ ಖುರೈಶಿಗಳಲ್ಲಿ ಕಳವಳ ಹರಡಿತು.

ಅವರ ಜಾಮೀನುದಾರನಾಗಿ ಬಂದ ಸುರಾಕನು ಎಷ್ಟು ಬೆದರಿ ಹಿಂದಕ್ಕೆ ಓಡಿಹೋದನು. ಜನರು ಅವನನ್ನು ತಡೆದಾಗ ಅವನು ಹೇಳಿದನು ನನು ನೋಡುತ್ತಿರುವುದನ್ನು ನಿಮಗೆ ಕಾಣಲು ಸಾಧ್ಯವಿಲ್ಲ.

ಹಕೀಮ್ ಬಿನ್ ಹಿಝಾಮ್ ಅವರು ಉಮೈರ್ ಅವರ ಅಭಿಪ್ರಾಯವನ್ನು ಕೇಳಿದ ನಂತರ ಅವರು ಭಯಭೀತರಾಗಿ ಉತ್ಬಾ ಬಿನ್ ರಬಿಯಾ ಅವರ ಬಳಿಗೆ ಬಂದು ಹೇಳಿದರು, ಓ ಉತ್ಬಾ! ಉಮೈರ್ ಬಿನದ ಹಝ್ರಮಿಯ ಸಾವಿಗೆ ನೀವು ಮುಹಮ್ಮದ್(ಸ) ಅವರಿಂದ ಸೇಡು ತೀರಿಸಿಕೊಳ್ಳಲು ಬಯಸುತ್ತೀರಿ. ಅವರು ನಿಮ್ಮ ಪ್ರತಿಜ್ಞಬದ್ಧರಾಗಿದ್ದರು, ನೀವು ಅವನ ಪರವಾಗಿ ರಕ್ತದ ದಂಡವನ್ನು ಪಾವತಿಸಿ ಖುರೈಷಿಗಳೊಂದಿಗೆ ಹಿಂತಿರುಗಲು ಸಾಧ್ಯವಿಲ್ಲವೇ? ನಿಮ್ಮ ಒಳ್ಳೆಯ ಹೆಸರು ಅದರಲ್ಲಿ ಶಾಶ್ವತವಾಗಿ ಉಳಿಯುತ್ತದೆ. ತಾನೇ ಭಯಭೀತನಗಿದ್ದ ಉತ್ಬಾ ಅವರನ್ನು ಸಹ ಅದೇ ಬೇಕಾಗಿತ್ತು. ಅವನು ತಕ್ಷಣ ಹೇಳಿದನು. ಹೌದು ಹೌದು, ಅದು ಸರಿ. ನಾನು ಅದಕ್ಕೆ ಒಪ್ಪುತ್ತೇನೆ ಮತ್ತು ನಂತರ ಅವರು ಹಕೀಮ್ ಬಿನ್ ಹಿಝಾಮ್ ಅವರಿಗೆ ಹೇಳಿದರು, "ನೋಡಿ, ಈ ಮುಸ್ಲಿಮರು ಮತ್ತು ನಾವು ಪರಸ್ಪರ ಸಂಬಂಧ ಹೊಂದಿದ್ದೇವೆ. ಒಬ್ಬ ಸಹೋದರನ ವಿರುದ್ಧ ಇನ್ನೊಬ್ಬ ಸಹೋದರ ಮತ್ತು ಮಗನ ವಿರುದ್ಧ ತಂದೆ ಕತ್ತಿ ಹಿಡಿಯುವುದು ಒಳ್ಳೆಯದೇ? ನೀವು ಅಬುಲ್ ಹಕಮ್ ಅಂದರೆ ಅಬು ಜಹಲ್‌ನ ಬಳಿಗೆ ಹೋಗಿ ಅವರ ಮುಂದೆ ಈ ಪ್ರಸ್ತಾಪವನ್ನು ಪ್ರಸ್ತುತಪಡಿಸಬೇಕು. ಅಷ್ಟರಲ್ಲಿ ಉತ್ಬಾ ಅವರ ಪರವಾಗಿ ಜನರಿಗೆ ಸಂಬಂಧಿಕರ ನಡುವೆ ಯುದ್ಧವಾಡುವುದು ಸರಿಯಲ್ಲ ಎಂದು ವಿವರಿಸಲು ಪ್ರಾರಂಭಿಸಿದರು. ಅರಬ್ಬರ ಇತರ ಗೋತ್ರಗಳೊಂದಿಗೆ ವ್ಯವಹರಿಸಲು ನಾವು ಹಿಂತಿರುಗಿ ಮುಹಮ್ಮದ್(ಸ) ಅವರನ್ನು ಬಿಟ್ಟು ಬಿಡಬೇಕು, ಫಲಿತಾಂಶವನ್ನು ನೋಡಬೇಕಾಗಿದೆ. ಮತ್ತೆ ನೋಡಿ ಈ ಮುಸಲ್ಮಾನರ ಜೊತೆ ಯುದ್ಧವಾಡುವುದು ಅಷ್ಟು ಸುಲಭದ ಕೆಲಸವಲ್ಲ ಬೇಕಾದರೆ ನೀವು ನನ್ನನ್ನು ಹೇಡಿ ಎಂದು ಕರೆದರೂ ನಾನು ಹೇಡಿಯಲ್ಲ. ನಾನು ಈ ಜನರನ್ನು ಸಾವಿನ ಖರೀದಿದಾರರಂತೆ ನೋಡುತ್ತೇನೆ.

ಹಝ್ರತ್ ಪೈಗಂಬರ್(ಸ) ಅವರು ಉತ್ಬಾವನ್ನು ದೂರದಿಂದ ನೋಡಿ ಹೇಳಿದರು: ಒಂದು ವೇಳೆ ಯಾವುದೇ ಸೈನ್ಯದಲ್ಲಿ ಉದಾತ್ತತೆ ಇದ್ದರೆ, ಈ ಕೆಂಪು ಒಂಟೆಯ ಸವಾರನಲ್ಲಿ ಅದು ಇರಬೇಕು. ಈ ಜನರು ಅವನ ಮಾತನ್ನು ಒಪ್ಪಿಕೊಂಡರೆ, ಅದು ಅವರಿಗೆ ಒಳ್ಳೆಯದು, ಆದರೆ ಹಕೀಮ್ ಬಿನ್ ಹಿಝಾಮ್ ಅಬು ಜಹಲ್ ಬಳಿಗೆ ಬಂದು ಅವನಿಗೆ ಈ ಪ್ರಸ್ತಾಪವನ್ನು ವಿವರಿಸಿದಾಗ, ಉಮ್ಮತ್ತಿನ ಫಿರ್‌ಔನ್ ಆಗಿರುವನು ಯಾವಾಗ ಅಂತಹ ವಿಷಯವನ್ನು ಆಲಿಸುತ್ತಾನೆ? ಸರಿ ಈಗ ಉತ್ಬಾನ ಮುಂದೆ ತನ್ನ ಸಂಬಂಧಿಕರನ್ನು ನೋಡಲು ಪ್ರಾರಂಭಿಸಿದ್ದಾನೆ. ತದನಂತರ ಅವರು ಉಮರ್ ಹಝ್ರಮಿಯ ಸಹೋದರ ಆಮಿರ್ ಹಝ್ರಮಿಯನ್ನು ಕರೆದು ಹೇಳಿದರು, ನಿಮ್ಮ ಮಿತ್ರ ಉತ್ಬಾ ಹೇಳುವುದನ್ನು ನೀವು ಕೇಳಿದ್ದೀರಾ, ಮತ್ತು ನಿಮ್ಮ ಸಹೋದರನ ಸೇಡು ಕೈಗೆ ಬಂದಂತೆ ತೋರುವ ಸಮಯದಲ್ಲಿ? ಅಮೀರ್‌ನ ಕಣ್ಣಿಗೆ ರಕ್ತ ಬಂದಿತು, ಮತ್ತು ಅರಬ್ಬರ ಪ್ರಾಚೀನ ಸಂಪ್ರದಾಯದ ಪ್ರಕಾರ, ಅವನು ತನ್ನ ಬಟ್ಟೆಗಳನ್ನು ಹರಿದುಕೊಂಡು ಬೆತ್ತಲೆಯಾಗಿ **ವಾ ಅಮ್ರಹೂ! ವಾ ಅನ್ರಹೂ!!** ಅಂದರೆ ಅಕಟಕಟಾ!! ಸೇಡು ತೀರಿಸಿಕೊಳ್ಳದೆ ನನ್ನ ಸಹೋದರನನ್ನು ಬಿಡುಗಡೆಗೊಳಿಸಬೇಕೆ ಎಂದು ಕಿರುಚಾಡಲು ಪ್ರಾರಂಭೀಸಿದನು. ಈ ಮರುಭೂಮಿಯ ಧ್ವನಿಯು ಖುರೈಶ್ ಸೈನ್ಯದ ಹೃದಯದಲ್ಲಿ ದ್ವೇಷದ ಜ್ವಾಲೆಯನ್ನು ಎಬ್ಬಿಸಿತು ಮತ್ತು ನಂತರ ಯುದ್ಧದ ಕುಲುಮೆಯು ತನ್ನ ಪೂರ್ಣ ಶಕ್ತಿಯಿಂದ ಉರಿಯಲು ಪ್ರಾರಂಭಿಸಿತು. (ಸೀರತ್ ಖಾತಮನ್ನಬೀಈನ್, ಹಝ್ರತ್ ಮಿರ್ಝಾ ಬಶಿರ್ ಅಹ್ಮದ್ ಸಾಹಿಬ್ ಎಂ.ಎ, ಪುಟ–358–360)

ತದನಂತರ, ಯುದ್ಧವು ಪ್ರಾರಂಭವಾಯಿತು, ಉಳಿದ ವಿವರಗಳನ್ನು ನಂತರ ವಿವರಿಸಲಾಗುವುದು, ಇನ್‌ಶಾಅಲ್ಲಾಹ್

...*...*...*...

*(ಪುಟ ಸಂಖ್ಯೆ 01ರ ಉಳಿದ ಭಾಗ)*

ಈ ಸೂಕ್ಷ್ಮ ಉಪಮೆಯಲ್ಲಿ, ನಿಮ್ಮ ಕೈ ಯಾವಾಗಲೂ ಅವರ ಸೇವೆಯಲ್ಲಿ ಇರಬೇಕು ಎಂದು ಹೇಳಲಾಗುತ್ತದೆ.

ಈ ಆಯತ್‌ನಲ್ಲಿ, ಒಬ್ಬ ವ್ಯಕ್ತಿಯು ತನ್ನ ಬಾಲ್ಯದಲ್ಲಿ ತನ್ನ ಹೆತ್ತವರು ಮಾಡಿದ ರೀತಿಯಲ್ಲಿಯೇ ತನ್ನ ಹೆತ್ತವರಿಗೆ ಸೇವೆ ಸಲ್ಲಿಸಲು ಸಾಧ್ಯವಿಲ್ಲ ಎಂದು ಸಹ ಸೂಚಿಸಲಾಗಿದೆ. ಅದಕ್ಕಾಗಿಯೇ ದೇವರೇ, ಅವರಿಗೆ ಕರುಣಿಸು ಎಂದು ಯಾವಾಗಲೂ ಪ್ರಾರ್ಥಿಸುತ್ತಾ ಇರಿ ಇದರಿಂದ ಕಾರ್ಯದಲ್ಲಿ ಉಳಿದಿರುವುದು ಪ್ರಾರ್ಥನೆಯಿಂದ ಈಡೇರುತ್ತದೆ ಎಂದು ಹೇಳಲಾಗಿದೆ. **'ಕ'** ಎಂದರೆ ಹೋಲಿಕೆ ಎಂಬ ಅರ್ಥವೂ ಇದೆ. ವೃದ್ಧಾಪ್ಯದಲ್ಲಿ ಪೋಷಕರಿಗೆ ಬಾಲ್ಯದಲ್ಲಿ ಮಗುವಿನಂತೆಯೇ ಸೇವೆಯ ಅವಶ್ಯಕತೆ ಇರುತ್ತದೆ ಎಂದು ಈ ಅರ್ಥಗಳಿಂದ ಸೂಚಿಸಲಾಗಿದೆ.

ಪೋಷಕರಿಗಾಗಿ ಈ ದುಆವನ್ನು ಏಕೆ ಕಲಿಸಲಾಗಿದೆ ಎಂದರೆ ಯಾರು ಸರ್ವಶಕ್ತನಾದ ಅಲ್ಲಾಹನಲ್ಲಿ ದುಆ ಮಾಡುವುದನ್ನು ಮುಂದುವರಿಸುತ್ತಾರೋ ಆತನಿಗೆ ಸ್ವತಃ ತಮ್ಮ ಕರ್ತವ್ಯವನ್ನು ಪೂರೈಸಲು ನೆನಪಿಸಿಕೊಳ್ಳುತ್ತಾರೆ. **(ತಫ್ಸೀರೆ ಕಬೀರ್, ಸಂಪುಟ–4, ಪುಟ–322, ಮುದ್ರಣ ಖಾದಿಯಾನ್ 2010)**

"ದೇಶಪ್ರೇಮ (ಧಾರ್ಮಿಕ) ವಿಶ್ವಾಸದ ಅಂಶವಾಗಿದೆ"
(ಹಝ್ರತ್ ಮುಹಮ್ಮದ್ ಪೈಗಂಬರ್(ಸ))
ದುಆವಿನ ಆಕಾಂಕ್ಷಿ:
**Mubarak Ahmed Naseem & Family, Shimoga, Karnataka**

# ಖುತ್‌ಬ ಜುಮುಅ

ಹಝ್ರತ್ ಪೈಗಂಬರ್(ಸ) ರವರು ಡೇರೆಯಿಂದ ಹೊರಗೆ ಬಂದು ಹೀಗೆ ಹೇಳಿದರು:
**ಸಯುಹ್‌ಝುಮುಲ್‌ಜಮ್‌ಉ ವಯುವಲ್ಲೂನದ್ದುಬುರ ಬಲಿಸ್ಸಾಅತು ಮೌಇದುಹುಮ್ ವಸ್ಸಾಅತು ಅದ್‌ಹಾ ವ ಅಮರ್ರು**
ಅಂದರೆ ಸಮೀಪದಲ್ಲೇ ಇವರೆಲ್ಲರೂ ಪರಾಜಿತರಾಗುವವರು ಮತ್ತು ಬೆನ್ನು ತಿರುಗಿಸಿ ಓಡಿ ಹೋಗುವವರು. ಮುನ್ನೆಚರಿಕೆ ನೀಡಲಾದ ಆ ಘಳಿಗೆ ಇದೇ ಆಗಿದೆ. ಈ ಘಳಿಗೆ ಅತ್ಯಂತ ಕಠಿಣ ಮತ್ತು ಕಹಿಯಾದದ್ದು ಆಗಿದೆ.

ಹಝ್ರತ್ ಪೈಗಂಬರ್(ಸ) ಹೇಳಿದ್ದಾಗಿ ಹಝ್ರತ್ ಖತ್ತಾದ(ರ) ವರದಿ ಮಾಡುತ್ತಾರೆ: ಪ್ರತಿಯೊಂದು ಸಮುದಾಯಕ್ಕೂ ಫಿರ್‌ಔನ್ ಇರುತ್ತಾನೆ. ಈ ಉಮ್ಮತಿನ ಫಿರ್‌ಔನ್ ಅಬೂಜಹಲ್ ಆಗಿರುವನು. ಅಲ್ಲಾಹನು ಆತನನ್ನು ಹೀನಾಯವಾಗಿ ಕೊಂದು ಹಾಕಿದನು. ಅಫ್ರಾನ ಇಬ್ಬರು ಮಕ್ಕಳು ಮತ್ತು ದೇವದೂತರು ಆತನನ್ನು ವಧಿಸಿ ಹಾಕಿದರು.

**ಬದರ್ ಯುದ್ಧದಲ್ಲಿ ನಡೆದ ಘಟನೆಗಳ ಹಾಗೂ ಬದರ್‌ನ ಶಹೀದರ ಪ್ರಸ್ತವನೆ**
**ಅದೇ ರೀತಿ ಹದೀಸ್ ಹಾಗೂ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹಾಗೂ ಖಲೀಫರ ಅಧ್ಯಾಪನೆಗಳ ಬೆಳಕಿನಲ್ಲಿ ಬದರ್ ಸಂದರ್ಭದಲ್ಲಿ ಅವತೀರ್ಣಗೊಂಡ ದೇವದೂತರ ಬಗ್ಗೆ ವಿವರಾತ್ಮಕ ವಿಶ್ವಾಸವರ್ಧಕ ಪ್ರಸ್ತಾವನೆ**

ಫೆಲಸ್ತೀನಿನ ಮುಸ್ಲಿಮರಿಗಾಗಿ, ಉಮ್ಮತೆ ಮುಸ್ಲಿಮದವರಿಗೆ, ಪಾಕಿಸ್ತಾನದ ಅಹ್ಮದಿಯರಿಗಾಗಿ ದುಆವಿನ ಕೋರಿಕೆ

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಟಿಲ್‌ಫೋರ್ಡ್, ಯು.ಕೆ, ಇಸ್ಲಾಮಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **07–07–2023** ರಂದು ನೀಡಿದ **ಖುತ್‌ಬ ಜುಮುಅ**

أَشْهَدُ أَنْ لَّا إِلٰهَ إِلَّا اللّٰهُ وَحْدَهُ لَا شَرِيكَ لَهُ وَأَشْهَدُ أَنَّ مُحَمَّدًا عَبْدُهُ وَرَسُولُهُ
أَمَّا بَعْدُ فَأَعُوذُ بِاللّٰهِ مِنَ الشَّيْطٰنِ الرَّجِيْمِ - بِسْمِ اللّٰهِ الرَّحْمٰنِ الرَّحِيْمِ
اَلْحَمْدُ لِلّٰهِ رَبِّ الْعٰلَمِيْنَ ۔ اَلرَّحْمٰنِ الرَّحِيْمِ ۔ مٰلِكِ يَوْمِ الدِّيْنِ ۔
اِيَّاكَ نَعْبُدُ وَاِيَّاكَ نَسْتَعِيْنُ ۔ اِهْدِنَا الصِّرَاطَ الْمُسْتَقِيْمَ ۔
صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ ۔

ಕಳೆದ ಖುತ್ಬದಲ್ಲಿ ಸತ್ಯನಿಷೇಧಿಗಳಿಗೆ ಮುಸ್ಲಿಮರ ಬಗ್ಗೆ ಉಂಟಾದ ಭಯ ಹಾಗೂ ಅಬೂಜಹಲ್ ಮತ್ತು ಉತ್ಬ ನಡುವೆ ಯುದ್ಧದ ವಿಷಯದಲ್ಲಿ ಉಂಟಾಗಿದ್ದ ಭಿನ್ನಾಬಿಪ್ರಾಯದ ಬಗ್ಗೆ ಪ್ರಸ್ತಾಪಿಸಲಾಗಿತ್ತು. ಅನಂತರ ಅಬೂಜಹಲಿನ ಕುಹಕು ಮಾತಿನ ಕಾರಣದಿಂದ ಉತ್ಬ ಯುದ್ಧದ ಘೋಷಣೆ ಕೂಡ ಮಾಡಿದನು. ಹೀಗೆ ಯುದ್ಧ ಶುರುವಾಯಿತು.

ಇದರ ಬಗ್ಗೆ ಇರುವ ವಿವರಣೆ ಹೀಗಿದೆ: ಉತ್ಬ ಬಿನ್ ರಬೀಅ ತನ್ನ ಸಹೋದರ ಶೈಬ ಬಿನ್ ರಬೀಅ ಮತ್ತು ತನ್ನ ಮಗನಾದ ವಲೀದ್ ಬಿನ್ ಉತ್ಬನ ಮಧ್ಯೆದಿಂದ ಹೊರಟು ಪಂಕ್ತಿಗಳಿಂದ ಮುಂದಕ್ಕೆ ಹೋಗಿ ಪಂಥಾಹ್ವಾನ ನೀಡಿದನು. (ಅಸ್ಸೀರತುನ್ನಬವೀಯ ಲಿಇಬ್ನೆ ಹಿಶ್ಶಾಮ್, ಪುಟ–426, ದರುಲ್ ಕುತುಬ್ ಇಲ್‌ಮಿಯ ಬೈರೂತ್ 2001)

ಹಝ್ರತ್ ಅಲಿ(ರ) ವರದಿ ಮಾಡುತ್ತಾರೆ: ಉತ್ಬ ಬಿನ್ ರಬೀಅ ಮುಂದಕ್ಕೆ ಹೋದನು. ಆತನ ಹಿಂದೆಯಾಗಿ ಆತನ ಮಗ ಮತ್ತು ಸಹೋದರ ಬಂದರು. ಯಾರು ಎದುರಿಡಲು ಬರುತ್ತೀರಿ ಎಂದು ಕೇಳಿದನು. ಆಗ ಅನ್ಸಾರಿನ ಕೆಲವು ಯುವಕರು ಉತ್ತರಿಸಿದರು. ನೀವು ಯಾರು? ಎಂದು ಆತನು ಕೇಳಿದನು. ಯಾರೆಂದು ಹೇಳಲಾಯಿತು. ಆಗ ಆತನು ಹೇಳಿದನು: ನಮಗೆ ನಿಮ್ಮೊಂದಿಗೆ ಯಾವುದೇ ಕೆಲಸವಿಲ್ಲ. ನಮ್ಮ ಉದ್ದೇಶ ನಮ್ಮ ಚಿಕ್ಕಪ ದೊಡ್ಡಪ್ಪರ ಮಕ್ಕಳೊಂದಿಗೆ ಹೋರಾಡುವುದಾಗಿದೆ. ಮದೀನದಲ್ಲಿರುವ ಖುರೈಶಿಗಳೊಡನೆ ನಮಗೆ ಯುದ್ಧ ಮಾಡಬೇಕಾಗಿದೆ. ಅನಂತರ ಉಚ್ಚ ಸ್ವರದಲ್ಲಿ ಹೀಗೆ ಹೇಳಿದನು: ನಮ್ಮ ಸಂಬಂಧಿಕರಲ್ಲಿ ನಮಗೆ ಸಮಾನವಾಗಿರುವ ಜನರನ್ನು ನಮಗೆ ಎದುರಾಗಿ ಕಳುಹಿಸು. ಆಗ ಹಝ್ರತ್ ಪೈಗಂಬರ್(ಸ) ಹೇಳಿದರು: ಎದ್ದೇಳಿರಿ ಹಂಝ, ಎದ್ದೇಳಿರಿ ಅಲಿ, ಎದ್ದೇಳಿರಿ ಉಬೈದ ಬಿನ್ ಹಾರಿಸ್. ಹಝ್ರತ್ ಹಂಝ(ರ) ಹಝ್ರತ್ ಪೈಗಂಬರ್(ಸ)ರ ದೊಡ್ಡಪ್ಪರಾಗಿದ್ದರು. ಅಲಿ(ರ) ಮತ್ತು ಉಬೈದ(ರ) ಹಝ್ರತ್ ಪೈಗಂಬರ್(ಸ)ರ ದೊಡ್ಡಪ್ಪರ ಮಕ್ಕಳಾಗಿದ್ದರು. ಹಂಝ(ರ) ಉತ್ಬನ ಕಡೆಗೆ ಧಾವಿಸಿದರು. ಹಝ್ರತ್ ಅಲಿ(ರ) ಶೈಬನ ಕಡೆಗೆ ಧಾವಿಸಿದರು. ಉಬೈದ(ರ) ವಲೀದ್‌ನ ಕಡೆಗೆ ಧಾವಿಸಿದರು. ಅವರ ನಡುವೆ ಕಾಳಗ ನಡೆಯಿತು ಮತ್ತು ಇಬ್ಬರು ಪರಸ್ಪರ ಗಾಯಗೊಳಿಸಿದರು. ಅನಂತರ ಎಲ್ಲರೂ ವಲೀದ್‌ನ ಕಡೆಗೆ ಹೋಗಿ ಆತನನ್ನು ವಧಿಸಿದೆವು ಮತ್ತು ಉಬೈದರನ್ನು ಎತ್ತಿ ತಂದೆವು. (ಸುನನ್ ಅಬೀ ದಾವೂದ್, ಕಿತಾಬುಲ್ ಜಿಹಾದ್, ಹದೀಸ್–2665) (ಅಲ್‌ಲುಲೂ ಅಲಮಕ್ನೂನ್ ಸೀರತ್ ಇನ್ ಸೈಕ್ಲೋಪೀಡಿಯಾ, ಸಂಪುಟ–2, ಪುಟ–48, ದಾರುಸ್ಸಲಾಮ್ ರಿಯಾಝ್ 1433ಹಿಜರಿ)

ಇವರಿಬ್ಬರು ಅಂದರೆ ಹಂಝ(ರ) ಮತ್ತು ಅಲಿ(ರ) ತಮ್ಮ ಎದುರಾಳಿಗಳನ್ನು ವಧಿಸಿದ್ದರು. ಆದರೆ ಹಝ್ರತ್ ಉಬೈದ ಬಿನ್ ಹಾರಿಸ್‌ರನ್ನು ಮರಳಿ ತರಲಾಯಿತು. ಅವರ ಒಂದು ಕಾಲು ತುಂಡರಿಸಲ್ಪಟ್ಟಿತ್ತು. ಅವರನ್ನು ಹಝ್ರತ್ ಪೈಗಂಬರ್(ಸ)ರ ಮುಂದೆ ತಂದಾಗ, ಅವರು ಕೇಳಿದರು: ಯಾ ರಸೂಲಲ್ಲಾಹ್, ನಾನು ಶಹೀದ್ ಅಲ್ಲವೇ? ನಿಸ್ಸಂಶಯವಾಗಿಯೂ ಶಹೀದ್ ಆಗಿರುವಿರಿ ಎಂದು ಅವರು ಹೇಳಿದರು. (ತಾರೀಖ್ ಅತ್ತಬರಿ, ಸಂಪುಟ–2, ಪುಟ–32, ದರುಲ್ ಕುತುಬ್ ಇಲ್‌ಮಿಯ ಬೈರೂತ್, 2012)

ಹಝ್ರತ್ ಉಬೈದ(ರ) ಹಝ್ರತ್ ಪೈಗಂಬರ್(ಸ)ರ ದೊಡ್ಡಪ್ಪರ ಪುತ್ರರಾಗಿದ್ದರು. ತೀವ್ರ ಗಾಯದ ಕಾರಣದಿಂದ ಅವರ ಜೀವ ಉಳಿಯಲಿಲ್ಲ. ಬದ್ರಿನಿಂದ ಮರಳಿ ಬರುವಾಗ ಅವರು ಮೃತಪಟ್ಟರು.
(ಸೀರತ್ ಖಾತಮನ್ನಬೀಈನ್, ಸಂಪುಟ–2, ಪುಟ–32, ದಾರುಲ್ ಕುತುಬ್ ಇಲ್‌ಮಿಯ ಬೈರೂತ್, 2012)

ಹಝ್ರತ್ ಉಬೈದಾ ಬಿನ್ ಹಾರಿಸ್(ರ) ಅವರ ಕಾಲನ್ನು ಖಡ್ಗದಿಂದ ಕತ್ತರಿಸಿದಾಗ, ಅವರ ಸಹಚರರು ಅವರನ್ನು ಎತ್ತಿಕೊಂಡು ಕರೆತಂದರು ಎಂದು ಒಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ. ಅವರನ್ನು ಹಝ್ರತ್ ಪೈಗಂಬರ್(ಸ) ಅವರ ಬಳಿಗೆ ಕರೆತಂದಾಗ ಅವರನ್ನು ಹಝ್ರತ್ ಪೈಗಂಬರ್(ಸ) ಅವರ ಬಳಿ ಮಲಗಿಸಲಾಯಿತು. ಅವರನ್ನು ಹಝ್ರತ್ ಪೈಗಂಬರ್(ಸ) ಅವರು ತಮ್ಮ ಅನುಗ್ರಹದಾಯಕ ಪಾದವನ್ನು ಅವರ ಕೆಳಗೆ ಇರಿಸಿದರು. ಅಂದರೆ, ಅವರ ಪಾದಗಳನ್ನು ಅವರ ತಲೆಯ ಕೆಳಗೆ ಇರಿಸಿದರು. ಮತ್ತು ಉಬೈದಾ(ರ) ಅವರು ಬಹಳ ಪ್ರೀತಿಯಿಂದ ಅವರನ್ನು(ಸ) ನೋಡುತ್ತಾ ಹೇಳಿದರು. ಯಾ ರಸೂಲಲ್ಲಾಹ್!! ಅಬುತಾಲಿಬ್ ಇಂದು ಬದುಕಿರುತ್ತಿದ್ದರೆ, ಅವರ ಮಾತುಗಳಿಗೆ ನಾನು ಹೆಚ್ಚು ಅರ್ಹನೆಂದು ಅವರಿಗೆ ತಿಳಿಯುತ್ತಿತ್ತು. ನಂತರ ಹಝ್ರತ್ ಅಬು ತಾಲಿಬ್(ರ) ಅವರ ಕವನವನ್ನು ಪಠಿಸಲಾಯಿತು ಅದರ ಅನುವಾದ: ಬೈತುಲ್ಲಾಹ್‌ನ ಆಣೆ! ಮುಹಮ್ಮದ್(ಸ) ಅವರನ್ನು ಬಿಡುಗಡೆ ಮಾಡುವುದಾಗಿ ಸುಳ್ಳು ಹೇಳಿದ್ದೀರಿ. ಇನ್ನೂ ನಾವು ನಿಮ್ಮ(ಸ) ರಕ್ಷಣೆಗಾಗಿ ಈಟಿಯನ್ನೂ ಎಸೆದಿಲ್ಲ ಅಥವಾ ಭಾಣಗಳನ್ನು ಬೀಸಲಿಲ್ಲ ಮತ್ತು ನಮ್ಮ ಮೃತ ದೇಹಗಳು ಅವರ ಸುತ್ತಲೂ ಇರುವವರೆಗೂ ನಾವು ಅವರನ್ನು ನಿಮಗೆ ಒಪ್ಪಿಸುತ್ತೇವೆ ಎಂದು ಸುಳ್ಳು ಹೇಳಿದ್ದೀರಿ ಮತ್ತು ನಾವು ನಮ್ಮ ಗಂಡು ಮತ್ತು ಹೆಣ್ಣು ಮಕ್ಕಳನ್ನು ನಿರ್ಲಕ್ಷಿಸುವುದಿಲ್ಲ. ಇದರ ಬಗ್ಗೆ ಅವರನ್ನು ಹಝ್ರತ್ ಪೈಗಂಬರ್(ಸ) ಹೇಳಿದರು, "ನೀವು ಹುತಾತ್ಮರಾಗಿದ್ದೀರಿ ಎಂದು ನಾನು ಸಾಕ್ಷಿ ಹೇಳುತ್ತೇನೆ." (ಸಬಲುಲ್–ಹುದಾ ವಾಲ್–ರಶಾದ್, ಸಂಪುಟ 4, ಪುಟಗಳು 35–36, ದಾರುಲ್–ಕುತುಬ್ ಇಲ್‌ಮಿಯಾ ಬೈರುತ್ 1993) (ಅಸದುಲ್‌ಗಾಬ, ಸಂಪುಟ–3, ಪುಟ–548, ದಾರುಲ್ ಕುತುಬ್ ಇಲ್‌ಮಿಯಾ ಬೈರೂತ್)

ಈ ಸಂದರ್ಭದಲ್ಲಿ ಅಬು ಜಹಲ್ ಪ್ರಾರ್ಥಿಸಿದನು.

ಘೋರವಾದ ಯುದ್ಧ ನಡೆಯಲು ಆರಂಭವಾದಾಗ ಅಬೂಜಹಲ್ ಹೀಗೆ ದುಆ ಮಾಡಿದನು: ಯಾವ ವ್ಯಕ್ತಿ ನಿಕಟ ಸಂಬಂಧಗಳನ್ನು ಮುರಿಯುತ್ತಾನೋ ಮತ್ತು ನಾವು ಹಿಂದೆಂದೂ ಕೇಳಿರದ ಮಾತುಗಳನ್ನು ಹೇಳುತ್ತಾನೋ ಇಂದು ಅವನನ್ನು ನಾಶಮಾಡು. (ಸೀರತ್ ಇಬ್ನೆ

ಹಿಶ್ಶಾಮ್, ಪುಟ–428, ದಾರುಲ್ ಕುತುಬ್ ಇಲ್ಮಿಯ ಬೈರೂತ್ 2001)

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಬದ್ರ್ ಯುದ್ಧದ ಸಂದರ್ಭದಲ್ಲಿ ಅಬೂಜಹಲ್ ಎಂಬ ಹೆಸರಿನಿಂದ ಕರೆಯಲ್ಪಡುತ್ತಿದ್ದ ಖುರೈಶಿನ ಸತ್ಯನಿಷೇಧಿಗಳ ಸರದಾರನಾದ ಅಮ್ರ್ ಬಿನ್ ಹಿಶಾಂ ಹೀಗೆ ದುಆ ಮಾಡಿದನು: **ಅಲ್ಲಾಹುಮ್ಮ ಮನ್ ಕಾನ ಮಿನ್ನ ಅಫ್‌ಸದ ಫಿಲ್ ಖೌಮಿ ಅಖ್ತಅ ಮಿರ್ರಹ್ಮಿ ಫಅಹಿನ್‌ಹುಲ್ ಯೌಮಿ** ಅಂದರೆ: ಹೇ ದೇವಾ, ನಾವಿಬ್ಬರಲ್ಲಿ ಕಲಹವನ್ನು ಉಂಟುಮಾಡುವ, ಸಮುದಾಯದಲ್ಲಿ ಬಿರುಕು ಉಂಟುಮಾಡುವ, ಪರಸ್ಪರ ಸಂಬಂಧಗಳು ಮತ್ತು ಸಮುದಾಯದ ಹಕ್ಕುಗಳನ್ನು ಮುರಿಯಲು ಕಾರಣಕರ್ತನಾದ ವ್ಯಕ್ತಿಯನ್ನು ಇಂದು ನಾಶಮಾಡು. ಹಝ್ರತ್ ಪೈಗಂಬರ್(ಸ)ರ ಜೀವಿತ ಪವಿತ್ರವಲ್ಲವೆಂದು ಅಬೂಜಹಲ್ ದೃಢವಾಗಿ ನಂಬಿದ್ದನು ಎಂದು ತೋರುತ್ತದೆ. ನಊಝುಬಿಲ್ಲಾಹ್. ಆದ್ದರಿಂದಲೇ ಅವನು ನೋವಿನೊಂದಿಗೆ ಹೀಗೆ ಪ್ರಾರ್ಥನೆ ಮಾಡಿದ್ದನು. ಆದರೆ ಆ ದುಆ ಮಾಡಿದ ಒಂದು ಗಂಟೆಯೊಳಗೆ ಅಲ್ಲಾಹನ ಶಿಕ್ಷೆ ಅವನ ಮೇಲೆ ಬಂದೆರಗಿತು. ಅವನ ತಲೆಯನ್ನು ಕತ್ತರಿಸಿ ಎಸೆಯಲಾಯಿತು. ಆತನು ಯಾರ ಪರಿಶುದ್ಧ ಜೀವಿತವನ್ನು ಕಳಂಕಿತವೆಂದು ಹೇಳುತ್ತಿದ್ದನೋ ಅವರು ಯುದ್ಧ ಮೈದಾನದಲ್ಲಿ ವಿಜಯ ಮತ್ತು ಯಶಸ್ಸಿನೊಂದಿಗೆ ಮರಳಿ ಬಂದರು. (ಚಶ್ಮ ಎ ಮಾರಿಫತ್, ರೂಹಾನಿ ಖಝಾಇನ್, ಸಂಪುಟ–23, ಪುಟ–174–175)

ಯುದ್ಧದ ಸ್ಥಿತಿಯನ್ನು ಮತ್ತೊಂದೆಡೆ ಹೀಗೆ ಚಿತ್ರೀಕರಿಸಲಾಗಿದೆ: ಮುಸ್ಲಿಮರ ಮುಂದೆ ಅವರಿಗಿಂತ ಮೂರು ಪಟ್ಟು ಅಧಿಕ ದೊಡ್ಡದಾದ ಸಂಘವಿತ್ತು. ಅವರ ಬಳಿ ಎಲ್ಲ ವಿಧದ ಯುದ್ಧ ಸಾಮಾನುಗಳಿದ್ದುವು. ಇಸ್ಲಾಮಿನ ಹೆಸರು ಮತ್ತು ಕುರುಹನ್ನು ಅಳಿಸಿ ಹಾಕುವ ನಿರ್ಧಾರದಿಂದ ಅವರು ಮೈದಾನಕ್ಕೆ ಹೊರಟಿದ್ದರು. ನಿರಾಶ್ರಿತರಾದ ಮುಸ್ಲಿಮರ ಸಂಖ್ಯೆ ಬಹಳ ಕಡಿಮೆಯಾಗಿತ್ತು. ಬಹಳ ಕಮ್ಮಿ ಯುದ್ಧ ಸಾಮಾನುಗಳಿದ್ದುವು. ಬಡತನದಿಂದ ಇದ್ದರು ಮತ್ತು ಪರದೇಶಿಗಳಾದಿದ್ದರು. ಮಕ್ಕಾ ನಿವಾಸಿಗಳ ಮುಂದೆ ಕೆಲವೇ ನಿಮಿಷಗಳಲ್ಲಿ ನಾಶವಾಗಬಹುದಾಗಿತ್ತು. ಆದರೆ ಏಕದೇವ ವಿಶ್ವಾಸ ಮತ್ತು ಹಝ್ರತ್ ಪೈಗಂಬರ್(ಸ)ರೊಡನೆ ಇದ್ದ ಸ್ನೇಹ ಅವರನ್ನು ಉನ್ನತ್ತರನ್ನಾಗಿ ಮಾಡಿತ್ತು. ಜೀವಂತವಾದ ವಿಶ್ವಾಸವು ಅವರೊಳಗೆ ಒಂದು ಅಸಾಧಾರಣವಾದ ಶಕ್ತಿಯನ್ನು ತುಂಬಿಸಿತ್ತು. ಅವರು ಯುದ್ಧ ಮೈದಾನದಲ್ಲಿ ಅತುಲ್ಯವಾದ ಧಾರ್ಮಿಕ ಸೇವೆಯ ಮಾದರಿಯನ್ನು ತೋರಿಸಿದರು. ಪ್ರತಿಯೊಬ್ಬರು ಇನ್ನೊಬ್ಬರಿಗಿಂತ ಮುಂದೆ ಇದ್ದರು. ಅಲ್ಲಾಹನ ಮಾರ್ಗದಲ್ಲಿ ಜೀವತ್ಯಾಗ ಮಾಡಲು ಸನ್ನದ್ಧರಾಗಿ ನಿಂತಿದ್ದರು. ಹಂಝ, ಅಲಿ ಮತ್ತು ಝುಬೇರ್ ಶತ್ರುಗಳ ಪಂಕ್ತಿಗಳನ್ನು ಪಾರು ಮಾಡುತ್ತಾ ಹೋದರು.

ಹಝ್ರತ್ ಉಮರ್ ಬಿನ್ ಖತ್ತಾಬ್(ರ) ಸ್ವತಂತ್ರಗೊಳಿಸಿದ ಗುಲಾಮನಾದ ಹಝ್ರತ್ ಮುಹ್‌ಜರನ್ನು ಶತ್ರುಗಳು ಬಾಣಕ್ಕೆ ಗುರಿಪಡಿಸಿ ಶಹೀದ್ ಮಾಡಿದರು. ಇವರು ಮುಸ್ಲಿಮರ ಮೊದಲ ಶಹೀದ್ ಆಗಿದ್ದರು. ಅನಂತರ ಬನೀ ಅದ್ದಿ ಬಿನ್ ನಜ್ಜಾರ್ ಗೋತ್ರದ ಒಬ್ಬ ವ್ಯಕ್ತಿಯಾದ ಹಝ್ರತ್ ಹಾರಿಸ ಬಿನ್ ಸುರಾಖ ಶಹೀದ್ ಆದರು. ಅವರು ಕೊಳದಿಂದ ನೀರು ಕುಡಿಯುತ್ತಿದ್ದರು. ಅಷ್ಟರಲ್ಲಿ ಅವರ ಕಡೆಗೆ ಬಾಣ ಬೀಸಲಾಯಿತು. ಅದು ಅವರ ಕುತ್ತಿಗೆಗೆ ತಗುಲಿ ಅವರು ಶಹೀದ್ ಆದರು.
(ಸೀರತ್ ಇಬ್ನೆ ಹಿಶ್ಶಾಮ್, ಪುಟ–428, ದಾರುಲ್ ಕುತುಬ್ ಇಲ್ಮಿಯ ಬೈರೂತ್ 2001)

ಹಝ್ರತ್ ಅನಸ್(ರ) ಅವರು ವರದಿ ಮಾಡುತ್ತಾರೆ ಹಾರಿಸ ಬಿನ್ ಸುರಾಖಾ ಬಿನ್ ಹಾರಿಸ್(ರ) ಬದ್ರ್ ಯುದ್ಧದಲ್ಲಿ ಹುತಾತ್ಮರಾದರು ಮತ್ತು ಅವರು ಇನ್ನೂ ಯೌವನಾವಸ್ಥೆಯಲ್ಲಿದ್ದರು. ಅವರ ತಾಯಿ ರಬಿ ಬಿಂತ್ ನಝ್ರ್, ಹಝ್ರತ್ ಅನಸ್(ರ) ಅವರ ತಂದೆಯ ಸಹೋದರಿ ಹಝ್ರತ್ ಪೈಗಂಬರ್(ಸ) ಅವರ ಬಳಿಗೆ ಬಂದು ಹೇಳಿದರು, ಯಾ ರಸೂಲಲ್ಲಾಹ್! ನನಗೆ ಹರಿಸ(ರ) ಅವರ ಸ್ಥಾನವು ಎಂತದ್ದಿತ್ತು ಎಂಬುದರ ಬಗ್ಗೆ ನಿಮಗೆ ತಿಳಿದಿದೆ. ಹಾಗಾಗಿ ಅವನು ಸ್ವರ್ಗದಲ್ಲಿದ್ದರೆ ನಾನು ತಾಳ್ಮೆಯಿಂದಿರಬೇಕು ಮತ್ತು ಪ್ರತಿಫಲವನ್ನು ನಿರೀಕ್ಷಿಸಬೇಕು ಮತ್ತು ಬೇರೆ ಏನಾದರೂ ಇದ್ದರೆ ನಾನು ಏನು ಮಾಡುತ್ತೇನೆ ಎಂದು ನೀವು ನೋಡುತ್ತೀರಿ. ಅದಕ್ಕೆ ಹಝ್ರತ್ ಪೈಗಂಬರ್(ಸ) ಅವರು ಹೇಳಿದರು, ಅಕಟಕಟಾ! ನೀವು ಮೂರ್ಖರಾಗಿದ್ದೀರಾ? ಸ್ವರ್ಗ ಒಂದೇ ಆಗಿದೆಯೇ? ಹಝ್ರತ್ ಪೈಗಂಬರ್(ಸ) ಹೇಳಿದರು ಅನೇಕ ಸ್ವರ್ಗಗಳಿವೆ ಮತ್ತು ನಿಮ್ಮ ಮಗ ಜನ್ನತುಲ್ ಫಿರ್‌ದೌಸ್‌ನಲ್ಲಿದ್ದಾನೆ ಎಂದು ಹೇಳಿದರು. (ಸಹೀಹ್ ಬುಖಾರಿ, ಕಿತಬುಲ್ ಮಗ್ಝಾಝಿ, ಹದೀಸ್–3982) (ಅತ್ತಬಖಾತುಲ್ ಕುಬ್ರ, ಸಂಪುಟ–3, ಪುಟ–387, ದಾರುಲ್ ಕುತುಬ್ ಇಲ್ಮಿಯ ಬೈರೂತ್ 1990)

ಈ ಯುದ್ಧದಲ್ಲಿ ಸಹಾಬಿಯರು ತೋರಿಸಿದ ಆವೇಶದ ಬಗ್ಗೆ ಚರಿತ್ರೆಯಲ್ಲಿ ಬಂದಿದೆ. ಹಝ್ರತ್ ಪೈಗಂಬರ್(ಸ) ಹೇಳಿದರು: ಇಂದು ಯಾರು ಸಹನೆಯೊಂದಿಗೆ ಸತ್ಕರ್ಮವೆಂದು ಅರಿತುಕೊಂಡು ಯುದ್ಧ ಮಾಡುವರೋ ಮತ್ತು ಬೆನ್ನು ತಿರುಗಿಸಿ ಓಡದೇ ಇರುವರೋ ಅವರನ್ನು ಅಲ್ಲಾಹನು ಸ್ವರ್ಗದಲ್ಲಿ ಪ್ರವೇಶಗೊಳಿಸುವನು. ಇದನ್ನು ಆಲಿಸಿಕೊಂಡು ಖರ್ಜೂರವನ್ನು ತಿನ್ನುತ್ತಿದ್ದ ಬನೀ ಸಲ್ಮಾ ಗೋತ್ರದ ಝುಬೇರ್ ಬಿನ್ ಹಮ್ಮಾಮ್ ತನ್ನ ಖಡ್ಗವನ್ನು ಎತ್ತಿಕೊಂಡು ಯುದ್ಧ ಮಾಡಲು ಹೊರಟರು ಮತ್ತು ಶಹೀದ್ ಆದರು.

ಅಫ್ರಾರ ಮಗನಾದ ಔಫ್ ಬಿನ್ ಹಾರಿಸ್(ರ) ಹಝ್ರತ್ ಪೈಗಂಬರ್(ಸ)ರೊಂದಿಗೆ ಕೇಳಿದರು: ಯಾ ರಸೂಲಲ್ಲಾಹ್, ಅಲ್ಲಾಹನ ತನ್ನ ದಾಸನ ಯಾವ ಸಂಗತಿಯಿಂದ ಸಂತುಷ್ಟನಾಗುತ್ತಾನೆ. ಹಝ್ರತ್ ಪೈಗಂಬರ್(ಸ) ಹೇಳಿದರು: ಯುದ್ಧ ವಸ್ತ್ರವನ್ನು ಧರಿಸದೇ ಶತ್ರುಗಳನ್ನು ವಧಿಸಿದರೆ. ಆಗ ಅವರು ತನ್ನ ಯುದ್ಧ ವಸ್ತ್ರವನ್ನು ಕಳಚಿ ಎಸೆದರು ಮತ್ತು ಅನೇಕ ಸತ್ಯನಿಷೇಧಿಗಳನ್ನು ವಧಿಸಿದ ನಂತರ ಸ್ವತಃ ಹುತಾತ್ಮರಾದರು.
(ಸೀರತ್ ಇಬ್ನೆ ಹಿಶ್ಶಾಮ್, ಪುಟ–428, ದಾರುಲ್ ಕುತುಬ್ ಇಲ್ಮೀಯ ಬೈರೂತ್ 2001)

ಅಬೂಜಹಲಿನ ವಧೆಯ ಕುರಿತು ಬುಖಾರಿಯಲ್ಲಿ ವರದಿಯಿದೆ. ಹಝ್ರತ್ ಅಬ್ದುರ್ರಹ್ಮಾನ್ ಬಿನ್ ಔಫ್(ರ) ಹೇಳುತ್ತಾರೆ: ನಾನು ಬದ್ರ್ ಯುದ್ಧದಂದು ಪಂಕ್ತಿಯಲ್ಲಿ ನಿಂತಿದ್ದೆ. ನಾನು ನೋಡಿದ್ದೇನೆಂದರೆ, ನನ್ನ ಬಲ ಮತ್ತು ಎಡಭಾಗದಲ್ಲಿ ಇಬ್ಬರು ಯುವಕರು ನಿಂತಿದ್ದರು. ಅಷ್ಟರಲ್ಲಿ ಇಬ್ಬರಲ್ಲಿ ಒಬ್ಬರು ಮೆಲುಧ್ವನಿಯಲ್ಲಿ ಕೇಳಿದರು: ನನಗೆ ಅಬೂಜಹಲ್ ಎಲ್ಲಿದ್ದಾನೆ ಎಂದು ತೋರಿಸಿಕೊಡು. ನಾನು ಹೇಳಿದೆ: ಮಗನೇ ನಿನಗೆ ಅವರೊಡನೆ ಯಾವ ಕೆಲಸವಿದೆ. ಯುವಕ ಹೇಳಿದ: ನಾನು ಆತನನ್ನು ಕಂಡರೆ ಕೊಲ್ಲುವೆನು ಅಥವಾ ಅವನ ಮುಂದೆ ಕೊಲ್ಲಲ್ಪಡುವೆನು ಎಂದು ನಾನು ಅಲ್ಲಾಹನಲ್ಲಿ ಪ್ರತಿಜ್ಞೆ ಮಾಡಿದ್ದೇನೆ. ಅಷ್ಟರಲ್ಲಿ ಮತ್ತೊಬ್ಬ ಯುವಕ ಮೆಲುಧ್ವನಿಯಲ್ಲಿ ಇದನ್ನೇ ಕೇಳಿದರು. ನಾನು ಬೊಟ್ಟು ಮಾಡುತ್ತಾ ಅಬೂಜಹಲನ್ನು ಅವರಿಗೆ ತೋರಿಸಿ ಕೊಟ್ಟೆನು. ಇದನ್ನು ಕೇಳುತ್ತಲೇ ಅವರು ಗಿಡುಗರಂತೆ ಆತನ ಮೇಲೆ ದಾಳಿ ನಡೆಸಿದರು ಮತ್ತು ಆತನನ್ನು ವಧಿಸಿ ಹಾಕಿದರು. ಅವರಿಬ್ಬರೂ ಅಫ್ರಾರ ಪುತ್ರರಾಗಿದ್ದರು. ಮುಆಧ್ ಮತ್ತು ಮಊಧ್. (ಸಹೀಹ್ ಬುಖಾರಿ, ಕಿತಾಬುಲ್ ಮಗ್ಝಾಝಿ, ಹದೀಸ್–3988) (ಉಮ್ದತುಲ್ ಖಾರಿ, ಸಂಪುಟ–17, ಪುಟ–132, ದರುಲ್ ಕುತುಬ್ ಇಲ್ಮಿಯ ಬೈರೂತ್ 2001)

ಹಝ್ರತ್ ಮುಆಧ್(ರ) ಹೇಳುತ್ತಾರೆ: ಯಾರೂ ಅಬೂಜಹಲಿನ ತನಕ ತಲುಪಲು ಸಾಧ್ಯವಲ್ಲವೆಂದು ಜನರು ಹೇಳುತ್ತಿರುವುದನ್ನು ನಾನು ಆಲಿಸಿದೆ. ಆದ್ದರಿಂದ ಖಂಡಿತವಾಗಿಯೂ ಆತನ ಮೇಲೆ ದಾಳಿ ನಡೆಸುವುದಾಗಿ ನಾನು ನಿರ್ಧಾರ ಮಾಡಿದೆ. ನಾನು ಅವನ ಮೇಲೆ ದಾಳಿ ನಡೆಸಿದೆ. ಖಡ್ಗದಿಂದ ಅವನ ಒಂದು ಕಾಲನ್ನು ತೊಡೆಯ ತನಕ ಕತ್ತರಿಸಿದೆ. ಆತನ ಪುತ್ರನಾದ ಇಕ್ರಿಮ ನನ್ನ ತೋಳಿನ ಮೇಲೆ ಹಲ್ಲೆ ನಡೆಸಿದರು ಮತ್ತು ನನ್ನ ಕೈ ತುಂಡಾಯಿತು. ಅದು ಕೇವಲ ಚರ್ಮದೊಂದಿಗೆ ನೇತುಕೊಂಡಿತ್ತು. ಪೂರ್ತಿ ದಿನ ಅದೇ ರೀತಿಯಲ್ಲಿ ಯುದ್ಧ ಮಾಡಿದೆ. ನೋವು ಜಾಸ್ತಿಯಾದಾಗ ನಾನು ಅದರ ಮೇಲೆ ಕಾಲಿಟ್ಟು ಅದನ್ನು ಶರೀರದಿಂದ ಬೇರ್ಪಡಿಸಿದೆ.
(ತರೀಖ್ ಅತ್ತಬರಿ, ಸಂಪುಟ–2, ಪುಟ–36, ದಾರುಲ್ ಕುತುಬ್ ಇಲ್ಮಿಯ ಬೈರೂತ್ 2012)

ಯುದ್ಧ ಕೊನೆಗೊಂಡಾಗ ಹಝ್ರತ್ ಪೈಗಂಬರ್(ಸ) ಕೊಲ್ಲಲ್ಪಟ್ಟವರ ಮಧ್ಯೆ ನಿಂತುಕೊಂಡು ಅಬೂಜಹಲನ್ನು ಹುಡುಕಲು ತೊಡಗಿದರು. ಅವನನ್ನು ಕಾಣದೇ ಇದ್ದಾಗ ಹಝ್ರತ್ ಪೈಗಂಬರ್(ಸ) ಹೀಗೆ ದುಆ ಮಾಡಿದರು: **ಅಲ್ಲಾಹುಮ್ಮ ಲ ತುಜ್‌ಝಿರ್‌ನೀ ಫಿರ್‌ಔನ ಹಾಝಿಹಿಲ್ ಉಮ್ಮತಿ** ಹೇ ಅಲ್ಲಾಹ್, ಈ ಸಮುದಾಯದ ಫಿರ್‌ಔನಿನ ಮುಂದೆ ನನ್ನನ್ನು ಅಪಮಾನಿಸಬೇಡ. ಅವನು ಜೀವ ಉಳಿಸಿ ಹೋಗುವಂತೆ ಆಗದಿರಲಿ. ಅನಂತರ ಜನರು ಹುಡುಕಲು ಶುರುಮಾಡಿದರು. ಹಝ್ರತ್ ಅಬ್ದುಲ್ಲಾಹ್ ಬಿನ್ ಮಸ್‌ಊದ್(ರ) ಆತನನ್ನು ಕಂಡು ಹಿಡಿದರು. (ಅಸ್ಸೀರತುಲ್ ಹಲಬೀಯ, ಸಂಪುಟ–2, ಪುಟ–236, ದರುಲ್ ಕುತುಬ್ ಇಲ್ಮಿಯ ಬೈರೂತ್ 2002)

ಹಝ್ರತ್ ಪೈಗಂಬರ್(ಸ) ರವರು ಓ ದೇವಾ!! ಆತನನ್ನು ನಿನ್ನ ಹಿಡಿತದಿಂದ ತಪ್ಪಿಸಿಕೊಳ್ಳಲು ಬಿಡಬೇಡ ಎಂದು ಪ್ರಾರ್ಥಿಸಿದ ವರದಿಯೂ ಇದೆ. (ತಾರಿಖ್ ಅತ್ತಬರಿ, ಸಂಪುಟ–2, ಪುಟ–36, ದಾರುಲ್–ಕುತುಬ್ ಇಲ್ಮಿಯಾ ಬೈರುತ್ 2012)

ಹಝ್ರತ್ ಪೈಗಂಬರ್(ಸ) ಅಬು ಜಹಲ್‌ನ ದೇಹವನ್ನು ಹುಡುಕಲು ಆದೇಶಿಸಿದಾಗ, ಅಬ್ದುಲ್ಲಾ ಬಿನ್ ಮಸ್‌ಊದ್(ರ) ಸತ್ತವರ ನಡುವೆ ಹುಡುಕುತ್ತಾ ಅವನ ಬಳಿಗೆ ಬಂದರು. ಹಝ್ರತ್ ಪೈಗಂಬರ್(ಸ) ಹೇಳಿದರು, ನೀವು ಅವನನ್ನು ಗುರುತಿಸದಿದ್ದರೆ, ಅವನ ಮೊಣಕಾಲಿನ ಗಾಯದ ಗುರುತಿನಿಂದ ಅವನನ್ನು ಗುರುತಿಸಿ, ಏಕೆಂದರೆ ನಾನು ಅಬ್ದುಲ್ಲಾ ಬಿನ್ ಜುದ್‌ಆನ್‌ಗೆ ಆಹ್ವಾನದ ಸಂದರ್ಭದಲ್ಲಿ ಒಮ್ಮೆ ಅಬು ಜಹಲ್‌ನನ್ನು ಜೋರಾಗಿ ತಳ್ಳಿದೆ ಅದರಿಂದಾಗಿ ಆತನನ್ನು ಮೊಣಕಾಲುಗಳಿಗೆ ಗಾಯವಾಯಿತು. ಮಂಡಿಯಲ್ಲಿ ಆ ಗಾಯದ ಗುರುತು ಇನ್ನೂ ಇದೆ. ಇಬ್ನೆ ಮಸ್‌ಊದ್(ರ) ಹೇಳುತ್ತಾರೆ:

ಈ ಚಿಹ್ನೆಯಿಂದ ನಾನು ಅವನನ್ನು ಗುರುತಿಸಿದೆ ಮತ್ತು ಆತನೊಳಗೆ ಸ್ವಲ್ಪ ಜೀವದ ಕಳೆ ಇತ್ತು. ನಾನು ಅವನ ಕುತ್ತಿಗೆಯ ಮೇಲೆ ಕಾಲನ್ನು ಇಟ್ಟೆನು. ಏಕೆಂದರೆ ಆತನು ಮಕ್ಕದಲ್ಲಿ ನನಗೆ ಬಹಳ ಕಷ್ಟ ಕೊಟ್ಟಿದ್ದನು. ನಾನು ಹೇಳಿದೆ: ಎಲೈ ಅಲ್ಲಾಹನ ಶತ್ರು, ಅಲ್ಲಾಹನು ನಿನ್ನನ್ನು ಹೇಗೆ ನಿಂದ್ಯಗೊಳಿಸಿರುವನು ಎಂದು ನೀನು ನೋಡುತ್ತಿರುವಿ.

ಆತನು ಹೇಳಿದನು: ನನ್ನನ್ನು ಯಾವ ಮಾತು ನಿಂದಿತಗೊಳಿಸಿದೆ. ಒಬ್ಬನನ್ನು ನೀವು ಕೊಂದು ಹಾಕುತ್ತಿರುವಿರಿ. ಅದರಲ್ಲಿ ಏನು? ನನಗಿಂತ ಹೆಚ್ಚು ಪದವಿಯುಳ್ಳ ಮತ್ತು ಗೌರವಾನ್ವಿತನಾದ ಯಾವನನ್ನಾದರೂ ನೀವು ಇಂದಿನ ತನಕ ಕೊಂದು ಹಾಕಿರುವಿರೋ? ಸರಿ ವಿಜಯ ಯಾರಿಗೆ ಉಂಟಾಯಿತು ಎಂದು ಹೇಳು. ಹಝ್ರತ್ ಅಬ್ದುಲ್ಲಾಹ್ ಬಿನ್ ಮಸ್‌ಊದ್(ರ) ಹೇಳುತ್ತಾರೆ: ಅನಂತರ ನಾನು ಆತನ ತಲೆಯನ್ನು ಕತ್ತರಿಸಿದೆ ಮತ್ತು ಹಝ್ರತ್ ಪೈಗಂಬರ್(ಸ)ರ ಕಾಲಿನ ಸಮೀಪ ಅದನ್ನು ಎಸೆದೆ. ಯಾ ರಸೂಲಲ್ಲಾಹ್, ಇದು ಅಲ್ಲಾಹನ ಶತ್ರುವಾದ ಅಬೂಜಹಲಿನ ತಲೆಯಾಗಿದೆ. ಹಝ್ರತ್ ಪೈಗಂಬರ್(ಸ) ಅಲ್ಲಾಹನಿಗೆ ಕೃತಜ್ಞತೆ ಅರ್ಪಿಸಿದರು ಮತ್ತು ಹೀಗೆ ಹೇಳಿದರು: **ಅಲ್ಲಾಹುಲ್ಲಝೀ ಲಾ ಇಲಾಹ ಗೈರಹೂ** ಅಲ್ಲಾಹನು ಪರಿಶುದ್ಧನು. ಅವನಲ್ಲದೇ ಬೇರೆ ಆರಾಧ್ಯನಿಲ್ಲ. (ಸೀರತ್ ಇಬ್ನೆ ಹಿರ್ಶಶಾಮ್, ಪುಟ–433, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2001) (ಶರಹ್ ಝುರ್ಖಾನಿ, ಸಂಪುಟ–2, ಪುಟ–297, ದಾರುಲ್ ಕುತುಬ್ ಇಲ್‌ಮಿಯ ಬೈರೂತ್) (ಸೀರತ್ ಇಬ್ನೆ ಹಿಶ್ಶಾಮ್ ಅನುವಾದ, ಸಂಪುಟ–1, ಪುಟ–447, ಇದಾರ ಇಸ್ಲಾಮಮಿಯಾತ್)

ಹಝ್ರತ್ ಪೈಗಂಬರ್(ಸ) ಹೇಳಿದ್ದಾಗಿ ಹಝ್ರತ್ ಖತ್ತಾದ(ರ) ವರದಿ ಮಾಡುತ್ತಾರೆ: ಪ್ರತಿಯೊಂದು ಸಮುದಾಯಕ್ಕೂ ಫಿರ್‌ಔನ್ ಇರುತ್ತಾನೆ. ಈ ಉಮ್ಮತಿನ ಫಿರ್‌ಔನ್ ಅಬೂಜಹಲ್ ಆಗಿರುವನು. ಅಲ್ಲಾಹನು ಆತನನ್ನು ಹೀನಾಯವಾಗಿ ಕೊಂದು ಹಾಕಿದನು. ಅಫ್ರಾನ ಇಬ್ಬರು ಮಕ್ಕಳು ಮತ್ತು ದೇವದೂತರು ಆತನನ್ನು ವಧಿಸಿ ಹಾಕಿದರು. (ಸಬ್ಲುಲ್ ಹುದಾ ವರ್‌ಶಾದ್, ಸಂಪುಟ–4, ಪುಟ–52, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 1993)

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಅಬೂಜಹಲನ್ನು ಫಿರ್‌ಔನ್ ಎಂದು ಹೇಳಲಾಗಿದೆ. ಆದರೆ ನನ್ನ ಪ್ರಕಾರ ಆತನು ಫಿರ್‌ಔನಿಗಿಂತ ಒಂದು ಪಟ್ಟು ಮೇಲೆ ಇದ್ದನು. ಫಿರ್‌ಔನ್ ಆದರೋ ಕೊನೆಗೆ ಹೀಗೆ ಹೇಳಿದ್ದನು: **ಆಮನ್‌ತು ಅನ್ನಹು ಲಾ ಇಲಾಹ ಇಲ್ಲಲ್ಲಝೀ ಆಮನತ್ ಬಿಹೀ ಬನೂ ಇಸ್ರಾಈಲ್** (ಯೂನಸ್: 91) ಅಲ್ಲಾಹನಲ್ಲದೇ ಬೇರೆ ಆರಾಧ್ಯನಿಲ್ಲವೆಂದು ನಾನು ನಂಬುತ್ತೇನೆ. ಆದರೆ ಅಬೂಜಹಲ್ ಕೊನೆಯ ತನಕ ವಿಶ್ವಾಸ ಹೊಂದಲಿಲ್ಲ. ಮಕ್ಕದಲ್ಲಿ ಎಲ್ಲ ಕಲಹಕ್ಕೂ ಕಾರಣ ಆತನೇ ಆಗಿದ್ದನು. ಬಹಳ ಅಹಂಕಾರಿ, ಅಹಂಭಾವಿ ಆಗಿದ್ದನು. ಸ್ಥಾನಮಾನಗಳನ್ನು ಬಯಸುತ್ತಿದ್ದನು. (ಮಲ್‌ಫೂಝಾತ್, ಸಂಪುಟ–4, ಪುಟ–247, 1984 ಮುದ್ರಣ)

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಒಟ್ಟಿನಲ್ಲಿ ಹಝ್ರತ್ ಪೈಗಂಬರ್(ಸ) ಹಝ್ರತ್ ಮೂಸಾ(ಅ)ರ ಹಾಗೆ ತನ್ನ ಸಮುದಾಯದ ಸಜ್ಜನರನ್ನು ದುಷ್ಟ ಜನರಿಂದ ಮುಕ್ತಿಗೊಳಿಸಿದರು. ಮೂಸಾರ ಹಾಗೆ ಅವರನ್ನು ಮಕ್ಕಾದಿಂದ ಮದೀನಕ್ಕೆ ಎಳೆದುಕೊಂಡು ಹೋದರು. ಈ ಸಮುದಾಯದ ಫಿರ್‌ಔನ್ ಆದ ಅಬೂಜಹಲನ್ನು ಬದರ್‌ನ ಯುದ್ಧ ಮೈದಾನದಲ್ಲಿ ನಾಶ ಮಾಡಿದರು. (ತಿರ್‌ಯಾಖುಲ್ ಖುಲೂಬ್, ರೂಹಾನಿ ಖಝಾಈನ್, ಸಂಪುಟ–15, ಪುಟ–523)

ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಬದರ್‌ನ ವೇಳೆ ಮಕ್ಕಾದ ಖುರೈಶಿಗಳು ಬಂದಾಗ, ಈಗ ನಾವು ಮುಸ್ಲಿಮರನ್ನು ಸುಲಭವಾಗಿ ನಾಶಮಾಡುವೆವು ಎಂದು ಅವರು ಭಾವಿಸಿದ್ದರು. ನಾವು ಹಬ್ಬ ಆಚರಿಸುವೆವು ಮತ್ತು ಬೇಕಾದಷ್ಟು ಮದ್ಯಪಾನ ಮಾಡುವೆವು ಎಂದು ಅಬೂಜಹಲ್ ಹೇಳಿದನು. ಮುಸ್ಲಿಮರನ್ನು ನಾಶಮಾಡಿಯೇ ಮರಳಿ ಹೋಗುವೆವು ಎಂದು ಅವರು ಭಾವಿಸಿದ್ದರು. ಆದರೆ ಮಕ್ಕಾದವರು ಬಹಳ ಹೀನಾಯವಾಗಿ ಕಾಣುತ್ತಿದ್ದ ಮದೀನದವರಿಂದಲೇ ಇಬ್ಬರು ಹುಡುಗರು ಈ ಅಬೂಜಹಲನ್ನು ವಧಿಸಿದರು. ಕೃಷಿ ಕೆಲಸ ಮಾಡುವ ಈ ರೈತರಿಗೆ ಯುದ್ಧದ ಬಗ್ಗೆ ಏನು ಗೊತ್ತು ಎಂದು ಮಕ್ಕಾದವರು ಮದೀನದವರ ಬಗ್ಗೆ ಭಾವಿಸುತ್ತಿದ್ದರು. ಹೇಗಿದ್ದರೂ ಈ ಹುಡುಗರು ಅಬೂಜಹಲನ್ನು ವಧಿಸಿದರು. ಆತನಿಗೆ ಎಂತಹ ಹೀನಾಯ ಸ್ಥಿತಿ ಉಂಟಾಯಿತು ಎಂದರೆ, ಆತನ ಕೊನೆಯ ಬಯಕೆ ಕೂಡ ಈಡೇರಲ್ಪಡಲಿಲ್ಲ. ಮುಖಂಡರು ಯುದ್ಧದಲ್ಲಿ ವಧಿಸಲ್ಪಟ್ಟರೆ ಅವರ ಕುತ್ತಿಗೆಯನ್ನು ಉದ್ದವಾಗಿ ಕತ್ತರಿಸುವುದು ಅರಬಿಯರ ವಾಡಿಕೆಯಾಗಿತ್ತು. ವಧಿಸಲ್ಪಟ್ಟದ್ದು ಒಬ್ಬ ಮುಖಂಡ ಎಂದು ಗುರುತಿಸಲ್ಪಡಲಿಕ್ಕಾಗಿ ಹೀಗೆ ಮಾಡಲಾಗುತ್ತಿತ್ತು. ಅಬೂಜಹಲ್ ಯಾವುದೇ ಚಲನವಿಲ್ಲದೇ ಗಾಯಾಳುವಾಗಿ ಬಿದ್ದಿರುವುದನ್ನು ಅಬ್ದುಲ್ಲಾಹ್ ಬಿನ್ ಮಸ್‌ಊದ್ ನೋಡಿದಾಗ, ನಿನ್ನ ಸ್ಥಿತಿ ಹೀಗಾಯಿತೋ ಎಂದು ಕೇಳಿದರು. ಆತನು ಹೇಳಿದನು: ನನ್ನನ್ನು ಮದೀನದ ರೈತರ ಇಬ್ಬರು ಮಕ್ಕಳು ಹೊಡೆದು ಬೀಳಿಸಿರುವರು. ಅಬ್ದುಲ್ಲಾಹ್(ರ) ಕೇಳಿದರು: ಏನಾದರೂ ಕೊನೆಯ ಬಯಕೆಯಿದೆಯೇ? ಆತನು ಹೇಳಿದನು: ನನ್ನ ಕುತ್ತಿಗೆಯನ್ನು ಉದ್ದವಾಗಿ ಕತ್ತರಿಸು. ಅವರು ಹೇಳಿದರು: ನಿನ್ನ ಈ ಕೊನೆಯ ಬಯಕೆಯನ್ನು ಕೂಡ ಈಡೇರಲು ನಾನು ಬಿಡುವುದಿಲ್ಲ. ಆತನ ತಲೆಯನ್ನು ಗಲ್ಲದ ಸಮೀಪವಾಗಿ ಕತ್ತರಿಸಿದರು. ಹಬ್ಬ ಆಚರಿಸಲು ಬಯಸುತ್ತಿದ್ದ ಅದೇ ದಿನ ಆತನ ಶೋಕದ ದಿನವಾಯಿತು. ಆತನು ಕುಡಿದ ಶರಾಬು ದಹಿಸುವಷ್ಟು ಸಮಯ ಕೂಡ ಆತನಿಗೆ ಲಭಿಸಲಿಲ್ಲ. (ಖುತ್‌ಬಾತೆ ಮಹ್ಮೂದ್, ಸಂಪುಟ–1, ಪುಟ–11)

ಮುಶ್ರಿಕರ ಕಡೆಗೆ ಹಝ್ರತ್ ಪೈಗಂಬರ್(ಸ) ಮರಳನ್ನು ಎಸೆದ ಘಟನೆಯ ಬಗ್ಗೆ ಸಹೀಹ್ ಬುಖಾರಿಯಲ್ಲಿ ಹೀಗೆ ವರದಿಯಾಗಿದೆ. ಹಝ್ರತ್ ಪೈಗಂಬರ್(ಸ) ಡೇರೆಯಲ್ಲಿ ದುಆ ಮಾಡುತ್ತಿದ್ದಾಗ, ಹಝ್ರತ್ ಅಬೂಬಕರ್(ರ) ಅವರ ಕೈಯನ್ನು ಹಿಡಿದು ಹೀಗೆ ಹೇಳಿದರು: ಯಾ ರಸೂಲಲ್ಲಾಹ್, ಸಾಕು ಮಾಡಿರಿ. ನೀವು ಪ್ರಭುನೊಡನೆ ಬಹಳಷ್ಟು ದುಆ ಮಾಡಿದ್ದೀರಿ. ಹಝ್ರತ್ ಪೈಗಂಬರ್(ಸ) ಯುದ್ಧ ಉಡುಪನ್ನು ಧರಿಸಿದ್ದರು.

ಅವರು ಡೇರೆಯಿಂದ ಹೊರಗೆ ಬಂದು ಹೀಗೆ ಹೇಳಿದರು: **ಸಯುಹ್‌ಝಮುಲ್‌ಜಮ್‌ಉ ವಯುವಲ್ಲೂನದ್ದುಬುರ ಬಲಿಸ್ಸಾಅತು ಮೌಇದುಹುಮ್ ವಸ್ಸಾಅತು ಅದ್‌ಹಾ ವ ಅಮರ್ರು** (ಅಲ್‌ಖಮರ್: 46–47) ಸಮೀಪದಲ್ಲೇ ಇವರೆಲ್ಲರೂ ಪರಾಜಿತರಾಗುವರು ಮತ್ತು ಬೆನ್ನು ತಿರುಗಿಸಿ ಓಡಿ ಹೋಗುವರು. ಮುನ್ನೆಚರಿಕೆ ನೀಡಲಾದ ಆ ಘಳಿಗೆ ಇದೇ ಆಗಿದೆ. ಈ ಘಳಿಗೆ ಅತ್ಯಂತ ಕಠಿಣ ಮತ್ತು ಕಹಿಯಾದದ್ದು ಆಗಿದೆ.
(ಸಹೀಹ್ ಬುಖಾರಿ, ಕಿತಾಬುಲ್ ಜಿಹಾದ್ ವಸ್ಸೈರ್, ಹದೀಸ್–2915)

ಇದರ ವಿವರಣೆ ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ಸೀರತ್ ಖಾತಮುನ್ನಬಿಯ್ಯೀನ್‌ನಲ್ಲಿ ಹೀಗೆ ಬರೆದಿರುವರು: ಮುಹಾಜಿರ್ ಮತ್ತು ಅನ್ಸಾರ್ ಶಕ್ತವಾಗಿ ಮತ್ತು ನಿಷ್ಠಾವಂತರಾಗಿ ಯುದ್ಧ ಮಾಡಿದರು. ಆದರೆ ಶತ್ರುಗಳು ಹೆಚ್ಚು ಇದ್ದ ಕಾರಣದಿಂದ ಮತ್ತು ಅವರ ಬಳಿ ಹೆಚ್ಚಿನ ಯುದ್ಧ ಸಾಮಾನುಗಳು ಇದ್ದ ಕಾರಣದಿಂದ ಯುದ್ಧದ ಪರಿಣಾಮ ಏನಾಗುವುದು ಎಂದು ದೀರ್ಘ ಸಮಯದ ವರೆಗೂ ಗೊತ್ತಾಗುತ್ತಿರಲಿಲ್ಲ. ಹಝ್ರತ್ ಪೈಗಂಬರ್(ಸ) ನಿರಂತರವಾಗಿ ದುಆ ಮಾಡುತ್ತಿದ್ದರು. ದೀರ್ಘವಾದ ದುಆ ಮಾಡಿದ ನಂತರ ಹಝ್ರತ್ ಪೈಗಂಬರ್(ಸ) ಸಜದದಿಂದ ಎದ್ದು ಹೀಗೆ ಸುವಾರ್ತೆ ನೀಡಿದರು: **ಯುಹ್‌ಝಮುಲ್ ಜಮ್‌ಉ ವಯುವಲ್ಲೂನದ್ದುಬುರ** ಶತ್ರುಗಳು ಪರಾಜಿತರಾಗುವರು ಮತ್ತು ಬೆನ್ನು ತಿರುಗಿಸಿ ಓಡಿ ಹೋಗುವರು. ಅನಂತರ ಅವರು ಡೇರೆಯಿಂದ ಹೊರಗೆ ಬಂದರು.
(ಸೀರತ್ ಖಾತಮನ್ನಬೀಈನ್, ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ ಎಂ.ಎ, ಪುಟ–362–363)

ಸೂರ ಅನ್ಫಾಲಿನ ವಮಾ ರಮೈತ ಇಧ್ ರಮೈತ ವಲಾಕಿನ್ನಲ್ಲಾಹ್ ರಮಾ ಎಂಬ ವಚನವನ್ನು ವ್ಯಾಖ್ಯಾನಿಸುತ್ತಾ ಇಮಾಂ ರಾಝಿ ಬರೆಯುತ್ತಾರೆ: ಹಝ್ರತ್ ಪೈಗಂಬರ್(ಸ) ಹೀಗೆ ದುಆ ಮಾಡಿದರು: ಹೇ ಅಲ್ಲಾಹ್, ಈ ಖುರೈಶ್ ಗೋತ್ರ ತಮ್ಮ ಕುದುರೆಗಳೊಂದಿಗೆ ಮತ್ತು ಸಾಮಾನುಗಳೊಂದಿಗೆ ಅಹಂಕಾರದಿಂದ ನಿನ್ನ ಪ್ರವಾದಿಯನ್ನು ನಿರಾಕರಿಸುತ್ತಾ ಬಂದಿರುವರು.

ಹೇ ಅಲ್ಲಾಹ್, ನೀನು ನನಗೆ ವಾಗ್ದಾನ ಮಾಡಿದ್ದನ್ನು ನಾನು ನಿನ್ನೊಡನೆ ಬೇಡುತ್ತೇನೆ.

ಆಗ ಜಿಬ್ರೀಲ್(ಅ) ಅವತೀರ್ಣಗೊಂಡು ಹೀಗೆ ಹೇಳಿದರು: ಯಾ ರಸೂಲಲ್ಲಾಹ್, ಒಂದು ಹಿಡಿ ಮರಳನ್ನು ತೆಗೆದು ಸತ್ಯನಿಷೇಧಿಗಳ ಕಡೆಗೆ ಎಸೆಯಿರಿ. ಉಭಯ ಸೈನ್ಯಗಳು ಮುಖಾಮುಖಿಯಾದಾಗ ಹಝ್ರತ್ ಪೈಗಂಬರ್(ಸ) ಹಝ್ರತ್ ಅಲಿ(ರ)ರೊಡನೆ ಹೀಗೆ ಹೇಳಿದರು. ಕಣಿವೆಯಿಂದ ಒಂದು ಹಿಡಿ ಮರಳನ್ನು ತಾ. ಹಝ್ರತ್ ಪೈಗಂಬರ್(ಸ) ಅದನ್ನು ಸತ್ಯನಿಷೇಧಿಗಳ ಕಡೆಗೆ ಎಸೆದರು. ಮುಶ್ರಿಕರು ತಮ್ಮ ಕಣ್ಣುಗಳನ್ನು ಒರೆಸಲು ತೊಡಗಿದರು. ಹೀಗೆ ಅವರು ಪರಾಜಿತರಾದರು. ಇದರ ಬಗ್ಗೆ ಅಲ್ಲಾಹನು ಹೀಗೆ ಹೇಳುತ್ತಾನೆ: **ವಮಾ ರಮೈತ ಇಧ್ ರಮೈತ ವಲಾಕಿನ್ನಲ್ಲಾಹ ರಮಾ.** ನೀನು ಎಸೆದ ಒಂದು ಹಿಡಿ ಮರಳು ಸತ್ಯದಲ್ಲಿ ಎಸೆದದ್ದು ಅಲ್ಲಾಹನಾಗಿದ್ದನು. ಏಕೆಂದರೆ, ಹಝ್ರತ್ ಪೈಗಂಬರ್(ಸ) ಎಸೆದ ಮರಳಿನಿಂದ ಹೆಚ್ಚೆಂದರೆ ಒಬ್ಬ ವ್ಯಕ್ತಿಯ ಮೇಲೆ ಪರಿಣಾಮ ಬೀರಬಹುದಾಗಿತ್ತು. ಆದರೆ ಅಲ್ಲಾಹನು ಎಸೆದ ಕಾರಣದಿಂದ ಆ ಮಣ್ಣಿನ ಕಣಗಳ ಶತ್ರುಗಳ ಕಣ್ಣುಗಳಿಗೆ ತಗುಲಿದುವು. ಆದ್ದರಿಂದ ಇದನ್ನು ಎಸೆದದ್ದು ಹಝ್ರತ್ ಪೈಗಂಬರ್(ಸ) ಆಗಿದ್ದರೂ ಕೂಡ ಅದರ ಪರಿಣಾಮ ಅಲ್ಲಾಹನ ಕೈಯಿಂದ ನಡೆಯಿತು.
(ತಫ್ಸೀರೆ ಕಬೀರ್, ಇಮಾಮ್ ರಾಝಿ, ಸಂಪುಟ–8, ಭಾಗ–15, ಪುಟ–112, ದರುಲ್ ಕುತುಬ್ ಇಲ್‌ಮಿ ಬೈರೂತ್ 2004)

ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ ಅವರು ಈ

ಯುದ್ಧಭೂಮಿಯನ್ನು ಉಲ್ಲೇಖಿಸುತ್ತಾ ಹೇಳುತ್ತಾರೆ: ಮೇಲಾವರಣದಿಂದ ಹೊರಬಂದ ಅವರು(ಸ) ಸುತ್ತಲೂ ನೋಡಿದರು ಮತ್ತು ರಕ್ತಪಾತದ ಕ್ಷೇತ್ರವನ್ನು ಕಂಡುಕೊಂಡರು. ಆ ಸಮಯದಲ್ಲಿ ಅವರು ಒಂದು ಹಿಡಿ ಮರಳು ಮತ್ತು ಬೆಣಚುಕಲ್ಲುಗಳನ್ನು ಎತ್ತಿಕೊಂಡು ಅವಿಶ್ವಾಸಿಗಳ ಕಡೆಗೆ ಎಸೆದು ಉತ್ಸಾಹದಿಂದ ಹೇಳಿದರು. **ಶಾಹತುಲ್ ವುಜೂಹ್** ಶತ್ರುಗಳ ಮುಖಗಳು ವಿಕಾರವಾಗಲಿ ಮತ್ತು ಅದೇ ಸಮಯದಲ್ಲಿ ಅವರು ಮುಸ್ಲಿಮರನ್ನು ಕರೆದು ಹೇಳಿದರು ಒಮ್ಮೆ ದಾಳಿ ಮಾಡಿ ಎಂದು ಹೇಳಿದರು. ತಮ್ಮ ಪ್ರೀತಿಯ ಗುರುಗಳ(ಸ) ಧ್ವನಿ ಮುಸಲ್ಮಾನರ ಕಿವಿಗೆ ತಲುಪಿತು ಮತ್ತು ಅವರು ತಕ್ಷಣವೇ ತಕ್ಬೀರ್ ಅನ್ನು ಪಠಿಸುವ ಮೂಲಕ ದಾಳಿ ಮಾಡಿದರು. ಮತ್ತೊಂದೆಡೆ, ಅವರು ಮುಷ್ಟಿ ಮರಳನ್ನು ಎಸೆಯಲು ಮುಂದಾದಾಗ, ಅಂತಹ ಗಾಳಿಯ ರಭಸಕ್ಕೆ ಅವಿಶ್ವಾಸಿಗಳ ಕಣ್ಣು, ಬಾಯಿ ಮತ್ತು ಮೂಗು ಮರಳು ಮತ್ತು ಬೆಣಚುಕಲ್ಲುಗಳಿಂದ ತುಂಬಲು ಪ್ರಾರಂಭಿಸಿತು. ನಮ್ಮ ನೆರವಿಗೆ ಬಂದಿರುವ ದಿವ್ಯ ದೂತರ ಸೈನ್ಯ ಇದಾಗಿದ್ದು, ಆ ಕಾಲದಲ್ಲಿ ಕೆಲವರು ಈ ದೇವದೂತರುಗಳನ್ನು ಕಂಡಿದ್ದಾರೆ ಎಂದು ವರದಿಗಳಲ್ಲಿ ಉಲ್ಲೇಖಿಸಲಾಗಿದೆ ಎಂದರು. ಆದಾಗ್ಯೂ, ಖುರೈಶ್ ನಾಯಕರು ಉತ್ಬಾ, ಶೈಬಾ ಮತ್ತು ಅಬು ಜಹಲ್ ಆಗಲೇ ಮಣ್ಣುಪಾಲಾಗಿದ್ದರು. ಮುಸಲ್ಮಾನರ ಈ ಹಠಾತ್ ದಾಳಿ ಮತ್ತು ಹಠಾತ್ ಗಾಳಿಯ ರಭಸಕ್ಕೆ ಖುರೈಷಿಗಳ ಪಾದಗಳು ಅಲುಗಾಡಲು ಪ್ರಾರಂಭಿಸಿದವು ಮತ್ತು ಶೀಘ್ರದಲ್ಲೇ ಅವಿಶ್ವಾಸಿಗಳ ಸೈನ್ಯವು ಓಡಿಹೋಗಿತು ಮತ್ತು ಸ್ವಲ್ಪ ಸಮಯದಲ್ಲಿ ಮೈದಾನವು ಸ್ಪಷ್ಟವಾಯಿತು." (ಸೀರತ್ ಖಾತಮನ್ನಬೀಯೀನ್, ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ ಎಂ.ಎ(ರ), ಪುಟ-363)

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: "ಈ ಹಂತದಲ್ಲಿ, ಕೆಲವೊಮ್ಮೆ ಅಂತಹ ವಿಷಯಗಳು ಮಾನವೀಯತೆಯ ಶಕ್ತಿಗಳಿಗಿಂತ ಹೆಚ್ಚಿನದಾಗಿ ತೋರುವ ಮತ್ತು ಅವರೊಳಗೆ ದೈವಿಕ ಶಕ್ತಿಯ ಬಣ್ಣವನ್ನು ಹೊಂದಿರುವ ವ್ಯಕ್ತಿಯಿಂದ ಹೊರಡಿಸಲ್ಪಡುತ್ತವೆ. ನಮ್ಮ ನೇತರರಾದ ಸಯ್ಯದ್ ವ ಮೌಲಾ ಹಝ್ರತ್ ಖಾತಮಲ್ ಅಂಬಿಯಾ ಸಲ್ಲಲ್ಲಾಹು ಅಲೈಹಿವ ಸಲ್ಲಮ್ ಅವರು ಬದರ್ ಯುದ್ಧದಲ್ಲಿ ಅವರು ನಾಸ್ತಿಕರ ಮೇಲೆ ಮರಳು ಹಾಗೂ ಬೆಣಚುಗಲ್ಲುಗಳ ಮುಷ್ಟಿಯನ್ನು ಬಳಸಿದರು ಮತ್ತು ಅವರು ಆ ಮುಷ್ಟಿಯನ್ನು ಯಾವುದೇ ದುಆವಿನ ಮೂಲಕ ಬಳಸಲಿಲ್ಲ, ಬದಲಿಗೆ ತಮ್ಮದೇ ಆದ ಆಧ್ಯಾತ್ಮಿಕ ಶಕ್ತಿಯಿಂದ ಬಳಸಿದರು ಆದರೆ ಈ ಮುಷ್ಟಿಯು ಶತ್ರುಗಳ ಸೈನ್ಯದ ಮೇಲೆ ದೈವಿಕ ಶಕ್ತಿಯನ್ನು ಮತ್ತು ಅಂತಹ ಅಲೌಕಿಕ ಅಭ್ಯಾಸವನ್ನು ತೋರಿಸಿತು, ಅದರ ಪರಿಣಾಮವು ಅವರಲ್ಲಿ ಒಬ್ಬರ ಕಣ್ಣು ಬಾಧಿಸಲಿಲ್ಲ ಮತ್ತು ಅವರೆಲ್ಲರೂ ಕುರುಡರಂತೆ ಮಾರ್ಪಟ್ಟರು ಮತ್ತು ಅಂತಹ ಗೊಂದಲ ಮತ್ತು ಆತಂಕವು ಅವರಲ್ಲಿ ಹುಟ್ಟಿಕೊಂಡಿತು ಅವರು ಹುಚ್ಚರಂತೆ ಓಡತೊಡಗಿದರು. ಸರ್ವಶಕ್ತನಾದ ಅಲ್ಲಾಹನು ಈ ಪವಾಡವನ್ನು ಈ ಆಯತ್‌ನಲ್ಲಿ ಉಲ್ಲೇಖಿಸುತ್ತಾನೆ ..... ಅಂದರೆ, ನೀವು ಈ ಮುಷ್ಟಿಯನ್ನು ಮಾಡಿದಾಗ. ಅದನ್ನು ಎಸೆದದ್ದು ನೀನಲ್ಲ, ಆದರೆ ಸರ್ವಶಕ್ತನಾದ ಅಲ್ಲಹನು ಅದನ್ನು ಎಸೆದನು. ಅಂದರೆ ಪರದೆಯ ಹಿಂದೆ ದೈವಿಕ ಶಕ್ತಿ ಕೆಲಸ ಮಾಡಿದೆ. ಇದು ಮಾನವ ಶಕ್ತಿಯ ಕೆಲಸವಲ್ಲ. (ಆಯಿನಾ ಕಮಾಲಾತೆ ಇಸ್ಲಾಮ್, ರೂಹಾನಿ ಖಝಾಇನ್, ಸಂಪುಟ-5, ಪುಟ-65)

ಆದಾಗ್ಯೂ, ಸ್ವಲ್ಪ ಸಮಯದ ನಂತರ, ಅವಿಶ್ವಾಸಿಗಳಲ್ಲಿ ವೈಫಲ್ಯ ಮತ್ತು ಆತಂಕದ ಚಿಹ್ನೆಗಳು ಕಾಣಿಸಿಕೊಂಡವು. ಮುಸಲ್ಮಾನರ ಉಗ್ರ ದಾಳಿಯಿಂದ ಅವರ ಪಡೆಗಳು ಅಸ್ತವ್ಯಸ್ತಗೊಂಡವು. ಅವರ ನಡುವೆ ನೂಕುನುಗ್ಗಲು ಉಂಟಾಯಿತು. ಮುಸ್ಲಿಮರು ಅವರನ್ನು ಬೆನ್ನಟ್ಟಿ ಸೋಲಿಸಿದರು.

ಹಝ್ರತ್ ಸಾಅದ್(ರ) ಅವರ ಅವಿಶ್ವಾಸಿಗಳ ವಿರುದ್ಧದ ತೀವ್ರವಾದ ಉತ್ಸಾಹದ ಬಗ್ಗೆ ಉಲ್ಲೇಖಿಸಲಾಗಿದೆ: ಅಂತಿಮವಾಗಿ ಶತ್ರುಗಳು ಸೋತ ನಂತರ ತಮ್ಮ ಶಸ್ತ್ರಾಸ್ತ್ರಗಳನ್ನು ಎಸೆದರು ಮತ್ತು ಸಹಾಬರವರು ಅವರನ್ನು ಬಂಧಿಸಲು ಪ್ರಾರಂಭಿಸಿದಾಗ, ಹಝ್ರತ್ ಪೈಗಂಬರ್(ಸ) ಅವರು ಹಝ್ರತ್ ಸಅದ್(ರ) ಅವರ ಮುಖದ ನೋಟದಲ್ಲಿ ಜುಗುಪ್ಸೆಯ ಲಕ್ಷಣಗಳಿವೆ ಎಂದು ನೋಡಿದರು, ಅಂದರೆ ಮುಸ್ಲಿಮರ ಈ ಕೃತ್ಯವನ್ನು ಅವರು ಅಸಮ್ಮತಿಯಿಂದ ನೋಡುತ್ತಿದ್ದರು. ಅದಕ್ಕೆ ಹಝ್ರತ್ ಪೈಗಂಬರ್(ಸ) ಅವರು ಹಝ್ರತ್ ಸಅದ್(ರ) ಅವರಿಗೆ ಹೇಳಿದರು, ಓ ಸಅದ್! ನೀವು ಸಮುದಾಯದ ಈ ಕಾರ್ಯವನ್ನು ಅಸಮ್ಮತಿ ಮಾಡುತ್ತಿದ್ದೀರಿ, ಅಂದರೆ ಅವಿಶ್ವಾಸಿಗಳನ್ನು ಬಂಧಿಸುತ್ತಿರುವುದು ಇಷ್ಟಪಡುತ್ತಿಲ್ಲವಂತೆ ತೋರುತ್ತಿದೆ. ಅದಕ್ಕೆ ಅವರು ಹೇಳಿದರು, ಖಂಡಿತವಾಗಿಯೂ, ಯಾ ರಸೂಲಲ್ಲಾಹ್! ಇದು ಅವಿಶ್ವಾಸಿಗಳೊಂದಿಗೆ ನಮ್ಮ ಮೊದಲ ಮತ್ತು ಯಶಸ್ವಿ ಯುದ್ಧವಾಗಿದೆ. ಆದುದರಿಂದ, ನನ್ನ ದೃಷ್ಟಿಯಲ್ಲಿ, ಅವಿಶ್ವಾಸಿಗಳನ್ನು ಬದುಕಿಸುವುದಕ್ಕಿಂತ ಸಾಧ್ಯವಾದಷ್ಟು ಕೊಲ್ಲುವುದು ಉತ್ತಮ. ಅವರೆಲ್ಲರನ್ನೂ ಕೊಲ್ಲಬೇಕೆಂದು ನಾನು ಬಯಸುತ್ತೇನೆ.

ಬದರ್ ಯುದ್ಧದಲ್ಲಿ ದೇವದೂತರ ಅವತರಣಿಕೆಯ ಬಗ್ಗೆ ಪವಿತ್ರ ಖುರ್‌ಆನ್‌ನಲ್ಲಿ ಅಲ್ಲಾಹು ನುಡಿಯುತ್ತಾನೆ: **ಇಝ್ ತಸ್‌ತಗೀಸೂನ ರಬ್ಬುಕುಮ್ ಫಸ್ತಜಾಬ ಲಕುಮ್ ಅನ್ನೀ ಮುಮಿದ್ದುಕುಮ್ ಬಿಅಲ್‌ಫಿಮ್ಮಿನಲ್ ಮಲಾಯಿಕತಿ ಮುರ್ದಿಫೀನ್** (ಅಲ್-ಅನ್‌ಫಾಲ್: 10) ನಿಮ್ಮ ಪ್ರಭುವಿನೊಡನೆ ನೀವು ಸಹಾಯವನ್ನು ಬೇಡುತ್ತಿದ್ದ ಸಂದರ್ಭ (ಜ್ಞಾಪಿಸಿರಿ). ಆಗ ಅವನು, 'ಖಂಡಿತವಾಗಿಯೂ ಒಬ್ಬರ ನಂತರ ಇನ್ನೊಬ್ಬರಂತೆ ಬರುವ ಸಾವಿರ ದೇವದೂತರ (ಮಲಾಇಕ್) ಮೂಲಕ ನಾನು ನಿಮಗೆ ಸಹಾಯ ಮಾಡುವೆನು' ಎಂದು ಉತ್ತರ ನೀಡಿದನು.

ಹಝ್ರತ್ ಪೈಗಂಬರ್(ಸ) ಅವರು ಬದರ್ ಯುದ್ಧದಲ್ಲಿ ದೇವದೂತರ ಬಗ್ಗೆ ದೃಢೀಕರಿಸಿದರು. ಹಝ್ರತ್ ಪೈಗಂಬರ್(ಸ) ಅವರು ಬದರ್ ದಿನದಂದು ಹೇಳಿದರು: ಇದು ಜಿಬ್ರೀಲ್. ಅವರು ತಮ್ಮ ಕುದುರೆಗಳ ಲಗಾಮನ್ನು ಹಿಡಿದಿದ್ದಾರೆ ಮತ್ತು ಯುದ್ಧೋಚಿತ ಆಯುಧಗಳಿಂದ ಶಸ್ತ್ರಸಜ್ಜಿತರಾಗಿದ್ದಾರೆ. ಸಿರತ್ ಇಬ್ನ್ ಹಿಶಾಮ್‌ನಲ್ಲಿನ ಹಲವಾರು ಸಹಾಬರವರ ವರದಿಗಳು ಬದರ್ ದಿನದಂದು ದೇವದೂತರ ಮೂಲವನ್ನು ಸೂಚಿಸುತ್ತವೆ. ( ) ದಾ ಎ ರ' ಃ ಮಾರಿಫ್-ಎ-ಸೀರತ್ ಮುಹಮ್ಮದ್ ರಸುಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್, ಸಂಪುಟ 6, ಪುಟ 214, ಬಜ್ಮ್ ಇಕ್ಬಾಲ್, ಲಾಹೋರ್, ಏಪ್ರಿಲ್ 2022)

ಅದರ ಬಗ್ಗೆ ಸಹಾಬರವರ ಅನೇಕ ವರದಿಗಳಿವೆ. ಹಝ್ರತ್ ಜಿಬ್ರೀಲ್(ಅ) ಹಝ್ರತ್ ಪೈಗಂಬರ್(ಸ)ರ ಬಳಿಗೆ ಬಂದು ಹೀಗೆ ಕೇಳಿದರು: ಮುಸ್ಲಿಮರಲ್ಲಿ ಬದ್ರ್ ಯೋಧರಿಗೆ ನೀವು ಯಾವ ಸ್ಥಾನವನ್ನು ನೀಡುತ್ತೀರಿ? ಹಝ್ರತ್ ಪೈಗಂಬರ್(ಸ) ಹೇಳಿದರು: ಅತ್ಯುತ್ತಮ ಮುಸ್ಲಿಮರು ಅಥವಾ ಅಂತಹ ಯಾವುದೋ ಒಂದು ಪದವನ್ನು ಉಪಯೋಗಿಸಿದರು. ಆಗ ಜಿಬ್ರೀಲ್(ಅ) ಹೇಳಿದರು: ಬದ್ರ್ ಯುದ್ಧದಲ್ಲಿ ಭಾಗವಹಿಸಿದ ದೇವದೂತರು ಸಹ ಅದೇ ರೀತಿ ಶ್ರೇಷ್ಠರು. (ಸಹೀಹ್ ಬುಖಾರಿ, ಕಿತಾಬುಲ್ ಮಗ್ಝಾಝಿ, ಹದೀಸ್-3992)

ಓರ್ವ ಜೀವನಚರಿತ್ರೆಗಾರರು ಹೀಗೂ ಬರೆದಿದ್ದಾರೆ ಅಂದರೆ ಹಝ್ರತ್ ಇಬ್ನೆ ಅಬ್ಬಾಸ್(ರ) ವರದಿ ಮಾಡುತ್ತಾರೆ: ನನಗೆ ಬನೂ ಘಫ್ಫಾರ್‌ನ ಸಹೋದರನೊಬ್ಬನು ವಿವರಿಸಿದನು ನಾನು ಮತ್ತು ನನ್ನ ಸೋದರಸಂಬಂಧಿಯೊಬ್ಬರು ಬಂದು ಬದರ್‌ನ ನೋಟವು ಕಾಣುವ ಪರ್ವತವನ್ನು ಏರಿದೆವು. ನಾವು ಅವಿಶ್ವಾಸಿಗಳಾಗಿದ್ದೇವು ಮತ್ತು ಲೂಟಿ ಮಾಡುವವರೊಂದಿಗೆ ಕೊಳ್ಳೆಹೊಡೆಯಲು ನಾವು ಯುದ್ಧದಲ್ಲಿ ಬೀಳುವ ವಿಪತ್ತನ್ನು ಕಾಯುತ್ತಿದ್ದೆವು. ಹೀಗೆ ನಾವು ಪರ್ವತದ ಮೇಲೆ ಇರುವಾಗ ಒಂದು ಮೋಡದ ತುಂಡು ನಮ್ಮ ಹತ್ತಿರ ಬಂದಿತು. ಒಬ್ಬ ನಿರೂಪಕ ಹೀಗೆ ಹೇಳುವುದನ್ನು ನಾನು ಕೇಳಿದೆ. ಹೇಝೂಮ್ ಮುಂದುವರಿಯಿರಿ. ಈ ಸದ್ದು ಕೇಳಿದ ನನ್ನ ಸೋದರ ಮಾವನ ಹೃದಯ ಒಡೆದು ಸ್ಥಳದಲ್ಲೇ ಸಾವನ್ನಪ್ಪಿದ್ದು, ನಾನು ಕೂಡ ಸಾವಿಗೆ ಹತ್ತಿರವಾದೆ. ನಂತರ ನಾನು ನನ್ನ ಮೇಲೆ ಹಿಡಿತ ಸಾಧಿಸಿದೆ.

(ಸೀರತ್ ಇಬ್ನ್ ಹಿಶಾಮ್, ಪುಟ-431, ದಾರುಲ್ ಕುತುಬ್ ಅಲ್-ಇಲ್ಮಿಯಾ ಬೈರುತ್ 2001)

ಆ ಸಮಯದಲ್ಲಿ ಅವಿಶ್ವಾಸಿಯಾಗಿದ್ದ ಸುಹೈಲ್ ಬಿನ್ ಅಮ್ರ್ ಹೇಳುತ್ತಾರೆ, ಬದ್ರ್ ದಿನದಂದು ನಾನು ಕಪ್ಪು ಕುದುರೆಗಳ ಮೇಲೆ ಬಿಳಿ ಜನರನ್ನು ನೋಡಿದೆ. ಅವರು ಆಕಾಶ ಮತ್ತು ಭೂಮಿಯ ನಡುವೆ ಇದ್ದರು ಮತ್ತು ಖುರೈಶ್ ಜನರನ್ನು ಕೊಂದು ಸೆರೆಯಾಳುಗಳನ್ನು ತೆಗೆದುಕೊಳ್ಳುತ್ತಿದ್ದರು. ಒಟ್ಟಿನಲ್ಲಿ ಬದ್ರ್‌ನಲ್ಲಿ ದೇವದೂತರನ್ನು ಮುಸ್ಲಿಮರು ಮಾತ್ರವಲ್ಲದೆ ಅವಿಶ್ವಸಿಗಳು ಸಹ ನೋಡುತ್ತಿದ್ದರು. (ದಾಏರಃ ಮಾರಿಫ್-ಇ-ಸೀರತ್ ಮುಹಮ್ಮದ್ ರಸುಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವಸಲ್ಲಂ, ಸಂಪುಟ 6, ಪುಟ 215, ಬಿಜ್ಮ್ ಇಕ್ಬಾಲ್, ಲಾಹೋರ್, ಏಪ್ರಿಲ್ 2022)

ಅಬು ಉಸೈದ್ ಮಾಲಿಕ್ ಬಿನ್ ರಬಿಯಾ ಅವರು ಬದರ್ ಯುದ್ಧದಲ್ಲಿ ಹಾಜರಾಗಿದ್ದರು ಅವರು ವರದಿ ಮಾಡುತ್ತಾರೆ ಈ ಘಟನೆಯು ಅವರ ದೃಷ್ಟಿ ಹೋಗುವುದಕ್ಕು ಮುಂಚೆಯದ್ದಾಗಿತ್ತು. ಅವರು ಹೇಳಿದರು: ಇಂದು ನಾನು ಬದರ್‌ನಲ್ಲಿ ಇರುತ್ತಿದ್ದೆ ಮತ್ತು ನನ್ನ ದೃಷ್ಟಿಯು ಸರಿಯಾಗಿರುತ್ತಿದ್ದರೆ ನನು ನಿಮಗೆ (ಇವರು ಇದನ್ನು ವಿವರಿಸುತ್ತಿರುವಾಗ ಅವರ ಕಣ್ಣಿನ ದೃಷ್ಟಿ ಹೊರಟು ಹೋಗಿತ್ತು ಆದರೆ ಬದರ್ ಘಟನೆಯನ್ನು ವಿವರಿಸುವಗ ಅವರ ದೃಷ್ಟಿ ಉತ್ತಮವಾಗಿತ್ತು ಆಗ ಅವರು ನೋಡಿದ ಬಗ್ಗೆ ಹೇಳುತ್ತಿದ್ದಾರೆ) ನನಗೆ ದೃಷ್ಟಿ ಇರುತ್ತಿದ್ದರೆ, ದೇವದೂತರು ಬಂದಿಳಿದ ಆ ಕಣಿವೆಯನ್ನು ಸಹ ನಾನು ನಿಮಗೆ ತೋರಿಸುತ್ತಿದ್ದೆ. ಅದರಲ್ಲಿ ನನಗೆ ಯಾವುದೇ ಸಂಶಯ ಅಥವಾ ಸಂದೇಹವಿಲ್ಲ. ಅಬೂ ದಾವೂದ್ ಮಾಝುನೀ ಅವರು ವರದಿ ಮಾಡುತ್ತಾರೆ ಅವರು ಸಹ ಬದರ್ ಯುದ್ಧದಲ್ಲಿ ಹಾಜರಿದ್ದದ್ದರು. ಅವರು ಹೇಳಿದರು, ನಿಸ್ಸಂದೇಹವಾಗಿಯೂ ನಾನು ಬದರ್ ದಿನದಂದು ಓರ್ವ ಅವಿಶ್ವಾಸಿಯನ್ನು ವಧಿಸಲು ಹಿಂಬಾಲಿಸಿದೆ. ಆದರೆ ನನ್ನ ಕತ್ತಿಯು ಅವನನ್ನು ತಲುಪುವ ಮೊದಲು ಅವನ ತಲೆ ಬಿದ್ದಿರುವುದನ್ನು ನಾನು ನೋಡಿದೆ. ಆತನನ್ನು ನಾನಲ್ಲದೆ ಬೇರೆಯವರು ಕೊಂದಿದ್ದಾರೆ ಎಂದು ತಿಳಿದು ಬಂದಿದೆ. ಹಝ್ರತ್ ಅಬ್ದುಲ್ಲಾ

ಬಿನ್ ಅಬ್ಬಾಸ್(ರ) ಅವರಿಂದ ನಿರೂಪಿಸಲ್ಪಟ್ಟಿದೆ, ಬದರ್ ದಿನದಂದು ದೇವದೂತರ ಚಿಹ್ನೆಗಳು ಬಿಳಿ ಪೇಟಗಳಾಗಿದ್ದು, ಅವರು ತಮ್ಮ ಬೆನ್ನಿನ ಮೇಲೆ ನೇತುಹಾಕಿದರು ಮತ್ತು ಹುನೈನ್ ದಿನದಂದು ಕೆಂಪು ಪೇಟಗಳು ಅವರ ಸಂಕೇತಗಳಾಗಿದ್ದವು. ಹಝ್ರತ್ ಅಲಿ(ರ) ವರದಿ ಮಾಡುತ್ತಾರೆ: ಪೇಟಗಳು ಅರಬ್ಬರ ಕಿರೀಟಗಳಾಗಿವೆ ಮತ್ತು ಬದರ್ ದಿನದಂದು ದೇವದೂತರ ಚಿಹ್ನೆಗಳು ಅವರು ತಮ್ಮ ಬೆನ್ನಿನ ಮೇಲೆ ನೇತುಹಾಕಿದ ಬಿಳಿ ಪೇಟಗಳಾಗಿದ್ದವು. ಆದರೆ ಹಝ್ರತ್ ಜಿಬ್ರೀಲ್(ಅ) ಅವರ ತಲೆಯ ಮೇಲೆ ಹಳದಿ ಪೇಟವಿತ್ತು.

ಹಝ್ರತ್ ಇಬ್ನೆ ಅಬ್ಬಾಸ್(ರ) ವರದಿ ಮಾಡುತ್ತಾರೆ ದೇವದೂತರು ಬದರ್ ದಿನದಂದು ಹೊರತುಪಡಿಸಿ ಬೇರೆ ಯಾವುದೇ ಯುದ್ಧದಲ್ಲಿ ಹೋರಾಡಲಿಲ್ಲ. ಅವರು ಸಂಖ್ಯೆಯನ್ನು ಹೆಚ್ಚಿಸಲು ಮತ್ತು ಸಹಾಯ ಮಾಡಲು ಇತರ ಯುದ್ಧಗಳಲ್ಲಿ ಭಾಗವಹಿಸುತ್ತಿದ್ದರು, ಅವರು ಯಾರನ್ನೂ ಕೊಲ್ಲಲಿಲ್ಲ.

(ಸೀರತ್ ಇಬ್ನೆ ಹಿಶ್ಯಾಮ್, ಪುಟ–431–432, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2001) ಇದು ಸೀರತ್ ಇಬ್ನೆ ಹಿಶ್ಯಾಮ್‌ನ ವರದಿಯಾಗಿದೆ.

ಕೆಲವು ಜನರು ದೇವದೂತರ ಮೂಲವು ಮುಮಿನ್‌ಗಳಿಗೆ ಒಳ್ಳೆಯ ಸುದ್ದಿ ಮತ್ತು ಅವರ ತೃಪ್ತಿಗಾಗಿ ಮಾತ್ರ ಎಂದು ನಂಬುತ್ತಾರೆ, ಇಲ್ಲದಿದ್ದರೆ ದೇವದೂತರು ವಾಸ್ತವವಾಗಿ ಯುದ್ಧದಲ್ಲಿ ಭಾಗವಹಿಸಲಿಲ್ಲ. ಈ ಪರಿಕಲ್ಪನೆಯೂ ಕೆಲವು ಅಧಿಕೃತ ಹದೀಸ್‌ಗಳಿಗೆ ವಿರುದ್ಧವಾಗಿದೆ. ದೇವದೂತರು ವಾಸ್ತವವಾಗಿ ಯುದ್ಧದಲ್ಲಿ ಭಾಗವಹಿಸಿದ್ದರು ಎಂಬುದು ಸರಿಯಾದ ವರದಿಯಿಂದ ಸಾಬೀತಾಗಿದೆ. ಆದರೆ, ಬೆಂಬಲಕ್ಕೆ ಒಬ್ಬನೇ ದೇವದೂತನೇ ಸಾಕು ಎಂದಾದರೆ, ಸಾವಿರಾರು ದೇವದೂತರನ್ನು ಏಕೆ ಇಳಿಸಲಾಯಿತು ಎಂಬ ಸಮಸ್ಯೆ ಇಲ್ಲಿ ಉದ್ಭವಿಸುತ್ತದೆ.

ಕೆಲವರ ಪ್ರಕಾರ ದೇವದೂತರ ಅವತರಣ ಎಂಬುದು ಸತ್ಯವಿಶ್ವಾಸಿಗಳಿಗಾಗಿ ಸುವಾರ್ತೆ ಮತ್ತು ಮನಸ್ಸಮಾಧಾನಕ್ಕಾಗಿ ಆಗಿತ್ತು. ಸತ್ಯದಲ್ಲಿ ದೇವದೂತರು ಯುದ್ಧದಲ್ಲಿ ಭಾಗವಹಿಸಿರಲಿಲ್ಲ. ಪ್ರಬಲವಾದ ಹದೀಸುಗಳಿಗೆ ಈ ಅಭಿಪ್ರಾಯ ವಿರುದ್ಧವಾಗಿದೆ. ಸಹಾಯಕ್ಕಾಗಿ ಒಂದೇ ದೇವದೂತ ಸಾಕಾಗಿತ್ತು, ಸಾವಿರಾರು ದೇವದೂತರ ಆವಶ್ಯಕತೆ ಏಕೆ ಎಂಬ ಸಂಶಯ ಉದಿಸುತ್ತದೆ. ಇಮಾಂ ಇಬ್ನು ಕಸೀರ್ ಬರೆಯುತ್ತಾರೆ: ಅಲ್ಲಾಹನ ಕಡೆಯಿಂದ ದೇವದೂತರ ಅವತೀರ್ಣ ಮತ್ತು ಮುಸ್ಲಿಮರಿಗೆ ಇದರ ಬಗ್ಗೆ ತಿಳಿಸಿದ್ದು ಸುವಾರ್ತೆ ಎಂಬ ರೀತಿಯಲ್ಲಾಗಿತ್ತು. ಸತ್ಯದಲ್ಲಿ ಅವರಿಲ್ಲದೆಯೂ ಶತ್ರುಗಳ ವಿರುದ್ಧ ಅಲ್ಲಾಹನು ಮುಸ್ಲಿಮರಿಗೆ ಸಹಾಯ ಮಾಡಬಹುದಾಗಿದೆ. ಅದಕ್ಕಾಗಿಯೇ ಅವರು ಹೇಳಿದರು, ಸಹಾಯವು ಅಲ್ಲಾಹನಿಂದ ಮಾತ್ರ ಮತ್ತು ಸೂರಾ ಮುಹಮ್ಮದ್‌ನಲ್ಲಿ ಅಲ್ಲಾಹನು ಹೇಳಿದನು, "ಅಲ್ಲಾಹನು ಇಚ್ಛಿಸಿದರೆ, ಅವನು ಅವಿಶ್ವಾಸಿಗಳಿಂದ ಸೇಡು ತೀರಿಸಿಕೊಳ್ಳುತ್ತಾನೆ, ಆದರೆ ಅವನು ಪರೀಕ್ಷಿಸುತ್ತಾನೆ." (ದಾ.ಎ.ರಃ ಮಾರಿಫ್ ಸೀರತ್ ಮುಹಮ್ಮದ್(ಸ), ಸಂಪುಟ–6, ಪುಟ–218–219, ಬಝ್ಮ್ ಇಖ್ಬಾಲ್ ಲಾಹೋರ್, ಏಪ್ರಿಲ್ 2022)

ಹಝ್ರತ್ ಮುಸ್ಲೆಹ್ ಮೌಊದ್(ರ) ಹೇಳುತ್ತಾರೆ: "ಬದರ್ ಯುದ್ಧದಲ್ಲಿ, ದೇವರು ಮೋಡಗಳಿಂದ ತನ್ನ ಮುಖವನ್ನು ಬಹಿರಂಗಪಡಿಸಿದನು, ಅಂದರೆ, ಯುದ್ಧ ಪ್ರಾರಂಭವಾಗುವುದಕ್ಕು ಮುನ್ನವೇ ಮಳೆ ಶುರುವಾಯಿತು ಅದರಿಂದ ಅವಿಶ್ವಾಸಿಗಳಿಗೆ ಬಹಳ ನಷ್ಟ ಅನುಭವಿಸಬೇಕಾಯಿತು ಮತ್ತು ವಿಶ್ವಾಸಿಗಳಿಗೆ ಯುದ್ಧದ ದೃಷ್ಟಿಯಿಂದ ಬಹಳ ಪ್ರಯೋಜನವಾಯಿತು ಮತ್ತು ವಿಶ್ವಾಸಿಗಳಿಗೆ ಬೆಂಬಲ ಹಗೂ ಅವಿಶ್ವಾಸಿಗಳ ಮೇಲೆ ಭೀತಿ ಸೃಷ್ಟಿಸಲು ದೇವದೂತರು ಹೃದಯಗಳ ಮೇಲೆ ಅವತರಿಸಿದರು ಬದಲಿಗೆ ಬದರ್ ಯುದ್ಧದಲ್ಲಿ ಅನೇಕ ಅವಿಶ್ವಾಸಿಗಳು ದೇವದೂತರನ್ನು ತಮ್ಮ ಕಣ್ಣುಗಳಿಂದ ನೋಡಿದರು ಮತ್ತು **ಖುಝಿಯಲ್ ಅಮ್ರ್** ನಿಂದ ಅರಬ್ಬರ ಶ್ರೇಷ್ಠ ಸರದಾರರು ಕೊಲ್ಲಲ್ಪಟ್ಟರು. (ತಫ್ಸೀರ್ ಕಬೀರ್, ಸಂಪುಟ 2, ಪುಟ 458)

ಅಂತೆಯೇ, ತಫ್ಸಿರ್ ಸಗೀರ್‌ನಲ್ಲಿ, ಸೂರಾ ಆಲಿ–ಇಮ್ರಾನ್‌ನ 127 ನೇ ಆಯತ್‌ನ ವ್ಯಾಖ್ಯಾನದಲ್ಲಿ ಬರೆಯುತ್ತಾರೆ: "ಇದರಲ್ಲಿ ದೇವದೂತರನ್ನು ಉಲ್ಲೇಖಿಸಲಾಗಿದೆ ಏಕೆಂದರೆ ಕನಸಿನಲ್ಲಿ ಅಥವಾ ದೈವದರ್ಶನದಲ್ಲಿನ ಒಳ್ಳೆಯ ಸುದ್ದಿ ವ್ಯಕ್ತಿಯ ಧೈರ್ಯವನ್ನು ಹೆಚ್ಚಿಸುತ್ತದೆ, ಇಲ್ಲದಿದ್ದರೆ ಸರ್ವಶಕ್ತನಾದ ಅಲ್ಲಾಹನು ಸಹಾಯ ಮಾಡುತ್ತಾನೆ ಎಂಬುದು ಸತ್ಯವಾಗಿದೆ."

(ತಫ್ಸೀರೆ ನಗೀರ್, ಪುಟ–96, ಸೂರಃ ಆಲಿ ಇಮ್ರಾನ್:127)

ಆದಾಗ್ಯೂ, ಇದು ದೈವದರ್ಶನ್ ಬಣ್ಣವಾಗಿತ್ತು, ಇದು ಜನರು ಹಾಗೂ ಅವಿಶ್ವಾಸಿಗಳು ಕಂಡ ನೈಜ ಸ್ಥಿತಿಯಾಗಿದೆ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ ಇದು ಅತ್ತಬ್ಲೀಗ್, ಆಈನ ಕಮಾಲಾತೆ ಇಸ್ಲಾಮ್‌ನಲ್ಲಿ ಬರೆಯಲಾಗಿದೆ. ಇದನ್ನು ಅರೇಬಿಕ್ ಭಾಷೆಯಲ್ಲಿ ಉಲ್ಲೇಖಿಸಲಾಗಿದೆ, ಆದ್ದರಿಂದ ಅರೇಬಿಕ್ ಜನರು ಕೆಲವೊಮ್ಮೆ ನೀವು ದೀರ್ಘ ವಾಕ್ಯಗಳನ್ನು ಓದಿದರೆ, ನಮಗೆ ಅನುವಾದಿಸಲು ಕಷ್ಟವಾಗುತ್ತದೆ ಎಂದು ಹೇಳುತ್ತಾರೆ. ಅದಕ್ಕಾಗಿಯೇ ನಾನು ಅರೇಬಿಕ್ ಪಠ್ಯವನ್ನು ಪಠಿಸಲು ಪ್ರಯತ್ನಿಸುತ್ತೇನೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ:

"وَ قَدْ جَرَتْ عَادَتُهٗ وَ سُنَّتُهٗ اَنَّهٗ يَخْتَارُ الْاِخْفَاءَ وَالْكَتْمَ فِيْ وَاقِعَاتٍ قَضَتْ حِكْمَتُهٗ اِخْفَاءَ هَا وَ يَخْلُقُ الْاَهْوَاءَ فَتَحْشُرُ الْاٰرَاءَ اِلٰى جِهَاتٍ اُخْرٰى. وَاِذَا اَرَادَ اِخْفَاءَ صُوْرَةِ نَفْسِ وَاقِعَةٍ فَرُبَّمَا يَرٰى فِيْ تِلْكَ الْمَوَاضِعِ الْوَاقِعَةَ الْكَبِيْرَةَ صَغِيْرَةً مَهُوْنَةً وَالْوَاقِعَةَ الصَّغِيْرَةَ الْمَسْنُوْنَةَ كَبِيْرَةً نَادِرَةً وَالْوَاقِعَةَ الْمُبَشِّرَةَ مُخَوِّفَةً وَالْوَاقِعَةَ الْمُخَوِّفَةَ مُبَشِّرَةً. فَهٰذِهٖ اَرْبَعَةُ اَقْسَامٍ مِنَ الْوَاقِعَاتِ مِنْ سُنَنِ اللّٰهِ كَمَا مَضٰى. اَمَّا الْوَاقِعَةُ الْكَبِيْرَةُ الْعَظِيْمَةُ الَّتِيْ اَرَادَ اللّٰهُ اَنْ يُّرِيَهَا صَغِيْرَةً حَقِيْرَةً فَنَظِيْرُهَا فِي الْقُرْاٰنِ وَاقِعَةُ بَدْرٍ لِمَنْ يَتَدَبَّرُ وَ يَرٰى. فَاِنَّ اللّٰهَ قَلَّلَ اَعْدَاءَ الْاِسْلَامِ بِبَدْرٍ فِيْ مَنَامِ رَسُوْلِهٖ لِيُذْهِبَ الرَّوْعَ عَنْ قُلُوْبِ الْمُسْلِمِيْنَ وَيَقْضِيَ مَا اَرَادَ مِنَ الْقَضَاءِ. وَاَمَّا الْوَاقِعَةُ الَّتِيْ اَرَادَ اللّٰهُ اَنْ يُّرِيَهَا كَبِيْرَةً نَادِرَةً فَنَظِيْرُهَا فِي الْقُرْاٰنِ بِشَارَةُ مَدَدِ الْمَلَائِكَةِ كَيْ تَقَرَّ قُلُوْبُ الْمُؤْمِنِيْنَ وَ لَا تَأْخُذَهُمْ خِيْفَةٌ فِيْ ذَالِكَ الْمَاْوٰى. فَاِنَّهٗ تَعَالٰى وَعَدَ فِي الْقُرْاٰنِ لِلْمُؤْمِنِيْنَ وَبَشَّرَهُمْ بِاَنَّهٗ يُمِدُّهُمْ بِخَمْسَةِ اٰلَافٍ مِنَ الْمَلَائِكَةِ وَ مَا جَعَلَ هٰذَا الْعَدَدَ الْكَثِيْرَ اِلَّا لَهُمْ بُشْرٰى. لِاَنَّ فَرْدًا مِنَ الْمَلَائِكَةِ يَقْدِرُ بِاِذْنِ رَبِّهٖ عَلٰى اَنْ يَّجْعَلَ عَالِيَ الْاَرْضِ سَافِلَهَا فَمَا كَانَ حَاجَةٌ اِلٰى خَمْسَةِ اٰلَافٍ بَلْ اِلٰى خَمْسَةٍ وَلٰكِنَّ اللّٰهَ شَاءَ اَنْ يُّرِيَهُمْ نُصْرَةً عَظِيْمَةً فَاخْتَارَ لَفْظًا يَفْهَمُ مِنْ ظَاهِرِهٖ كَثْرَةُ الْمُمِدِّيْنَ وَ اَرَادَ مَا اَرَادَ مِنَ الْمَعْنٰى. ثُمَّ نَبَّهَ الْمُؤْمِنِيْنَ بَعْدَ فَتْحِ بَدْرٍ اَنَّ عِدَّةَ الْمَلَائِكَةِ مَا كَانَتْ مَحْمُوْلَةً عَلٰى ظَاهِرِ اَلْفَاظِهَا بَلْ كَانَتْ مُؤَوَّلَةً بِتَاْوِيْلٍ يَعْلَمُهُ اللّٰهُ بِعِلْمِهِ الْاَرْفَعِ وَالْاَعْلٰى. وَ فَعَلَ كَذَالِكَ لِتَطْمَئِنَّ قُلُوْبُهُمْ بِهٰذِهِ الْبُشْرٰى وَيَزِيْدَهُمْ حُسْنَ الظَّنِّ وَالرَّجَاءِ"

ಇದರ ಅನುವಾದವೆಂದರೆ ಸರ್ವಶಕ್ತನಾದ ಅಲ್ಲಾಹನ ಈ ಅಭ್ಯಾಸ ಮತ್ತು ಸುನ್ನತ್ ಆಗಿದೆ ಅಲ್ಲಾಹನು ಯಾವಾಗಲೂ ರಹಸ್ಯವಾಗಿಡುತ್ತಾನೆ ಮತ್ತು ಅವರ ಬುದ್ಧಿವಂತಿಕೆಯು (ಹಿಕ್ಮತ್) ಅವುಗಳನ್ನು ಮರೆಮಾಡಬೇಕೆಂದು ಬಯಸುವ ಘಟನೆಗಳನ್ನು ಮರೆಮಾಡುತ್ತಾರೆ ಮತ್ತು ಜನರ ಆಸೆಗಳು ಮತ್ತು ಅಭಿಪ್ರಾಯಗಳು ನೈಜ ವಾಸ್ತವಕ್ಕೆ ವಿರುದ್ಧವಾಗಿರುತ್ತವೆ. ಕೆಲವೊಮ್ಮೆ ದೊಡ್ಡ ಘಟನೆಯನ್ನು ಸಣ್ಣ ಮತ್ತು ಅತ್ಯಲ್ಪ ಘಟನೆ ಎಂದು ವಿವರಿಸಲಾಗುತ್ತದೆ ಮತ್ತು ಸಣ್ಣ ಘಟನೆಯನ್ನು ದೊಡ್ಡ ಮತ್ತು ಅಪರೂಪದ ಘಟನೆ ಎಂದು ವಿವರಿಸಲಾಗುತ್ತದೆ ಮತ್ತು ಒಳ್ಳೆಯ ಸುದ್ದಿಯ ಘಟನೆಯನ್ನು ಭಯಾನಕ ಘಟನೆ ಮತ್ತು ಭಯಾನಕ ಘಟನೆಯನ್ನು ಒಳ್ಳೆಯ ಸುದ್ದಿ ಎಂದು ತೋರಿಸಲಾಗುತ್ತದೆ. ಇವು ಅಲ್ಲಾಹನ ಸುನ್ನತ್ ಪ್ರಕಾರ ನಡೆಯುತ್ತಿರುವ ನಾಲ್ಕು ರೀತಿಯ ಘಟನೆಗಳಾಗಿವೆ. ಸರ್ವಶಕ್ತನಾದ ಅಲ್ಲಾಹನು ಅದನ್ನು ಚಿಕ್ಕದಾಗಿ ಮತ್ತು ಧಿಕ್ಕರಿಸುವಂತೆ ಮಾಡಲು ಇಚ್ಛಿಸಿದ ಶ್ರೇಷ್ಠ ಮತ್ತು ಮಹಾನ್ ಘಟನೆಯು ಬದರ್ ಯುದ್ಧದ ಘಟನೆಯಾಗಿದೆ. ಆದ್ದರಿಂದ, ಬದರ್ ಸಂದರ್ಭದಲ್ಲಿ, ಅಲ್ಲಾಹನು ತನ್ನ ಪ್ರವದಿ ಮುಹಮ್ಮದ್(ಸ) ಅವರ ಕನಸಿನಲ್ಲಿ ಇಸ್ಲಾಮಿನ ಶತ್ರುಗಳನ್ನು ತೋರಿಸಿದನು. ಆ ಸಂದರ್ಭದಲ್ಲಿ, ಹಝ್ರತ್ ಪೈಗಂಬರ್(ಸ) ಅವರು ಮುಸ್ಲಿಮರ ಹೃದಯದಿಂದ ಅವರ ಭಯವನ್ನು ತೊಡೆದುಹಾಕಲು ಇಸ್ಲಾಂ ಧರ್ಮದ ಶತ್ರುಗಳನ್ನು ಕನಸಿನಲ್ಲಿ ತೋರಿಸಿದನು ಮತ್ತು ಇದರಿಂದ ಸರ್ವಶಕ್ತನಾದ ಅಲ್ಲಾಹನು ಉದ್ದೇಶಿಸಿದ್ದು ಈಡೇರುತ್ತದೆ ಮತ್ತು ಅಲ್ಲಾಹನು ದೊಡ್ಡ ಮತ್ತು ಅಪರೂಪದನ್ನು ತೋರಿಸಲು ಇಚ್ಛಿಸಿದರೆ ಅದು ಪವಿತ್ರ ಖುರ್‌ಆನ್‌ನಲ್ಲಿ ದೇವದೂತರ ಸಹಾಯದ ಸುವಾರ್ತೆಯ ಘಟನೆ ಇದೆ ಇದರಿಂದಾಗಿ ಸತ್ಯವಿಶ್ವಾಸಿಗಳ ಹೃದಯ ತಣ್ಣಗಾಗಲಿ ಮತ್ತು ಯುದ್ಧದಲ್ಲಿ ಅವರಿಗೆ ಯಾವುದೇ ರೀತಿಯ ಭಯ ಪಡದಿರಲಿ ಎಂದು. ಆದುದರಿಂದ ಅಲ್ಲಾಹನು ಪವಿತ್ರ ಖುರ್‌ಆನ್‌ನನಲ್ಲಿ ವಿಶ್ವಾಸಿಗಳಿಗೆ ವಾಗ್ದಾನ ಮಾಡಿದನು ಮತ್ತು ಐದು ಸಾವಿರ ದೇವದೂತರೊಂದಿಗೆ ಅವರ ಸಹಾಯಕ್ಕೆ ಬರುತ್ತಾನೆ ಎಂಬ ಶುಭವಾರ್ತೆಯನ್ನು ಅವರಿಗೆ ನೀಡಿದನು. ಈ ಸಂಖ್ಯೆಯನ್ನು ಹೆಚ್ಚಿಸಲಾಗಿದೆ ಮತ್ತು ಅವರಿಗೆ ಒಳ್ಳೆಯ ಸುದ್ದಿ ಇದೆ ಎಂದು ತೋರಿಸಲಾಗಿದೆ. ದೇವದೂತರಲ್ಲಿ ಒಬ್ಬ ದೇವದೂತನಿಗೆ ಮಾತ್ರ ತನ್ನ ಭಗವಂತನ ಆದೇಶದಂತೆ ಭೂಮಿಯನ್ನು

EDITOR
TARIQ AHMED IDRIS.
Mobile : +91 9902678609
e-mail: kannadabadar@gmail.com
website:www.akhbarbadr.in

REGISTERED WITH THE REGISTRAR OF THE NEWSPAPER FOR INDIA AT NO RN PUNKAN/2020/78613

Weekly **BADAR** Qadian

Distt: Gurdaspur (Pb.) INDIA Qadian - 143516

Postal Reg. No: 3000039689/2023-25 Vol No.04, Thursday, 10 August 2023, Issue No. 32

MANAGER
SHAIKH MUJAHID AHMAD.
Mobile : +91 99153 79255
e-mail:managerbadrqnd@gmail.com
www.alislam.org/badr

ANNUAL SUBSCRIPTION: Rs.600/- (Per Issue: 10/- ) (WEIGHT: 20-50, grms / issue)


ಕೆಳಗೆ-ಮೇಲೆ ಮಾಡುವ ಶಕ್ತಿಯನ್ನು ಹೊಂದಿರುತ್ತಾನೆ. ಇದಕ್ಕೆ ಐದು ಸಾವಿರ ಅಗತ್ಯವಿಲ್ಲ, ಐದು ಸಹ ಅಗತ್ಯವಿಲ್ಲ, ಆದರೆ ಅಲ್ಲಾಹನು ಅವರಿಗೆ ದೊಡ್ಡ ಸಹಾಯವನ್ನು ತೋರಿಸಲು ಬಯಸಿದನು, ಆದ್ದರಿಂದ ಅವನು ಸಹಾಯಕನ ಸಮೃದ್ಧಿಯನ್ನು ತೋರಿಸುವ ಪದವನ್ನು ಬಳಸಿದನು ಮತ್ತು ಅವನು ಅರ್ಥಮಾಡಿಕೊಂಡನು. ನಂತರ ಬದರ್ ವಿಜಯದ ನಂತರ, ಅವರು ದೇವದೂತರ ಸಂಖ್ಯೆಯು ಬಾಹ್ಯ ಪದಗಳನ್ನು ಆಧರಿಸಿಲ್ಲ ಎಂದು ಅವರು ವಿಶ್ವಾಸಿಗಳಿಗೆ ತಿಳಿಸಿದನು, ಆದರೆ ಇದು ಅಲ್ಲಾಹನಿಗೆ ಚೆನ್ನಾಗಿ ತಿಳಿದಿದೆ ಮತ್ತು ಅಲ್ಲಾಹನು ಇದನ್ನು ಮಾಡಿದನು ಆದ್ದರಿಂದ ಈ ಸುವಾರ್ತೆಯ ಮೂಲಕ ಅವರ ಹೃದಯಗಳು ಪ್ರಬುದ್ಧವಾಗುತ್ತವೆ. ತೃಪ್ತರಾಗಿರಿ ಮತ್ತು ಅವನನ್ನು ಉತ್ತಮ ನಂಬಿಕೆ ಮತ್ತು ಭರವಸೆಯಲ್ಲಿ ಹೆಚ್ಚಿಸಿ.

ಅವಿಶ್ವಾಸಿಗಳ ಸೋಲಿನ ಬಗ್ಗೆ ಬರೆಯಲಾಗಿದೆ, ಯುದ್ಧ ಶುರುವಾದಾಗ ಸ್ವಲ್ಪ ಸಮಯದ ನಂತರ ಮುಶ್ರಿಕರ ಸೈನ್ಯದಲ್ಲಿ ಪರಾಜಯ ಮತ್ತು ಕಳವಳದ ಲಕ್ಷಣಗಳು ಪ್ರಕಟಗೊಂಡುವು. ಅವರ ಪಂಕ್ತಿಗಳು ಮುಸ್ಲಿಮರ ಶಕ್ತವಾದ ದಾಳಿಗಳಿಂದ ಅಸ್ತವ್ಯಸ್ತಗೊಂಡುವು. ಅವರು ಪರಾರಿಯಾಗಲು ಆರಂಭಿಸಿದರು. ಮುಸ್ಲಿಮರು ಅವರನ್ನು ಹಿಂಬಾಲಿಸಿದರು ಮತ್ತು ಅವರನ್ನು ಪರಾಜಿತಗೊಳಿಸಿದರು. (ಅರ್ರಹೀಖ್ ಅಲ್‌ಮಖ್ತೂಮ್ ಅನುವಾದ, ಪುಟ-299, ಅಲ್‌ಮಕ್ತಬತುಸ್ಸಲಫೀಯ ಲಹೋರ್ 2000)

ಈ ಯುದ್ಧವು ಮುಶ್ರಿಕರ ಪರಾಜಯ ಮತ್ತು ಮುಸ್ಲಿಮರ ವಿಜಯದೊಂದಿಗೆ ಮುಕ್ತಾಯಗೊಂಡಿತು. ಯುದ್ಧದಲ್ಲಿ 14 ಮುಸ್ಲಿಮರು (6 ಮುಹಾಜಿರರು ಮತ್ತು 8 ಅನ್ಸಾರರು) ಶಹೀದ್ ಆದರು. ಆದರೆ ಮುಶ್ರಿಕರಿಗೆ ಹಿರಿದಾದ ನಷ್ಟವುಂಟಾಯಿತು. ಅವರ 70 ಜನರು ವಧಿಸಲ್ಪಟ್ಟರು ಮತ್ತು 70 ಜನರು ಕೈದಿಗಳಾದರು. ಅವರಲ್ಲಿ ಅನೇಕ ನಾಯಕರು, ಮುಖಂಡರು ಮತ್ತು ದೊಡ್ಡ ದೊಡ್ಡ ಸರದಾರರು ಇದ್ದರು. (ಅರ್ರಹೀಖ್ ಅಲ್‌ಮಖ್ತೂಮ್ ಅನುವಾದ, ಪುಟ-306, ಅಲ್‌ಮಕ್ತಬತುಸ್ಸಲಫೀಯ ಲಹೋರ್ 2000)

ಬದರ್ ಯುದ್ಧದಲ್ಲಿ ಶಹೀದ್ ಆದ ಸಹಾಬರವರು ಇವರಾಗಿದ್ದಾರೆ.

ಉಲ್ಲೇಖಿಸಿದಂತೆ ಒಟ್ಟು ಹದಿನಾಲ್ಕು ಮುಸ್ಲಿಮರು ಶಹೀದ್ ಆದರು. ಅವರಲ್ಲಿ ಆರು ಮಂದಿ ಮುಹಾಜಿರೀನ್‌ಗಳು ಮತ್ತು ಎಂಟು ಮಂದಿ ಅನ್ಸಾರ್‌ಗಳು. ಮುಹಾಜಿರೀನ್‌ಗಳಲ್ಲಿ ಉಬೈದಾ ಬಿನ್ ಹಾರಿಸ್ ಬಿನ್ ಮುತಲ್ಲಿಬ್, ಉಮೈರ್ ಬಿನ್ ಅಬಿ ವಕ್ಕಾಸ್, ಧುಶ್ಶಿಮಾಲೈನ್ ಅಂದರೆ ಉಮೈರ್ ಬಿನ್ ಅಬ್ದ್ ಅಮ್ರ್, ಅಖಿಲ್ ಬಿನ್ ಬುಕೈರ್, ಮುಹ್‌ಜಜ್ ಮೌಲಾ ಉಮರ್ ಬಿನ್ ಖತ್ತಾಬ್, ಸಫ್ವಾನ್ ಬಿನ್ ಬೈಜಾ. ಮತ್ತು ಅನ್ಸಾರ್ ಅವರಿಂದ, ಸಾಅದ್ ಬಿನ್ ಖೈಸಮಾ, ಮುಬಾಶಿರ್ ಬಿನ್ ಅಬ್ದುಲ್ ಮುಂಧಿರ್, ಯಾಜಿದ್ ಬಿನ್ ಹಾರಿಸ್, ಉಮೈರ್ ಬಿನ್ ಹುಮಾಮ್, ರಾಫಿ ಬಿನ್ ಮುಅಲಿ, ಹಾರಿಸಾ ಬಿನ್ ಸುರಾಖಾ.

ಅವಿಶ್ವಾಸಿಗಳ ಹತರಾದ ಎಪ್ಪತ್ತು ಅವಿಶ್ವಾಸಿಗಳು ನಾಶವಾದರು. ಅವರಲ್ಲಿ ಹೆಚ್ಚಿನವರು ಖುರೈಷಿಗಳ ಮುಖ್ಯಸ್ಥರಾಗಿದ್ದರು. ಕೆಲವು ಪ್ರಮುಖ ಮತ್ತು ಪ್ರಸಿದ್ಧ ಹೆಸರುಗಳು ಇಲ್ಲಿವೆ. ಹಂಝಲಾ ಬಿನ್ ಅಬು ಸುಫ್ಯಾನ್, ಹಾರಿಸ್ ಬಿನ್ ಹಝ್ರುಮಿ, ಅಮೀರ್ ಬಿನ್ ಹಝ್ರುಮಿ, ಉಬೈದಾ ಬಿನ್ ಸಯೀದ್ ಬಿನ್ ಆಸ್, ಅಸ್ ಬಿನ್ ಸಯೀದ್ ಬಿನ್ ಆಸ್, ಉಕ್ಬಾ ಬಿನ್ ಅಬಿ ಮುಅಯತ್, ಉತ್ಬಾ ಬಿನ್ ರಬಿಯಾಹ್, ಶೈಬಾ ಬಿನ್ ರಬಿಯಾಹ್, ವಲೀದ್ ಬಿನ್ ಉತ್ಬಾಹ್, ಅಬಿನ್ತ್ ಬಿನ್ ಉತ್ಬಾಹ್ ಬಿನ್ ರಬೀಯಹ್, ಹಾರಿಸ್ ಬಿನ್ ಆಮಿರ್, ಅಬುಲ್ ಬಖ್ತರಿ ಆಸ್ ಬಿನ್ ಹಿಶಾಮ್, ನಝುರ್ ಬಿನ್ ಹಾರಿಸ್, ಆಸ್ ಬಿನ್ ಹಿಶಾಮ್ ಅವರ ಹೆಸರು ಎರಡು ಬಾರಿ ಉಲ್ಲೇಖವಾಗಿದೆ ಅಥವಾ ಅಥವಾ ಇಬ್ಬರು ವ್ಯಕ್ತಿಗಳಿದ್ದಾರೆ. ಅಬುಲ್ ಆಸ್ ಬಿನ್ ಕೈಸ್, ಉಮಯ್ಯ ಬಿನ್ ಖಲ್ಫ್, ಅಬು ಜಹಲ್ ಅವರ ಹೆಸರು ಅಮ್ರ್ ಬಿನ್ ಹಿಶಾಮ್ ಎಂದಿಗಿದೆ. ಅವರಲ್ಲಿ ಹೆಚ್ಚಿನವರು ಮಕ್ಕಾದಲ್ಲಿರುವ ಮುಸಲ್ಮಾನರನ್ನೂ ಒಳಗೊಂಡಂತೆ ಹಝ್ರತ್ ಪೈಗಂಬರ್(ಸ) ಅವರನ್ನು ತೊಂದರೆ ನೀಡುತ್ತಿದ್ದರು.

(ಸೀರತ್ ಇಬ್ನೆ ಹಿಶಾಮ್, ಪುಟ-476-480, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2001) (ಕಿತಾಬುಲ್ ಮಗ್ಹಾಝಿ ಲಿಲ್ ವಾಖದಿ, ಸಂಪುಟ-1, ಪುಟ-145, ಆಲಮುಲ್ ಕಿತಾಬ್ ಬೈರೂತ್ 1984) ಇದರ ಬಗ್ಗೆ ಮುಂದೆ ವಿವರಿಸಲಾಗುವುದು. ಇನ್‌ಶಾಅಲ್ಲಾಹ್

ಕೆಲವು ದುಆಗಳ ಕಡೆಗೆ ಗಮನ ಸೆಳೆಯಲು ಬಯಸುತ್ತೇನೆ. ಫೆಲಸ್ತೀನಿನ ಮುಸ್ಲಿಮರಿಗಾಗಿ ದುಆ ಮಾಡಿರಿ. ಅಲ್ಲಾಹನು ಅವರ ಕಷ್ಟತೆಗಳನ್ನು ನೀಗಿಸಲಿ. ಪೀಡಿತರಿಗೆ ಸಹಾಯ ನೀಡಲಿ. ಅವರ ಹಕ್ಕುಗಳನ್ನು ಈಡೇರಿಸುವ ಲೀಡರನ್ನು ಅವರಿಗೆ ನೀಡಲಿ. ಅವರ ಸರಿಯಾದ ಮಾರ್ಗದರ್ಶನ ಮಾಡುವ ಮತ್ತು ಅವರನ್ನು ದೌರ್ಜನ್ಯದಿಂದ ಬಿಡಿಸಲು ಪ್ರಯತ್ನಿಸುವ ನಾಯಕ ಅವರಿಗೆ ಅಲ್ಲಾಹನು ನೀಡಲಿ. ಈಗಂತು ಅವರ ಮೇಲೆ ಅತ್ಯಂತ ಹೆಚ್ಚಿನ ದೌರ್ಜನ್ಯಗಳು ನಡೆದಿದೆ. ಅವರನ್ನು ನೋಡಲು ಯಾರೂ ಇಲ್ಲವೆಂದು ತೋರುತ್ತಿದೆ. ಅವರಿಗೆ ಮಾರ್ಗದರ್ಶನ ನೀಡಲು ಯಾರೂ ಇಲ್ಲ. ಮುಸ್ಲಿಮರು ಒಗ್ಗಟ್ಟಿನಿಂದ ಇರುವುದಾದರೆ ಅವರು ಕಷ್ಟತೆಗಳಿಂದ ಮುಕ್ತಿ ಪಡೆಯಬಹುದಾಗಿದೆ. ಅದೇ ರೀತಿಯಲ್ಲಿ ಸ್ವೀಡನಿನಲ್ಲೂ ಮುಸ್ಲಿಮರ ವಿರುದ್ಧ ಬಹಳ ಹೀನಾಯವಾದ ಕಾರ್ಯಗಳು ನಡೆಯುತ್ತಿವೆ. ಪವಿತ್ರ ಖುರ್‌ಆನಿನೊಂದಿಗೆ ಅಗೌರವದಿಂದ ವರ್ತಿಸಿರುವರು. ಅಲ್ಲಾಹನು ಅವರನ್ನು ಹಿಡಿಗೂಡಲಿ. ಇದರಲ್ಲೂ ಮುಸ್ಲಿಮ್ ಸರ್ಕಾರಗಳ ತಪ್ಪಿದೆ. ಅವರ ನಡುವೆ ಇರುವ ಬಿರುಕಿನ ಕಾರಣದಿಂದ ವಿರೋಧಿ ಶಕ್ತಿಗಳು ತಪ್ಪಾದ ಕೃತ್ಯಗಳನ್ನು ಮಾಡುತ್ತವೆ. ಮುಸ್ಲಿಮರ ಕಡೆಯಿಂದ ಏನಾದರೂ ಪ್ರತಿಕ್ರಿಯೆ ನಡೆಯುವುದಾದರೂ ಅದು ತಾತ್ಕಾಲಿಕವೂ ಪ್ರಭಾವರಹಿತವೂ ಆಗಿರುವುದು. ಆದ್ದರಿಂದ ಮುಸ್ಲಿಮ್ ನಾಯಕರಿಗಾಗಿಯೂ ಸಮುದಾಯಕ್ಕಾಗಿಯೂ ಬಹಳಷ್ಟು ದುಆ ಮಾಡುವ ಅವಶ್ಯಕತೆ ಇದೆ. ಫ್ರಾನ್ಸಿನಲ್ಲೂ ಮುಸ್ಲಿಮರನ್ನು ಗುರಿಪಡಿಸಲಾಗಿದೆ. ಮುಸ್ಲಿಮರ ಪ್ರತಿಕ್ರಿಯೆ ಕೂಡ ತಪ್ಪಾದ ರೀತಿಯಲ್ಲಿ ನಡೆಯುತ್ತಿವೆ. ಸೊತ್ತುಗಳನ್ನು ನಾಶ ಮಾಡುವುದರಿಂದ ಏನನ್ನೂ ಗಳಿಸಲಾಗದು. ಮುಸ್ಲಿಮರು ತಮ್ಮ ಕೃತ್ಯಗಳನ್ನು ಇಸ್ಲಾಮಿನ ಪಾಠಗಳ ಪ್ರಕಾರ ಮಾಡಬೇಕು. ಮುಸ್ಲಿಮರ ಮಾತು ಮತ್ತು ಕೃತಿ ಇಸ್ಲಾಮಿನ ಅಧ್ಯಾಪನೆಗಳ ಪ್ರಕಾರ ನಡೆದರೆ ಮಾತ್ರ ಯಶಸ್ಸು ಲಭಿಸುವುದು.

ಹೇಗಿದ್ದರೂ ನಮಗೆ ದುಆ ಮಾಡಲೇ ಸಾಧ್ಯ. ವಿಶೇಷವಾಗಿ ಮುಸ್ಲಿಮ್ ಲೋಕಕ್ಕಾಗಿ ಮತ್ತು ಪೂರ್ತಿ ಲೋಕಕ್ಕಾಗಿ ದುಆ ಮಾಡಿರಿ. ಅಲ್ಲಾಹನು ನಮ್ಮನ್ನು ಪ್ರತಿಯೊಂದು ಪಾಪದಿಂದ ದೂರ ಇರಿಸಲಿ. ಲೋಕದಲ್ಲಿ ಶಾಂತಿ ಸಮಾಧಾನದ ಸ್ಥಿತಿ ಉಂಟಾಗಲಿ. ಎಲ್ಲರೂ ಪರಸ್ಪರರ ಹಕ್ಕುಗಳನ್ನು ಈಡೇರಿಸುವುದರ ಪ್ರಾಮುಖ್ಯವನ್ನು ಅರಿಯುವವರಾಗಲಿ. ಇಲ್ಲದಿದ್ದರೆ ನಾನು ಅನೇಕ ಬಾರಿ ಹೇಳಿದಂತೆ ಲೋಕವು ಬಹಳ ದೊಡ್ಡ ನಾಶದ ಕಡೆಗೆ ಹೋಗುತ್ತಿದೆ. ಅಲ್ಲಾಹನು ಕರುಣೆದೋರಲಿ.

ಅದೇ ರೀತಿಯಲ್ಲಿ ಪಾಕಿಸ್ತಾನದ ಅಹ್ಮದಿಯರಿಗಾಗಿಯೂ ದುಆ ಮಾಡಿರಿ. ಅಲ್ಲಾಹನು ಅವರನ್ನು ಎಲ್ಲ ವಿಧ ಉಪದ್ರಗಳಿಂದ ರಕ್ಷಿಸಲಿ. ಫ್ರಾನ್ಸಿನಲ್ಲಿ ಹೇಳುವುದಕ್ಕೆ ಪ್ರತಿಭಟನೆಗಳೆಲ್ಲ ನಡೆಯುತ್ತಿವೆ. ವಧಿಸಲ್ಪಟ್ಟ ಹುಡುಗನ ಪರವಾಗಿ ಏನೆಲ್ಲ ನಡೆಯುತ್ತಿವೆ ಎಂದು ಭಾವಿಸಲಾಗುತ್ತಿದೆ. ಆದರೆ ಅಲ್ಲಿನ ಸಾರ್ವಜನಿಕರ ವರ್ತನೆ ಬಗ್ಗೆ ಕೇಳಿ ಬರುವುದೇನೆಂದರೆ, ವಧಿಸಲ್ಪಟ್ಟ ಹುಡುಗನಿಗಾಗಿಯೂ ಹಿಡಿಯಲ್ಪಟ್ಟ ಪೋಲೀಸಿಗಾಗಿಯೂ ಎತ್ತಲಾದ ಧನಸಹಾಯದಲ್ಲಿ ಹುಡುಗನಿಗಾಗಿ ಬಂದದ್ದು ಕೇವಲ ಎರಡು ಲಕ್ಷ ಯೂರೋ ಆಗಿದೆ. ಯಾರ ವಿರುದ್ಧ ಕಾರ್ಯಾಚರಣೆ ನಡೆಸಲಾಗುತ್ತಿದೆ ಎಂದು ಸರ್ಕಾರ ಹೇಳುತ್ತಿದೆಯೋ ಅವನ ಸಹಾಯಕ್ಕಾಗಿ ಒಂದು ಮಿಲಿಯನ್‌ಗಿಂತ ಹೆಚ್ಚಿನ ಯೂರೋ ಸಂಗ್ರಹಿಸಲ್ಪಟ್ಟಿದೆ. ಅಲ್ಲಾಹನೇ ಅವರ ಮೇಲೆ ಕೃಪೆದೋರಲಿ. ಜನರಿಗೆ ನೀತಿ ನ್ಯಾಯದ ಪ್ರಕಾರ ನಡೆಯಲು ಸೌಭಾಗ್ಯ ನೀಡಲಿ. ಮುಸ್ಲಿಮರು ಒಗ್ಗಟ್ಟಾಗಲು ಅಲ್ಲಾಹನು ಸೌಭಾಗ್ಯ ನೀಡಲಿ. ...*...*...*...

"ಖಡ್ಗಗಳಿಂದ ಪ್ರದೇಶಗಳನ್ನು ಜಯಿಸಬಹುದು ಆದರೆ ಹೃದಯಗಳನ್ನಲ್ಲ
ಬಲದಿಂದ ಶಿರಗಳನ್ನು ಬಾಗಿಸಬಹುದು ಆದರೆ ಮನಸ್ಸುಗಳನ್ನಲ್ಲ"
(ಹಝ್ರತ್ ಮಿರ್ಝಾ ತಾಹಿರ್ ಅಹ್ಮದ್ ಖಲೀಫತುಲ್ ಮಸೀಹ್ ರಾಬಿ(ರ))


ದುಆವಿನ ಆಕಾಂಕ್ಷಿ:
**M.B. Nasir Ahmed & Family, Bengaluru, Karnataka**



**ಇಸ್ಲಾಮ್ ಮತ್ತು ಅಹ್ಮದಿಯ್ಯತ್‌ನ ಮಾಹಿತಿಗಾಗಿ ನಮ್ಮನ್ನು ಸಂಪರ್ಕಿಸಿ:**
**NATIONAL TOLL FREE : 1800-103-2131**
**ಸಮಯ: ಬೆಳಿಗ್ಗೆ 08:30 ಯಿಂದ ರಾತ್ರಿ 10:30ಯವರೆಗೆ**
**(ಶುಕ್ರವಾರ ರಜೆ)**


Printed & Published by: Jameel Ahmed Nasir on behalf of Nigran Board of Badar. Name of Owner: Nigran Board of Badar. And printed at Fazle-Umar Printing Press. Harchowal Road, Qadian, Distt. Gurdaspur-143516, Punjab. And published at office of the Weekly Badar Mohallah - Ahmadiyya, Qadian Distt. Gsp-143516, Punjab. India. Editor: Tariq Ahmed Idris.